# 01-12-2020


## ಬ್ರಹ್ಮಪುತ್ರ ನದಿಗೆ ಚೀನಾದಿಂದ ಟಿಬೆಟ್‌ನಲ್ಲಿ ಬೃಹತ್ ಅಣೆಕಟ್ಟು ನಿರ್ಮಾಣ



ಟಿಬೆಟ್‌ನಲ್ಲಿ ಬ್ರಹ್ಮಪುತ್ರ ನದಿಗೆ ಬೃಹತ್ (ಅಣೆಕಟ್ಟು) ಜಲವಿದ್ಯುತ್ ಯೋಜನೆ ನಿರ್ಮಿಸಲು ಚೀನಾ ರಾಷ್ಟ್ರವು ಯೋಜನೆ ರೂಪಿಸಿದೆ. ಚೀನಾದ 14ನೇ ಪಂಚವಾರ್ಷಿಕ ಯೋಜನೆಯ ಮುಂದಿನ ವರ್ಷ(2021) ಅನುಷ್ಠಾನಕ್ಕೆ ಬರಲಿದ್ದು, ಈ ಯೋಜನೆಯ ಭಾಗವಾಗಿ ಚೀನಾ ಟಿಬೆಟ್ ನಲ್ಲಿ ಆಣೆಕಟ್ಟು ನಿರ್ಮಿಸಲು ಉದ್ದೇಶಿಸಿರುವುದಾಗಿ ಚೀನಾದ ವಿದ್ಯುತ್ ಯೋಜನೆ ನಿರ್ಮಾಣ ಸಂಸ್ಥೆಯ ಅಧ್ಯಕ್ಷ ಯಾನ್ ಝಿಯಾಂಗ್ ಮಾಹಿತಿ ನೀಡಿದ್ದಾರೆ. ಚೀನಾದ ಈ ಯೋಜನೆಯಿಂದಾಗಿ ಭಾರತ ಮತ್ತು ಬಾಂಗ್ಲಾದೇಶದ ಅನೇಕ ನದಿ ತೀರದ ರಾಜ್ಯಗಳಿಗೆ ಇದು ಅಪಾಯವುಂಟುಮಾಡುವ ಸಾಧ್ಯತೆ ಇದೆ. ಆದರೆ ನೆರೆಯ ದೇಶಗಳ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಯೋಜನೆ ರೂಪಿಸುತ್ತಿರುವುದಾಗಿ ಹೇಳಿರುವ ಚೀನಾ ಹೇಳಿಕೆ ನೀಡಿದೆ.

# ಬ್ರಹ್ಮಪುತ್ರ ನದಿಯನ್ನು ಚೀನಾದಲ್ಲಿ ಯರ್ಲುಂಗ್ ಝೂಂಗ್ಬೊ ಹೆಸರಿನಿಂದ ಕರೆಯುತ್ತಾರೆ.

## ಕರ್ನಾಟಕ ರಾಜ್ಯದ ಗ್ರಾಮ ಪಂಚಾಯ್ತಿಗಳ ಚುನಾವಣೆಗೆ ದಿನಾಂಕ ನಿಗದಿ




ಕರ್ನಾಟಕ ರಾಜ್ಯದ 30 ಜಿಲ್ಲೆಗಳ 5762 ಗ್ರಾಮ ಪಂಚಾಯ್ತಿಗಳಿಗೆ ಎರಡು ಹಂತದಲ್ಲಿ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗ ಘೋಷಣೆ ಮಾಡಿದೆ. ಹಾಗೂ ಅದರ ಜೊತೆಗೆ ಕೊರೋನಾ ಸೋಂಕಿನ ಭೀತಿಯ ಹಿನ್ನಲೆಯಲ್ಲಿ ಒಂದು ಸಾವಿರ ಮತದಾರರಿಗೆ ಒಂದು ಮತಗಟ್ಟೆ ಸ್ಥಾಪಿಸಲಾಗಿದೆ.

# ಡಿಸೆಂಬರ್ 22ರಂದು ಮೊದಲನೇ ಹಂತದಲ್ಲಿ 113 ತಾಲ್ಲೂಕುಗಳ 2,930 ಗ್ರಾಮ ಪಂಚಾಯ್ತಿಗಳಿಗೆ ಚುನಾವಣೆ ನಡೆಯಲಿದೆ.

#ಡಿಸೆಂಬರ್ 27,2020ರಂದು ಎರಡನೇ ಹಂತದಲ್ಲಿ 113 ತಾಲ್ಲೂಕುಗಳ 2,832 ಗ್ರಾಮ ಪಂಚಾಯ್ತಿಗಳಿಗೆ ಚುನಾವಣೆ ನಡೆಯಲಿದೆ.

# ರಾಜ್ಯದ 5762 ಗ್ರಾಮ ಪಂಚಾಯ್ತಿಗಳಿಗೆ 92,121 ಸದಸ್ಯರ ಆಯ್ಕೆಗಾಗಿ ಎರಡು ಹಂತದಲ್ಲಿ ಈ ಬಾರಿ ಚುನಾವಣೆ ನಡೆಯಲಿದೆ.

# ಇದೇ ಮೊದಲ ಬಾರಿಗೆ ಬೀದರ್ ಜಿಲ್ಲೆಯಲ್ಲಿ ಎಲೆಕ್ಟ್ರಾನಿಕ್ ಮತಯಂತ್ರಗಳನ್ನು ಬಳಸಿಕೊಂಡು ಚುನಾವಣೆ ನಡೆಸಲಿದೆ ಎಂದು ರಾಜ್ಯ ಚುನಾವಣಾ ಆಯುಕ್ತ ಬಸವರಾಜ್ ಮಾಹಿತಿ ನೀಡಿದ್ದಾರೆ.

## ನವೆಂಬರ್ 30 = ಗುರುನಾನಕ ಜಯಂತಿ



ಸಿಖ್ ಧರ್ಮ ಸ್ಥಾಪಕರು ಹಾಗು ಧರ್ಮ ಗುರುಗಳು ಆದ ಗುರುನಾನಕ್ ಅವರ ಜನ್ಮ ದಿನವನ್ನು ಪ್ರಕಾಶ್ ಉತ್ಸವ ಮತ್ತು ಗುರುನಾನಕ್ ದೇವ್ ಜಿ ಜಯಂತಿ ಎಂದೂ ಸಿಖ್ ಧರ್ಮಿಯರು ಹಾಗೂ ದೇಶ್ಯಾದ್ಯಂತ ಆಚರಿಸುತ್ತಾರೆ. ಸಿಖ್ ಸಮುದಾಯದ ಜನರು ಇವರನ್ನು ಅತಿ ಹೆಚ್ಚು ಆರಾಧಿಸುತ್ತಾರೆ.

# ಗುರು ನಾನಕ್ ಅವರು 1469ರ ಕಾರ್ತಿಕ ಪೌರ್ಣಮಿಯ ದಿನ ಪಂಜಾಬ ಪ್ರಾಂತ್ಯದ ತಳವಂಡಿ ಎಂಬಲ್ಲಿ ಕಲ್ಯಾಣದಾಸ್ ತೃಪ್ತಾ ದಂಪತಿಗೆ ಜನಿಸಿದರು.

# ಸಂಗೀತ, ಕವನ, ಹಾಡಿನ ಮೂಲಕ ಭಗವಂತನ ಸಂದೇಶವನ್ನು ಊರೂರಿಗೆ ಸಾರಿದರು.

#ಮಹಿಳಾಪ್ರಧಾನ ಕುಟುಂಬ ವ್ಯವಸ್ಥೆಯನ್ನು ರೂಪಿಸಿ, ಲಿಂಗ ಅಸಮಾನತೆ ಹೋಗಲಾಡಿಸಲು ಶ್ರಮಿಸಿದರು.

# 02-12-2020

## ಲಂಡನ್ ಬೀದಿಗೆ ಸಂತ ಗುರು ನಾನಕರ ಹೆಸರು




ಪಶ್ಚಿಮ ಲಂಡನ್ ನ ಹೆವ್ಲೊಕ್ ರಸ್ತೆಗೆ ಭಾರತೀಯ ಸಂತ ಗುರು ನಾನಕ್ ಅವರ ಹೆಸರಿಡಲು ತೀರ್ಮಾನಿಸಲಾಗಿದ್ದು, ಶೀಘ್ರದಲ್ಲೇ ರಸ್ತೆಗೆ ಮರುನಾಮಕರಣ ನಡೆಯಲಿದೆ. ಇತ್ತೀಚಿಗೆ ನಡೆದ ಗುರುನಾನಕ ಅವರ ಜಯಂತಿಯ ದಿನ ಎಲ್ಲಿಂಗ್ ಕೌನ್ಸಿಲ್ ನ ಅಧಿಕಾರಿಗಳು ಈ ಕುರಿತು ಮಾಹಿತಿ ನೀಡಿದ್ದಾರೆ.

# ಪ್ರಸ್ತುತ ಈ ರಸ್ತೆಗೆ ಹೆನ್ರಿ ವೆವ್ಲೊಕ್ ಅವರ ಹೆಸರಿದ್ದು, ಇವರು 1857 ರ ಭಾರತೀಯ ದಂಗೆಯಲ್ಲಿ ಬ್ರಿಟಿಷ್ ಸೇನೆಯ ಜನರಲ್ ಆಗಿದ್ದರು. ಬಳಿಕ 2021 ರಲ್ಲಿ ಅಧಿಕೃತವಾಗಿ ಈ ರಸ್ತೆಗೆ ಗುರುನಾನಕ ಅವರ ಹೆಸರಿನ ಮರು ನಾಮಕರಣ ನಡೆಯಲಿದೆ.

# ಲಂಡನ್ ನಗರದ ಈ ಪ್ರದೇಶದಲ್ಲಿ ಅತಿ ಹೆಚ್ಚು ಸಿಖ್ ಧರ್ಮಿಯ ಜನಸಂಖ್ಯೆ ಇದ್ದು, ಈ ವರ್ಷ ನಡೆದ "ದ ಬ್ಲ್ಯಾಕ್ ಲೈವ್ಸ್ ಮ್ಯಾಟರ್" ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪವಾಗಿತ್ತು.

## ಹಡಗು ನಿರೋಧಕ ಬ್ರಹ್ಮೋಸ್ ಕ್ಷಿಪಣಿ ಪರೀಕ್ಷೆ ಯಶಸ್ವಿ



ಭಾರತೀಯ ನೌಕಾಪಡೆಯ ಪರೀಕ್ಷಾರ್ಥ ಪ್ರಯೋಗಗಳ ಭಾಗವಾಗಿ 'ಹಡಗು ನಿರೋಧಕ ಬ್ರಹ್ಮೋಸ್' ಕ್ಷಿಪಣಿ ಪರೀಕ್ಷೆಯನ್ನು ಭಾರತದ ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಮಂಗಳವಾರ ಯಶಸ್ವಿಯಾಗಿ ಪೂರೈಸಲಾಗಿದೆ.

# ಇತ್ತೀಚಿಗಷ್ಟೇ ಭೂಮಿ ಮೇಲೆ ದಾಳಿ ನಡೆಸಬಲ್ಲ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಯ ಪರೀಕ್ಷೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ.

# ಬ್ರಹ್ಮೋಸ್ ಸೂಪರ್ ಸಾನಿಕ್ ಕ್ರೂಸ್ ಮಿಸೈಲ್ ಜಗತ್ತಿನಲ್ಲೇ ಅತ್ಯಂತ ವೇಗದ ಆಪರೇಷನಲ್ ಸಿಸ್ಟಮ್ ಹೊಂದಿರುವಂಥದ್ದಾಗಿದೆ. 298 ಕಿ.ಮೀ.ನಿಂದ 450 ಕಿ.ಮೀ. ತನಕದ ಗುರಿ ತಲುಪುವ ಸಾಮರ್ಥ್ಯವನ್ನು ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಯ ಹೊಂದಿದೆ.

# ಡಿಆರ್‌ಡಿಒ ಅಭಿವೃದ್ಧಿ ಪಡಿಸಿದ ಹಲವು ಕ್ಷಿಪಣಿಗಳನ್ನು ಭಾರತೀಯ ಸೇನೆ ಪರೀಕ್ಷಾ ಪ್ರಯೋಗವನ್ನು ನೆರವೇರಿಸಿದ್ದು, ಇದೀಗ 400 ಕಿ.ಮೀ. ದೂರಕ್ಕೆ ಬ್ರಹ್ಮೋಸ್ ಕ್ಷಿಪಣಿಯ ದಾಳಿ ಗುರಿಯನ್ನು ವಿಸ್ತರಿಸಲಾಗಿದೆ.

## ಮುದ್ರಾ ಯೋಜನೆಯಡಿ ಸಾಲಪಡೆಯುವಲ್ಲಿ ದೇಶದಲ್ಲಿ ಕರ್ನಾಟಕ ನಂಬರ್ 1




ಕರ್ನಾಟಕ ರಾಜ್ಯ 'ಪ್ರಧಾನ ಮಂತ್ರಿ ಮುದ್ರಾ ಯೋಜನೆ (ಪಿಎಂಎಂವೈ)' ಯಡಿ ಸಾಲ ಪಡೆದಿರುವದರಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ರಾಜಸ್ಥಾನ ಮತ್ತು ಉತ್ತರ ಪ್ರದೇಶ ರಾಜ್ಯಗಳು ನಂತರದ ಸ್ಥಾನದಲ್ಲಿವೆ.

# ಚಿಕ್ಕ/ಸೂಕ್ಷ್ಮ ಉದ್ಯಮಕ್ಕಾಗಿ 10 ಲಕ್ಷದಷ್ಟು ಸಾಲ ಸೌಲಭ್ಯವನ್ನು ನೀಡಲಾಗುತ್ತದೆ.

# ಸೆಪ್ಟೆಂಬರ್ 18ರ ತನಕ ಕರ್ನಾಟಕ 6,906.12 ಕೋಟಿ ರೂ.

# ರಾಜಸ್ಥಾನ 6,405,.69 ಕೋಟಿ ರೂ.

# ಉತ್ತರ ಪ್ರದೇಶ ರಾಜ್ಯ 6,068.23 ಕೋಟಿ ರೂ.

# ಮಹಾರಾಷ್ಟ್ರ 5,153.62 ಕೋಟಿ ರೂ.

ಇನ್ನು ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆ ಮುದ್ರಾ ಯೋಜನೆಯಡಿ ಸಾಲ ಪಡೆದವರ ಪೈಕಿ ಮೊದಲ ಸ್ಥಾನದಲ್ಲಿದೆ. 77,989 ಜನರು ಜಿಲ್ಲೆಯಲ್ಲಿ ಸಾಲ ಪಡೆದಿದ್ದಾರೆ.

# 03-12-2020

## IIHR ಹೆಸರಘಟ್ಟದಲ್ಲಿ "ತೋಟಗಾರಿಕಾ ಮೇಳಕ್ಕೆ" ದಿನಾಂಕ ನಿಗದಿ



ಇದೆ 2021 ರ ಫೆಬ್ರುವರಿ 08 ರಿಂದ 12 ರವರೆಗೆ "ತೋಟಗಾರಿಕಾ ಮೇಳ" ನಡೆಸಲು ರಾಜ್ಯ ರಾಜಧಾನಿ ಬೆಂಗಳೂರಿನ ಸಮೀಪ ಇರುವ ಹೆಸರಘಟ್ಟದ ರಾಷ್ಟ್ರೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (IIHR) ಅಧಿಕೃತವಾಗಿ ತಿಳಿಸಿದೆ. ಈ ಬಾರಿ ನಡೆಸುವ "ತೋಟಗಾರಿಕಾ ಮೇಳದ" ಘೋಷ್ಯವಾಕ್ಯ "ಸ್ಟಾರ್ಟ್ ಅಪ್ ಆಂಡ್ ಸ್ಟ್ಯಾಂಡ್ ಅಫ್ ಇಂಡಿಯಾಗೆ ತೋಟಗಾರಿಕೆ" ಈ ಬಾರಿಯ ತೋಟಗಾರಿಕಾ ಮೇಳದಲ್ಲಿ ಬಿಡುಗಡೆಯಾಗಲಿರುವ ಹೊಸ ತಳಿ ಹಾಗೂ ತಂತ್ರಜ್ಞಾನಗಳ ವಿವರಗಳು :

# ಸೀಬೆಯಲ್ಲಿ ಹೊಸ ತಳಿ : "ಅರ್ಕ ಪೂರ್ಣ"

# ಮೆಣಸಿನಕಾಯಿಯಲ್ಲಿ ಎಲೆ ಸುರುಳಿ ರೋಗ ನಿರೋಧಕ ಶಕ್ತಿ ಇರುವ ಹೈಬ್ರಿಡ್ "ಅರ್ಕ ಗಗನ್"

# ಐಸ್ ಬಾಕ್ಸ್ ಪ್ರಕಾರದ ಕಲ್ಲಂಗಡಿ ತಳಿ : "ಅರ್ಕ ಶ್ಯಾಮ"

# ಹಣ್ಣು ತರಕಾರಿ ತೊಳೆಯುವ ರಾಸಾಯನಿಕ ಮುಕ್ತವಾದ ಉತ್ಪನ್ನ "ಅರ್ಕ ಹರ್ಬಿ ವಾಶ್"

## ಚೀನಾದಿಂದ ಎದುರಾಗುವ ನೀರಿನ ಅಪಾಯ ತಡೆಯಲು ಬ್ರಹ್ಮಪುತ್ರ ನದಿಗೆ ಭಾರತದಿಂದ ಡ್ಯಾಂ




ಚೀನಾ ದೇಶವು ಇತ್ತೀಚಿಗಷ್ಟೇ ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ 60 (GW) ಗಿಗಾವ್ಯಾಟ್ ಸಾಮರ್ಥ್ಯದ ಜಲವಿದ್ಯುತ್ ಘಟಕ ನಿರ್ಮಿಸಲು ಮುಂದಾರುವ ಕುರಿತು ಘೋಷಿಸಿದ ಬೆನ್ನಲ್ಲೇ, ಭಾರತ ಸರ್ಕಾರವು ಕೂಡ ಅರುಣಾಚಲ ಪ್ರದೇಶದಲ್ಲಿ 10 (GW) ಗಿಗಾವ್ಯಾಟ್ ಸಾಮರ್ಥ್ಯದ ಜಲವಿದ್ಯುತ್ ಸ್ಥಾವರ ನಿರ್ಮಿಸಲು ಚಿಂತನೆ ನಡೆಸಿರುವುದಾಗಿ ತಿಳಿದು ಬಂದಿದೆ. ಚೀನಾದ ಅಣೆಕಟ್ಟು ಯೋಜನೆಗಳಿಂದ ಭಾರತದಲ್ಲಿ ದಿಢೀರ್ ಪ್ರವಾಹ ಅಥವಾ ನೀರಿನ ಕೃತಕ ಅಭಾವ ಸೃಷ್ಟಿಯಾಗುವ ಸಾಧ್ಯತೆಗಳಿರುವ ಕಾರಣ ಭಾರತ ಸರ್ಕಾರವು ಈ ಯೋಜನೆಗೆ ಮುಂದಾಗಿರುವ ಕುರಿತು ಕೇಂದ್ರ ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿ ಟಿ.ಎಸ್. ಮೆಹ್ರಾ ಮಾಹಿತಿ ನೀಡಿದ್ದಾರೆ.

# ಬ್ರಹ್ಮಪುತ್ರ ನದಿಯನ್ನು ಚೀನಾದಲ್ಲಿ ಯಾರ್ಲುಂಗ್ ಜಾಂಗ್ಬೋ ಎಂದು ಕರೆಯಲಾಗುತ್ತದೆ

# ಬ್ರಹ್ಮಪುತ್ರ ನದಿ ಟಿಬೆಟ್‌ನಿಂದ ಅರುಣಾಚಲ ಪ್ರದೇಶ, ಮತ್ತು ಅಸ್ಸಾಂನಿಂದ ಬಾಂಗ್ಲಾದೇಶದ ವರೆಗೆ ಹರಿಯುತ್ತದೆ.

## ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಗಣರಾಜ್ಯೋತ್ಸವಕ್ಕೆ ಅತಿಥಿಯಾಗಿ ಆಗಮಿಸುವ ನಿರೀಕ್ಷೆ



ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚಿಗೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರಿಗೆ ದೂರವಾಣಿ ಕರೆ ಮೂಲಕ ಜನವರಿ 26ರ 2021ರಂದು ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸುವಂತೆ ಆಹ್ವಾನ ನೀಡಿದರು.

# ಇದೆ ವೇಳೆ ಬ್ರಿಟನ್‌ನಲ್ಲಿ ಮುಂದಿನ ವರ್ಷ ನಡೆಯಲಿರುವ ಜಿ 7 ಶೃಂಗಸಭೆಗೆ ಮೋದಿಯನ್ನು ಬೋರಿಸ್ ಜಾನ್ಸನ್ ಆಹ್ವಾನ ನೀಡಿದರು.

# ಈ ಮೊದಲು ಬ್ರಿಟನ್ ಪ್ರಧಾನಿ ಜಾನ್ ಮೇಜರ್ ಅವರು 1993ರಲ್ಲಿ ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಪಾಲ್ಗೊಂಡಿದ್ದರು. ಬ್ರಿಟನ್ ಈಗಷ್ಟೇ ಐರೋಪಿಯನ್ ಒಕ್ಕೂಟದಿಂದ ಹೊರಬಂದಿದ್ದು, ಜಗತ್ತಿನ ಎಲ್ಲ ದೇಶಗಳ ಜತೆಗೆ ಹೊಸದಾಗಿ ಒಪ್ಪಂದಗಳನ್ನು ಮಾಡಿಕೊಳ್ಳಲು ಎದುರು ನೋಡುತ್ತಿದೆ.


## ಸಚಿನ್ ತೆಂಡೂಲ್ಕರ ದಾಖಲೆ ಹಿಂದಿಕ್ಕಿದ ವಿರಾಟ್ ಕೊಹ್ಲಿ



ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿಯವರು 50 ಓವರ್ ಮಾದರಿಯ ಕ್ರಿಕೆಟ್‌ನಲ್ಲಿ ವೇಗವಾಗಿ 12 ಸಾವಿರ ರನ್ ಪೂರೈಸುವ ಮೂಲಕ ವಿಶ್ವದಾಖಲೆ ಬರೆದರು. ಕೊಹ್ಲಿ ತಮ್ಮ 251ನೇ ಪಂದ್ಯದಲ್ಲಿ 12 ಸಾವಿರ ರನ್ ಪೂರೈಸಲು ಯಶಸ್ವಿಯಾದರು. ಅಲ್ಲದೆ ವಿಶ್ವ ಕ್ರಿಕೆಟ್ ದಂತಕತೆ ಎನಿಸಿರುವ ಸಚಿನ್ ತೆಂಡುಲ್ಕರ್‌ರ ದಾಖಲೆಯನ್ನು ಹಿಂದಿಕ್ಕಿದರು. ವೇಗವಾಗಿ 12,000 ಏಕದಿನ ರನ್ ಪೂರೈಸಿದ ಸಾಧಕರು:

# ವಿರಾಟ್ ಕೊಹ್ಲಿ 251 ಪಂದ್ಯಗಳಲ್ಲಿ 43 ಶತಕಗಳು ಹಾಗೂ 59 ಅರ್ಧಶತಕ
# ಸಚಿನ್ ತೆಂಡುಲ್ಕರ್ 309 ಪಂದ್ಯಗಳು
# ರಿಕಿ ಪಾಂಟಿಂಗ್ 323 ಪಂದ್ಯಗಳು
# ಕುಮಾರ ಸಂಗಕ್ಕರ 359 ಪಂದ್ಯಗಳು
# ಸನತ್ ಜಯಸೂರ್ಯ 390 ಪಂದ್ಯಗಳು

## ಚೀನಾ ಚಂದ್ರನ ಮಾದರಿ ಸಂಗ್ರಹಿಸಲು ಕಳಿಸಿದ ಚಾಂಗ್ 5 ಯಶಸ್ವಿ



ಚಂದ್ರನ ಅಧ್ಯಯನಕ್ಕಾಗಿ ಚೀನಾ ರಾಷ್ಟ್ರವು ಚಂದ್ರನ ಮೇಲ್ಮೈಯಿಂದ ಮಾದರಿಗಳನ್ನು ಪಡೆಯುವ ಸಲುವಾಗಿ ಚಾಂಗ್ 5 ಎಂಬ ಹೆಸರಿನ ಚಂದ್ರಯಾನವನ್ನು ನಡೆಸಿತ್ತು, ಇದೀಗ ಈ ಯೋಜನೆ ಯಶಸ್ವಿಯಾಗಿದ್ದು, ಚೀನಾದ ಬಾಹ್ಯಾಕಾಶ ಸಂಸ್ಥೆಯ ಚಾಂಗ್ 5 ಚಂದ್ರನ ಮೇಲ್ಮೈಗೆ ಯಶಸ್ವಿಯಾಗಿ ಇಳಿದಿದೆ.

# 'ಓಷನ್ ಆಫ್ ಸ್ಟಾರ್ಮ್ಸ್' ಎಂದು ಕರೆಯಲ್ಪಡುವ ಬೃಹತ್ ಲಾವಾ ಬಯಲಿನಲ್ಲಿ ಚಂದ್ರನ ಮಾದರಿಗಳನ್ನು ಸಂಗ್ರಹಿಸಲು ಚೀನಾ ದೇಶವು ನವೆಂಬರ್ 24ರಂದು ಚಂದ್ರಯಾನದ ಪ್ರಕ್ರಿಯೆಯನ್ನು ಆರಂಭಿಸಲಾಗಿತ್ತು.
# ಚೀನಾ ತನ್ನ ಮೊದಲ ಚಂದ್ರಯಾನವನ್ನು 2013 ರಲ್ಲಿ ಮಾಡಿದೆ.
# 2019ರ ಜನವರಿಯಲ್ಲಿ, ಚಾಂಗ್ 4 ಚಂದ್ರನ ದೂರದ ಭಾಗ ತಲುಪಿತ್ತು.
# ಅಮೆರಿಕ ಮತ್ತು ಸೋವಿಯತ್ ಒಕ್ಕೂಟದ ನಂತರ ಚಂದ್ರನ ಮಾದರಿಗಳನ್ನು ಪಡೆಯುವ ಮೂರನೇ ರಾಷ್ಟ್ರವಾಗಿ ಚೀನಾ ಹೊರಹೊಮ್ಮಿದೆ.

## ರಾಜ್ಯದ ಮೊದಲ ತ್ಯಾಜ್ಯ ವಿದ್ಯುತ್ ಉತ್ಪಾದನಾ ಘಟಕಕ್ಕೆ ಶಂಕುಸ್ಥಾಪನೆ



ಕರ್ನಾಟಕ ರಾಜ್ಯದ ಮೊದಲ ತ್ಯಾಜ್ಯ ವಿದ್ಯುತ್ ಉತ್ಪಾದನಾ ಘಟಕವನ್ನು ರಾಮನಗರ ಜಿಲ್ಲೆಯ ಬಿಡದಿಯಲ್ಲಿ ಸ್ಥಾಪಿಸಲು ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ವರ್ಚುವಲ್ ಕಾರ್ಯಕ್ರಮದ ಮೂಲಕ ಶಿಲಾನ್ಯಾಸ ನೆರವೇರಿಸಿದರು. ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಮಾಡುವ ನಿಟ್ಟಿನಲ್ಲಿ ತ್ಯಾಜ್ಯ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಘಟಕ ಸ್ಥಾಪನೆಗಾಗಿ 260 ಕೋಟಿ ರೂ. ವೆಚ್ಚವಾಗಲಿದ್ದು, ಕರ್ನಾಟಕ ವಿದ್ಯುತ್ ನಿಗಮ ಹಾಗೂ ಬಿಬಿಎಂಪಿಯವರು ತಲಾ 130 ಕೋಟಿ ರೂ. ವೆಚ್ಚ ಭರಿಸಲಿದ್ದಾರೆ. ಮುಂದಿನ ಎರಡು ವರ್ಷಗಳಲ್ಲಿ ಈ ಘಟಕದ ನಿರ್ಮಾಣ ಪೂರ್ಣಗೊಳ್ಳಲಿದೆ.

# ಬೆಂಗಳೂರಿನಲ್ಲಿ ಪ್ರತಿದಿನ 5000 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ.
# ಈ ಘಟಕದಲ್ಲಿ ದಿನಕ್ಕೆ 600 ಟನ್ ಸಂಸ್ಕರಿತ ತ್ಯಾಜ್ಯ ಬಳಸಿ, 11.5 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಗುರಿ ಹೊಂದಲಾಗಿದೆ.

## ಪ್ರಧಾನಿ ಮೋದಿ ಅವರಿಂದ ವಿಶ್ವದ ಅತಿ ದೊಡ್ಡ ಸೌರಶಕ್ತಿ, ಪವನ ಶಕ್ತಿ ಪಾರ್ಕ್ ಗೆ ಚಾಲನೆ



ಗುಜರಾತ್ ನ ಕಛ್ ನಲ್ಲಿ ಸ್ಥಾಪಿಸಲಾಗಿರುವ ಜಗತ್ತಿನ ಅತಿ ದೊಡ್ಡ ಸೌರ ಶಕ್ತಿ ಹಾಗು ಪವನಶಕ್ತಿಯ ಪಾರ್ಕ್ನ್ ನ್ನು ಇದೇ ಡಿಸೆಂಬರ್ 15 ರಂದು ಪ್ರಧಾನಿ ನರೇಂದ್ರ ಮೋದಿಯವರು ಲೋಕಾರ್ಪಣೆ

ಮಾಡಲಿದ್ದಾರೆ.
# ಈ ಸೌರಶಕ್ತಿ ಪಾರ್ಕ್ 30 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ವಿಶ್ವದ ಅತಿ ದೊಡ್ಡ ಸೌರಶಕ್ತಿ ಹಾಗೂ ಪವನ ಶಕ್ತಿ ಪಾರ್ಕ್ ಇದಾಗಿದೆ.

### ದೇಶದ 10 ಉತ್ತಮ 'ಪೊಲೀಸ್ ಠಾಣೆ'ಗಳ ಪಟ್ಟಿ ಬಿಡುಗಡೆ: ಮಣಿಪುರಕ್ಕೆ ಮೊದಲ ಸ್ಥಾನ




# ಸೇವಾ ದೃಷ್ಟಿಯಿಂದ ಅತ್ಯುತ್ತಮವಾಗಿರುವ ದೇಶದ 10 ಉತ್ತಮ ಪೊಲೀಸ್ ಠಾಣೆಗಳ ಪಟ್ಟಿಯನ್ನು ಕೇಂದ್ರ ಸರ್ಕಾರ ಇತ್ತೀಚಿಗೆ ಬಿಡುಗಡೆ ಮಾಡಿದೆ.
# ಕೇಂದ್ರ ಸರ್ಕಾರ ಸಚಿವಾಲಯ ಬಿಡುಗಡೆ ಮಾಡಿರೋ 10 ಉತ್ತಮ ಪೊಲೀಸ್ ಠಾಣೆಗಳ ಪಟ್ಟಿಯಲ್ಲಿ ಕರ್ನಾಟಕದ ಯಾವ ಪೊಲೀಸ್ ಠಾಣೆಯೂ ಸ್ಥಾನಗಳಿಸಿಲ್ಲ ಅನ್ನೋದು ವಿಪರ್ಯಾಸ. ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ 2020ರ ಉತ್ತಮ ಪೊಲೀಸ್ ಠಾಣೆಗಳ 10 ಪಟ್ಟಿ. 1 ನಾಂಗ್‌ಪೋಕ್ ಸೆಕ್ಮೈ ಮಣಿಪುರ(ಥೌಬಲ್ ಜಿಲ್ಲೆ) 2 ಎಡಬ್ಲ್ಯೂಪಿಎಸ್ ಸುರಮಂಗಲಂ ತಮಿಳುನಾಡು(ಸೇಲಂ ಜಿಲ್ಲೆ) 3 ಖರ್ಸಾಂಗ್ ಅರುಣಾಚಲ ಪ್ರದೇಶ(ಚಾಂಗ್ಲಾಂಗ್ ಜಿಲ್ಲೆ) 4 ಜಿಲ್ಮಿಲಿ ಚತ್ತೀಸ್‌ಗಢ(ಬಯ್ಯಾ ಟಾಪ್ ಥಾನಾ) 5 ಸಾಂಗುಮ್ ಗೋವಾ 6 ಕಾಲಿಘಾಟ್ ಅಂಡಮಾನ್ ಮತ್ತು ನಿಕೋಬಾರ್ ದ್ವೀಪ 7 ಪಾಕ್ಯಾಂಗ್ ಸಿಕ್ಕಿಂ 8 ಕಾಂತ್ ಉತ್ತರಪ್ರದೇಶ(ಮೊರಾದಾಬಾದ್ ಜಿಲ್ಲೆ) 9 ಖಾನ್ವೆಲ್ ದಾದರ್ 10 ಜಮ್ಮಿಕುಂಟಾ ತೆಲಂಗಾಣ(ಕರೀಂನಗರತರ ಜಿಲ್ಲೆ)

## 04-12-2020

### ಪದ್ಮವಿಭೂಷಣ ಹಿಂದಿರುಗಿಸಿದ ಪ್ರಕಾಶ್ ಸಿಂಗ್ ಬಾದಲ್



# ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್ ರೈತರ ಪ್ರತಿಭಟನೆಯನ್ನು ಬೆಂಬಲಿಸಿ ತಮ್ಮ ಪದ್ಮವಿಭೂಷಣ ಪ್ರಶಸ್ತಿಯನ್ನು ಕೇಂದ್ರ ಸರ್ಕಾರಕ್ಕೆ ಮರಳಿಸಿದ್ದಾರೆ.
# ಇದಲ್ಲದೆ ಇನ್ನು ಸುಮಾರು 30ಕ್ಕೂ ಹೆಚ್ಚು ಕ್ರೀಡಾಪಟುಗಳು ಪಂಜಾಬ್‌ನ ರೈತರ ಹೋರಾಟಕ್ಕಾಗಿ ಕೇಂದ್ರ ಸರ್ಕಾರದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಹಿಂತಿರುಗಿಸುವ ಮೂಲಕ ರೈತರಿಗೆ ಬೆಂಬಲ ಸೂಚಿಸಿದ್ದಾರೆ.
# ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ಕೃಷಿ ಮಸೂದೆಯನ್ನು ಬಿಜೆಪಿ ಮೈತ್ರಿ ಪಕ್ಷ ಅಕಾಲಿದಳ ತೀವ್ರವಾಗಿ ವಿರೋಧಿಸಿತ್ತು.
# ಕೇಂದ್ರದ ಈ ಮಸೂದೆಗೆ ಪಂಜಾಬ್, ಹರಿಯಾಣ ಸೇರಿದಂತೆ ದೇಶದ ನಾನಾ ಭಾಗದ ರೈತರು ತೀವ್ರವಾಗಿ ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

### ಡಿಸೆಂಬರ್ 04 = ನೌಕಾಪಡೆ ದಿನ ಆಚರಣೆ




# ಭಾರತದಲ್ಲಿ ನೌಕಾಪಡೆಯ ದಿನವನ್ನು ಪ್ರತಿ ವರ್ಷ ಡಿಸೆಂಬರ್ 4 ರಂದು ಆಚರಿಸಲಾಗುತ್ತದೆ. 1971 ರ ಡಿಸೆಂಬರ್ 4 ರಂದು ಆಪರೇಷನ್ ಟ್ರೈಡೆಂಟ್ ಸಮಯದಲ್ಲಿ, ಭಾರತೀಯ ನೌಕಾಪಡೆ ಪಿಎನ್‌ಎಸ್ ಖೈಬರ್ ಸೇರಿದಂತೆ ನಾಲ್ಕು ಪಾಕಿಸ್ತಾನಿ ಹಡಗುಗಳನ್ನು ಮುಳುಗಿಸಿ ನೂರಾರು ಪಾಕಿಸ್ತಾನಿ ನೌಕಾಪಡೆಯ ಸಿಬ್ಬಂದಿಯನ್ನು ಕೊಂದಿತು.
# ರಾಷ್ಟ್ರಪತಿ ರಾಮನಾಥ್ ಕೋವಿಂದ್, ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಹಲವರು ನೌಕಾಪಡೆ ದಿನದ ಶುಭಾಶಯ ತಿಳಿಸಿದ್ದಾರೆ.

## 06-12-2020

### ರೋಶನಿ ನಾಡಾರ್ ದೇಶದ ಸಿರಿವಂತ ಮಹಿಳೆ



# ಹುರುನ್ ಇಂಡಿಯಾ ಮತ್ತು ಕೋಟಕ್ ವೆಲ್ತ್ ಜಂಟಿಯಾಗಿ ಭಾರತದ ಸಿರಿವಂತ ಮಹಿಳೆಯರ ಪಟ್ಟಿ ಬಿಡುಗಡೆ ಮಾಡಿವೆ. ಇದರಲ್ಲಿ 31 ಮಹಿಳೆಯರು ಕನಿಷ್ಠ ₹ 100 ಕೋಟಿ ನಿವ್ವಳ ಸಂಪತ್ತು ಮೌಲ್ಯ ಹೊಂದಿದ್ದಾರೆ.

# ಎಚ್‌ಸಿಎಲ್(HCL) ಟೆಕ್ನಾಲಜೀಸ್‌ನ ಅಧ್ಯಕ್ಷೆ ರೋಶನಿ ನಾಡಾರ್ ಮಲ್ಹೋತ್ರಾ ಅವರು ದೇಶದ 100 ಸಿರಿವಂತ ಮಹಿಳೆಯರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ಇವರ ನಿವ್ವಳ ಸಂಪತ್ತಿನ ಮೌಲ್ಯ ₹ 54,850 ಕೋಟಿ ಇದೆ.

# ಎರಡನೇ ಸ್ಥಾನದಲ್ಲಿ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ, ಅವರ ನಿವ್ವಳ ಸಂಪತ್ತು ಮೌಲ್ಯ ₹ 36,600ಕೋಟಿ.


## ವಾರ್ಕಿ ಫೌಂಡೇಷನ್ ನಿಂದ 7.5 ಕೋಟಿ ಪ್ರಶಸ್ತಿ ಗೆದ್ದ ಮಹಾರಾಷ್ಟ್ರ ಶಿಕ್ಷಕ.




# 2014ರಲ್ಲಿ ಸ್ಥಾಪನೆಗೊಂಡ ಲಂಡನ್ ವಾರ್ಕಿ ಫೌಂಡೇಷನ್ ನೀಡುವ ಜಾಗತಿಕ ಪ್ರಶಸ್ತಿ ಈ ಬಾರಿ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಪರಿಟೆವಾಡಿ ಪ್ರಾಥಮಿಕ ಶಾಲೆಯ ಶಿಕ್ಷಕ ರಣಜಿತ್‌ಸಿನ್ಹಾ ದಿಸಾಲೆ ಪಡೆದುಕೊಂಡಿದ್ದಾರೆ. ಇವರು ಈ ಪ್ರಶಸ್ತಿಗೆ ಪಾತ್ರರಾಗುವ ಮೂಲಕ 7.5 ಕೋಟಿ ರೂ.ಗಳನ್ನು ಪ್ರಶಸ್ತಿ ರೂಪದಲ್ಲಿ ಪಡೆದುಕೊಂಡಿದ್ದಾರೆ.

# ಗ್ರಾಮೀಣ ಪ್ರದೇಶಗಳಲ್ಲೂ ಕ್ಯು ಆರ್ ಕೋಡ್ ಮೂಲಕ ಸುಲಭ ರೀತಿಯಲ್ಲಿ ಪಠ್ಯಗಳನ್ನು ಪರಿಚಯಿಸಿದರು ವಿಡಿಯೋ ಪಾಠ, ಆಡಿಯೋ ಗೀತೆ, ಮಕ್ಕಳಿಗೆ ಇಷ್ಟವಾಗುವಂತಹ ಕಥೆಯನ್ನು ಇದರಲ್ಲಿ ಅಳವಡಿಸಿದ್ದರು. ಈ ಪಠ್ಯವನ್ನು ಮಹಾರಾಷ್ಟ್ರ ಸರ್ಕಾರ ಪ್ರಾಥಮಿಕ ಶಾಲಾ ಹಂತದಲ್ಲಿ ಬಳಸಿಕೊಳ್ಳಲು ಅನುಮತಿ ನೀಡಿತ್ತು. ಹಾಗೂ ಹೆಣ್ಣು ಮಕ್ಕಳಿಗೆ ಕಡ್ಡಾಯ ಶಿಕ್ಷಣ ಸಿಗಬೇಕೆಂದು ಹೋರಾಟ ನಡೆಸಿದ ಖ್ಯಾತಿ ಶಿಕ್ಷಕ ರಣಜಿತ್‌ಸಿನ್ಹಾ ದಿಸಾಲೆ ಹೊಂದಿದ್ದಾರೆ.

## ಚಂದ್ರನ ಮೇಲೆ ರಾಷ್ಟ್ರಧ್ವಜ ಹಾರಿಸಿದ ಎರಡನೇ ದೇಶವಾಗಿ : ಚೀನಾ



ಚಂದ್ರನ ಮೇಲೆ ಇದೇ ಮೊದಲ ಬಾರಿಗೆ ಚೀನಾ ಇಳಿದು ತಮ್ಮ ದೇಶದ ಪತಾಕೆ(ಧ್ವಜ)ಯನ್ನು ಚಂದ್ರನ ಮೇಲೆ ಹಾರಿಸಿದೆ. ಈ ಸಾಹಸ ಮಾಡಿದ ಜಗತ್ತಿನ ಎರಡನೇ ದೇಶ ಎಂದು ಚೀನಾ ಗುರುತಿಸಿಕೊಂಡಿದೆ. ಚೀನಾದ ಬಾಹ್ಯಾಕಾಶ ಸಂಸ್ಥೆ ಇತ್ತೀಚಿಗೆ ಉದಯಿಸಿದ ಚಾಂಗ್ 5 ಎಂಬ ನೌಕೆ ಚಂದ್ರಯಾನ ಮಾಡಿದ್ದು, ಇದು ಯಶಸ್ವಿಯಾಗಿ ಚಂದ್ರನ ಮೇಲೆ ಇಳಿದಿತ್ತು.

# 50 ವರ್ಷಗಳ ಹಿಂದೆ ಅಮೇರಿಕಾ ಮೊದಲ ಬಾರಿಗೆ ಚಂದ್ರನ ಮೇಲೆ ತಮ್ಮ ಪತಾಕೆಯನ್ನು ಹಾರಿಸಿತ್ತು.

# 1960 ಮತ್ತು 1970 ರ ದಶಕಗಳಲ್ಲಿ ಯುನೈಟೆಡ್ ಸ್ಟೇಟ್ಸ್ ಮತ್ತು ಹಿಂದಿನ ಸೋವಿಯತ್ ಒಕ್ಕೂಟದ ನಂತರ ಚಂದ್ರನಿಂದ ಮಾದರಿಗಳನ್ನು ಹಿಂಪಡೆಯುವ ಮೂರನೇ ದೇಶವಾಗಿ ಚೀನಾ ಸ್ಥಾನಪಡೆಯಿತು.

## ದೇಶೀಯ ನಿರ್ಮಿತ ಆಕಾಶ್ ಕ್ಷಿಪಣಿ ಪರೀಕ್ಷಾರ್ಥ ಪ್ರಯೋಗ ಯಶಸ್ವಿ




# ದೇಶೀಯ ನಿರ್ಮಿತ ಆಕಾಶ್ ಕ್ಷಿಪಣಿಯ ಶತ್ರುಗಳ ವಿಮಾನವನ್ನು ಕ್ಷಣಾರ್ಧದಲ್ಲಿ ಹೊಡೆದುರುಳಿಸುವ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ನಡೆಸಲಾಗಿದೆ ಎಂದು ಭಾರತೀಯ ವಾಯುಪಡೆ ಘೋಷಿಸಿದೆ.

# ಆಂಧ್ರ ಪ್ರದೇಶದ ಸೂರ್ಯಲಂಕಾ ಪರೀಕ್ಷಾ ಕೇಂದ್ರದಲ್ಲಿ ದೇಶೀಯ ನಿರ್ಮಿತ 10 ಆಕಾಶ್ ಕ್ಷಿಪಣಿಯ ಪ್ರಯೋಗಿಸಲಾಯ್ತು ಇವು ಸಂಪೂರ್ಣ ಯಶಸ್ವಿಯಾಗಿದೆ ಎಂದು ವಾಯುಪಡೆ ಮೂಲಗಳು ಖಚಿತಪಡಿಸಿವೆ.

# ಭಾರತ ಮತ್ತು ಚೀನಾ ರಾಷ್ಟ್ರಗಳ ಮಧ್ಯ ಗಡಿ ಘರ್ಷಣೆ ನಡೆಯುತ್ತಿರುವ ಈ ಸಮಯದಲ್ಲಿ ಆಕಾಶ್ ಕ್ಷಿಪಣಿಗಳು ಶತ್ರು ವಿಮಾನವನ್ನು ಹೊಡೆದುರುಳಿಸುವಲ್ಲಿ ಶಕ್ತವಾಗಿದ್ದು, ವಾಯು ಗಡಿ ಉಲ್ಲಂಘಿಸುವ ಚೀನಾ ರಾಷ್ಟ್ರಕ್ಕೆ ನಡುಕ ಶುರುವಾಗಿದೆ.

## ಡಿಸೆಂಬರ್ 5, ವಿಶ್ವ ಮಣ್ಣಿನ ದಿನ




ಪ್ರತಿ ವರ್ಷ ಡಿಸೆಂಬರ್ 5 ಈ ದಿನವನ್ನು ವಿಶ್ವಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಹಾರ ಮತ್ತು ಕೃಷಿ ಸಂಸ್ಥೆಗಳು 'ವಿಶ್ವ ಮಣ್ಣಿನ ದಿನ' ಎಂದು ಆಚರಿಸಲಾಗುತ್ತದೆ.

# ಮೊದಲ ವಿಶ್ವ ಮಣ್ಣಿನ ದಿನವನ್ನು 2014 ರಲ್ಲಿ ಆಚರಿಸಲಾಯಿತು. ಡಿಸೆಂಬರ್ 5 ರಂದು ಮಣ್ಣಿನ ವಿಜ್ಞಾನಗಳ ಅಂತರರಾಷ್ಟ್ರೀಯ ಒಕ್ಕೂಟವು ವಿಶ್ವ ಮಣ್ಣಿನ ದಿನವನ್ನು ಆಚರಿಸಲು ಶಿಫಾರಸು ಮಾಡಿತು. # ಡಿಸೆಂಬರ್ 5 ಈ ದಿನವು ಥೈಲ್ಯಾಂಡ್ನ ದಿವಂಗತ ರಾಜ 'ಭೂಮಿಬೋಲ್ ಅಡುಲ್ಯದೇಜ್' ಅವರ ಜನ್ಮದಿನದಂದು ಆಚರಿಸಲಾಗುತ್ತದೆ.

## ಚೀನಾ ಮತ್ತು ಪಾಕ್ ನಿಂದ ಆಜಾದ್ ಪಟ್ಟನ್ ಜಲಶಕ್ತಿ ಯೋಜನೆ ಆರಂಭ



ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಆಜಾದ್ ಪಟ್ಟನ್ ಜಲವಿದ್ಯುತ್ ಯೋಜನೆಯನ್ನು ನಿರ್ಮಿಸಲು ಚೀನಾ ಮತ್ತು ಪಾಕಿಸ್ತಾನ ಜಂಟಿಯಾಗಿ ಯೋಜನೆಯನ್ನು ರೂಪಿಸಿದ್ದು, ಇದು 700 (MV)ಮೆಗಾವ್ಯಾಟ್ ಜಲವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಯೋಜನೆಯಾಗಿದೆ.

# ಇದನ್ನು 1.35 ಬಿಲಿಯನ್ ಅಮೆರಿಕನ್ ಡಾಲರ್ ಮೊತ್ತದಲ್ಲಿ ನಿರ್ಮಿಸಲು ಯೋಜಿಸಲಾಗಿದ್ದು, ಇದು ಪಾಕಿಸ್ತಾನದ ಗ್ವಾಡರ್ ಬಂದರು ಮತ್ತು ಚೀನಾದ ಕ್ಸಿನ್‌ಜಿಯಾಂಗ್ ಅನ್ನು ಸಂಪರ್ಕಿಸುತ್ತದೆ.

# ಈ ಯೋಜನೆಗಳು ಪಶ್ಚಿಮ ಹಿಂದೂ ಮಹಾಸಾಗರ ಪ್ರದೇಶದ ಚೀನಿಯರಿಗೆ ಭೌಗೋಳಿಕ ರಾಜಕೀಯ ಹತೋಟಿ ನೀಡುತ್ತದೆ.

# ರನ್ ಆಫ್ ದಿ ರಿವರ್ ಯೋಜನೆಯಡಿಯಲ್ಲಿ ಜಲವಿದ್ಯುತ್ ಯೋಜನೆಯನ್ನು ನಿರ್ಮಿಸಲಾಗುತ್ತದೆ.

## 1960 ಒಲಿಂಪಿಕ್ ಡೆಕಾಥ್ಲಾನ್ ಚಾಂಪಿಯನ್ ರಾಫರ್ ಜಾನ್ಸನ್ ನಿಧನ



# 1960ರಲ್ಲಿ ಒಲಿಂಪಿಕ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಅಥ್ಲೀಟ್ ರಾಫರ್ ಜಾನ್ಸನ್ ರವರು 1960ರ ರೋಮ್ ಒಲಿಂಪಿಕ್‌ನ ಡೆಕಾಥ್ಲಾನ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದಿದ್ದರು. ಅವರು ಇತ್ತೀಚಿಗೆ ತಮ್ಮ 86 ವರ್ಷ ವಯಸ್ಸಿನಲ್ಲಿ ಲಾಸ್ ಏಂಜಲ್ಸ್‌ನಲ್ಲಿರುವ ಶೆರ್ಮನ್ ಒಕ್ಸ್‌ನಲ್ಲಿರುವ ತನ್ನ ನಿವಾಸದಲ್ಲಿ ಬುಧವಾರ (ಡಿ.2) ರಂದು ಕೊನೆಯುಸಿರೆಳೆದಿದ್ದಾರೆ.

# 1955ರ ಕಾಲದಲ್ಲಿ ರಾಫರ್ ಜಾನ್ಸನ್ ಶ್ರೇಷ್ಠ ಅಥ್ಲೀಟ್‌ಗಳ ಸಾಲಿನಲ್ಲಿ ಗುರುತಿಸಿಕೊಂಡಿದ್ದರು. 1956ರ ರಾಷ್ಟ್ರೀಯ ಡೆಕ್ಲಾಥ್ಲಾನ್‌ನಲ್ಲಿ ಪ್ರಶಸ್ತಿ ಗೆದ್ದಿದ್ದ ರಾಫರ್ ಅದೇ ವರ್ಷ ಮೆಲ್ಬರ್ನ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

## 07-12-2020

### ಅಮೆರಿಕ ಭಾರತಕ್ಕೆ 90 ಮಿಲಿಯನ್ ಮೌಲ್ಯದ ಸೇನಾ ಒಪ್ಪಂದ




ಇತ್ತೀಚಿಗೆ ಭಾರತ ಮತ್ತು ಅಮೇರಿಕಾ ರಾಷ್ಟ್ರಗಳು ಸುಮಾರು 905 ಮಿಲಿಯನ್ ಡಾಲರು ಮೊತ್ತದ ಒಪ್ಪಂದವನ್ನು ಮಾಡಿಕೊಂಡಿದ್ದು, ಈ ಒಪ್ಪಂದದ ಪ್ರಕಾರ ಭಾರತದ ಸೇನಾ ಪಡೆಯು ಹಲವು ಶಸ್ತ್ರಾಸ್ತ್ರಗಳನ್ನು ಅಮೇರಿಕಾ ರಾಷ್ಟ್ರದಿಂದ ಆಮದು ಮಾಡಿಕೊಳ್ಳಲಿದೆ.

# ಈ ಒಪ್ಪಂದದಿಂದಾಗಿ ಅಮೆರಿಕದ ರಕ್ಷಣಾ ಭದ್ರತಾ ಸಹಕಾರ ಸಂಸ್ಥೆಯು ಭಾರತ ಅಮೆರಿಕ ರಕ್ಷಣಾ ಸಂಬಂಧವನ್ನು ಬಲಪಡಿಸುವ ಮತ್ತು ದೇಶದ ಪ್ರಮುಖ ರಕ್ಷಣಾ ಪಾಲುದಾರನ ಭದ್ರತೆಯನ್ನು ಜೊತೆಗೆ ವಿದೇಶಾಂಗ ನೀತಿ ಹಾಗೂ ರಾಷ್ಟ್ರೀಯ ಭದ್ರತೆಗೆ ಬಲ ನೀಡಲಿದೆ.

# ಈ ಒಪ್ಪಂದದಡಿಯಲ್ಲಿ

* ಭಾರತದ ನೌಕಾಪಡೆಯು ಒಟ್ಟು 24 ಹೆಲಿಕಾಪ್ಟರ್‌ಗಳನ್ನು ಖರೀದಿ ಮಾಡುತ್ತಿದೆ.
* ಅಮೆರಿಕ ಭಾರತಕ್ಕೆ ತನ್ನ ಸಿ 130 ಸೂಪರ್ ಹರ್ಕ್ಯುಲಸ್ ಸೇನಾ ಸಾಗಣೆ ವಿಮಾನದ ನೆರವಿನ ಸೇವೆಯ ಜತೆಗೆ 90 ಮಿಲಿಯನ್ ಅಮೆರಿಕನ್ ಡಾಲರ್ ಮೌಲ್ಯದ ಸೇನಾ ಉಪಕರಣಗಳನ್ನು ಮಾರಾಟ ಮಾಡಲಿದೆ.

# 08-12-2020

### ಶೀಘ್ರದಲ್ಲೇ ಭಾರತ ವಿದೇಶಾಂಗ ಸಚಿವರ ಕುವೈತ್, ಕತಾರ್ ಭೇಟಿ



ನವದೆಹಲಿ: ಭಾರತ ವಿದೇಶಾಂಗ ಸಚಿವರಾದ ಎಸ್. ಜೈಶಂಕರ್ ಅವರು ಶೀಘ್ರದಲ್ಲೇ ಕೊಲ್ಲಿ ರಾಷ್ಟ್ರಗಳಾದ ಕುವೈತ್, ಕತಾರಗಳಿಗೆ ಭೇಟಿ ನೀಡಲಿದ್ದಾರೆ. ಇನ್ನು ಇದೇ ವೇಳೆ ಭೂಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಕೂಡ ಯುಎಇ ಮತ್ತು ಸೌದಿ ಅರೇಬಿಯ ರಾಷ್ಟ್ರಗಳಿಗೆ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಭೇಟಿಗಳ ನಿಖರ ಉದ್ದೇಶ ಬಹಿರಂಗಗೊಂಡಿಲ್ಲ ಆದರೆ ಭೇಟಿಯಿಂದಾಗಿ ಕೊಲ್ಲಿ ರಾಷ್ಟ್ರಗಳೊಂದಿಗಿನ ಸ್ನೇಹವನ್ನು ಇನ್ನಷ್ಟು ಬಲಗೊಳಿಸಲಾಗುವುದು.
\# ಪ್ರಸ್ತುತ ವಿದೇಶದಲ್ಲಿ ನೆಲೆಸಿರುವ ಒಟ್ಟು ಭಾರತೀಯರ ಪೈಕಿ ಶೇ.70 ರಷ್ಟು ಜನ ಪಶ್ಚಿಮ ಏಷ್ಯಾದ ಯುಎಇ, ಒಮಾನ್, ಕತಾರ್, ಸೌದಿ ಅರೇಬಿಯ, ಕುವೈತ್, ಬಹ್ರೈನ್ ರಾಷ್ಟ್ರಗಳಲ್ಲಿಯೇ ನೆಲೆಸಿದ್ದಾರೆ ಎನ್ನುವುದು ವಿಶೇಷ.

### ಜಪಾನ್ ಉಡಾಯಿಸಿದ ಶೋಧ ನೌಕೆಯಿಂದ ಕ್ಷುದ್ರಗ್ರಹದ ಮಾದರಿ ಸಂಗ್ರಹ ಜಪಾನ್ ಉಡಾಯಿಸಿದ ಶೋಧ ನೌಕೆಯಿಂದ ಕ್ಷುದ್ರಗ್ರಹದ ಮಾದರಿ ಸಂಗ್ರಹ



ಟೋಕಿಯೊ : ಜಪಾನ್ ರಾಷ್ಟ್ರವು ಉಡಾಯಿಸಿದ ಶೋಧಕ ನೌಕೆ 'ಹಯಬುಸ 2' ದೂರದ ಕ್ಷುದ್ರ (ಸಣ್ಣ) ಗ್ರಹವೊಂದರಿಂದ ಸಂಗ್ರಹಿಸಿದ ಮಾದರಿಗಳೊಂದಿಗೆ ಯಶಸ್ವಿಯಾಗಿ ಭೂಮಿಗೆ ಬಂದಿಳಿದಿದೆ.
\# ಈ ಶೋಧನೌಕೆಯನ್ನು 2014ರಲ್ಲಿ ಉಡಾಯಿಸಲಾಗಿದ್ದು, 'ಹಯಬುಸ 2' ಶೋಧಕ ನೌಕೆಯು ಅಂದಾಜು 30 ಕೋಟಿ ಕಿಲೋಮೀಟರ್ ನಷ್ಟು ಸಂಚರಿಸಿ 'ರಯಗು' ಎಂಬ ಕ್ಷುದ್ರ ಗ್ರಹದಿಂದ ಮಾದರಿಗಳನ್ನು ಸಂಗ್ರಹಿಸಿ ಮರಳಿದೆ.
\# ಕ್ಷುದ್ರಗ್ರಹದಿಂದ ಸಂಗ್ರಹಿಸಲಾದ ಈ ಮಾದರಿಯು ವಿಶ್ವ ಉಗಮವಾದಾಗಿನಿಂದ ಬದಲಾಗದೆ ಹಾಗೆಯೆ ಉಳಿದಿರುವ ಬಗ್ಗೆ ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ.

### ಫಾರ್ಮುಲಾ 2 ರೇಸ್ ನಲ್ಲಿ ಜಯ ಸಾದಿಸಿದ ಭಾರತೀಯ ಜೆಹಾನ್ ದರುವಾಲ




ಬಹರೈನ್ : ಇತ್ತೀಚಿಗೆ ಬಹರೈನ್ ನ ಸಖಿರ್ ನಲ್ಲಿ ನಡೆದ ಸಖಿರ್ ಗ್ರ್ಯಾಂಡ್‌ಪ್ರಿಕ್ಸ್‌ನಲ್ಲಿ ಭಾರತದ ಕಾರ್ ರೇಸರ್ ಜೆಹಾನ್ ದರುವಾಲ ಜಯ ಸಾಧಿಸುವ ಮೂಲಕ ಫಾರ್ಮುಲಾ 2 ರೇಸ್ ಗೆದ್ದ ಮೊದಲ ಭಾರತೀಯ ಎಂಬ ವಿಶಿಷ್ಟ ಸಾಧನೆ ಮಾಡಿದರು. ಭಾರತದ ಇಪ್ಪತ್ತೆರಡು ವರ್ಷದ ಭಾರತೀಯ ಜೆಹಾನ್ ದರುವಾಲ ಅವರು ರೇಯೋ ರೇಸಿಂಗ್ ಪರ ಕಾರು ಚಲಾಯಿಸಿ ವಿಜಯಸಾಧಿಸಿದ್ದು, ಇದು ಫಾರ್ಮುಲಾ 2 ರೇಸಿನಲ್ಲಿ ಅವರು ಮೊದಲ ಜಯವಾಗಿದೆ. ಜರ್ಮನಿಯ ಮಿಕ್ ಷೂಮೇಕರ್ ಮತ್ತು ಬ್ರಿಟಿಷ್ ರೇಸರ್ ಡೇನಿಯಲ್ ಟಿಕ್ಟಮ್ ವಿರುದ್ಧದ ರೋಚಕ ಸ್ಪರ್ಧೆಯಲ್ಲಿ ಜೇಹನ್ ದಾರುವಾಲ ಅವರು ಅಗ್ರಸ್ಥಾನ ಪಡೆದರು.

### ವಿಶ್ವ ಪಾರಂಪರಿಕ ನಗರಗಳ ಪಟ್ಟಿಗೆ ಗ್ವಾಲಿಯರ್, ಒರಛಾ ಸೇರ್ಪಡೆ




ಭೋಪಾಲ್: ಮಧ್ಯಪ್ರದೇಶ ರಾಜ್ಯದ ಐತಿಹಾಸಿಕ ಹಿನ್ನಲೆಯ ನಗರಗಳಾದ ಗ್ವಾಲಿಯರ್ ಮತ್ತು ಒರ್ಛಾ ಈಗ ಯುನೆಸ್ಕೊ ವಿಶ್ವ ಪಾರಂಪರಿಕ ನಗರಗಳ ಪಟ್ಟಿಗೆ ಸೇರಿಕೊಂಡಿರುವುದಾಗಿ ಮಧ್ಯ ಪ್ರದೇಶ ಸರ್ಕಾರ ಘೋಷಿಸಿದೆ.

# ಯುನೆಸ್ಕೊ ಸಂಸ್ಥೆಯು ವಿಶ್ವಸಂಸ್ಥೆಯ ಭಾಗವಾಗಿದ್ದು, ಇದು ಶಿಕ್ಷಣ, ವಿಜ್ಞಾನ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಹಕಾರ ರೂಪಿಸುವ ಮೂಲಕ ಶಾಂತಿ ಮತ್ತು ಭದ್ರತೆಗೆ ಒತ್ತು ನೀಡುತ್ತಿದೆ.

# ಕೋಟೆಗಳ ನಗರವಾದ ಗ್ವಾಲಿಯರ್ 9ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದಿತ್ತು, ಮತ್ತು16ನೇ ಶತಮಾನದಲ್ಲಿ ಈ ನಗರ ಬುಂದೇಲರ ಆಡಳಿತದಲ್ಲಿ ರಾಜಧಾನಿಯಾಗಿತ್ತು. ನಗರವನ್ನು ಗುರ್ಜಾರ್ ಪ್ರತಿಹಾರ್ ರಾಜವಂಶ, ತೋಮರ್, ಸಿಂಧಿಯಾ ಮನೆತನ ಆಳಿವೆ.ಇನ್ನು ಒರ್ಛಾ ನಗರವು ಇಲ್ಲಿರುವ ದೇವಸ್ಥಾನಗಳಿಂದ ಹೆಸರುವಾಸಿಯಾಗಿದೆ.

## ಖ್ಯಾತ ರಂಗಕರ್ಮಿ, ಲೇಖಕ ಉದ್ಯಾವರ ಮಾಧವ ಆಚಾರ್ಯ ಇನ್ನಿಲ್ಲ



ಉಡುಪಿ: ಖ್ಯಾತ ರಂಗಕರ್ಮಿ, ಲೇಖಕ, ಉಪನ್ಯಾಸಕ ಉದ್ಯಾವರ ಮಾಧವ ಆಚಾರ್ಯ ಅವರು ತಮ್ಮ 80ನೇ ವಯಸ್ಸಿನಲ್ಲಿ ಇತ್ತೀಚಿಗೆ ನಿಧನರಾದರು. ಮಾಧವ ಆಚಾರ್ಯ ಅವರು 1941ರ ಫೆ 25ರಂದು ಜನಿಸಿದರು. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಧಾರರಾಗಿದ್ದ ಇವರು 3 ದಶಕಗಳ ಕಾಲ ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿ ಸೇವೆ ನೀಡಿದ್ದಾರೆ.

# ಪ್ರಸಿದ್ಧ ಗುಡ್ಡದ ಭೂತ ಧಾರಾವಾಹಿಯಲ್ಲಿ ಉದ್ಯಾವರ ಮಾಧವ ಆಚಾರ್ಯರು ನಟರಾಗಿ ಅಭಿನಯಿಸಿದ್ದಾರೆ.

# ನಾಡಿನಾದ್ಯಂತ ಸುಮಾರು 50 ಕ್ಕೂ ಹೆಚ್ಚು ನಾಟಕಗಳಿಗೆ ನಿರ್ದೇಶನ ಮಾಡಿದ್ದಾರೆ.

# ಕರ್ನಾಟಕ ರಾಜ್ಯೋತ್ಸವ, ರಂಗ ವಿಶಾರದ ಪ್ರಶಸ್ತಿ ಸೇರಿ ಹಲವು ಗೌರವಗಳಿಗೆ ಭಾಜನರಾಗಿದ್ದಾರೆ.

## ಹೊಸ ಸಂಸತ್ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮಕ್ಕೆ ಸುಪ್ರೀಂಕೋರ್ಟ್ ಅಸ್ತು



ನವದೆಹಲಿ : ಭಾರತದ ಸುಪ್ರೀಂಕೋರ್ಟ್ ಹೊಸ ಸಂಸತ್ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮಕ್ಕೆ ಇಂದು ಅನುಮತಿ ನೀಡಿ ತೀರ್ಪು ನೀಡಿದೆ, ಹಾಗು ಸೆಂಟ್ರಲ್ ವಿಸ್ಟಾ ಪ್ರೊಜೆಕ್ಟನ್ನು ವಿರೋಧಿಸಿ ಸಲ್ಲಿಸಿರುವ ಅರ್ಜಿಯ ವಿಲೇವಾರಿಯ ತನಕ ಕಟ್ಟಡದ ಧ್ವಂಸ ಅಥವಾ ನಿರ್ಮಾಣ ಕಾರ್ಯವನ್ನು ಮಾಡುವಂತಿಲ್ಲ ಎಂದು ತೀರ್ಪಿನಲ್ಲಿ ಆದೇಶಿಸಿದೆ. ಇದೆ ವೇಳೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನೂತನ ಸಂಸತ್ ಕಟ್ಟಡ ನಿರ್ಮಾಣ ವೇಳೆ ಯಾವುದೇ ಕಟ್ಟಡ ಧ್ವಂಸ ಇಲ್ಲವೇ ಮರಗಳನ್ನು ಕಡಿಯಲಾಗುವುದಿಲ್ಲ ಎಂದು ಸುಪ್ರೀಂಕೋರ್ಟ್‌ಗೆ ತಿಳಿಸಿದರು.

## 2021ರ ದ್ವಿತೀಯಾರ್ಧಲ್ಲಿ ಭಾರತದಲ್ಲಿ ರಿಲಯನ್ಸ್ ಜಿಯೋ 5G ಸಂಪರ್ಕ = ಮುಕೇಶ್ ಅಂಬಾನಿ




"ಭಾರತದಲ್ಲಿ 2021ರ ದ್ವಿತೀಯಾರ್ಧದಲ್ಲಿ 5G ಕ್ರಾಂತಿಯಲ್ಲಿ ಜಿಯೋ ಮುಂಚೂಣಿಯಲ್ಲಿ ಇರುತ್ತದೆ" ಎಂದು ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ಇತ್ತೀಚಿಗೆ ಭಾಗವಹಿಸಿದ್ದ ಭಾರತ ಮೊಬೈಲ್ ಕಾಂಗ್ರೆಸ್ 2020ರಲ್ಲಿ ಸಭೆಯಲ್ಲಿ ತಿಳಿಸಿದ್ದಾರೆ.

# ಪ್ರಸ್ತುತ ಭಾರತದಲ್ಲಿ ಸುಮಾರು 30 ಕೋಟಿ ಜನರು 2G ತಂತ್ರಜ್ಞಾನ ಬಳಸುತ್ತಿದ್ದು, ಇವರೆಲ್ಲರಿಗೂ ಕಡಿಮೆ ಬೆಲೆಯ ಸ್ಮಾರ್ಟ್ ಫೋನ್ ಒದಗಿಸುವ ಮೂಲಕ ಡಿಜಿಟಲ್ ಆರ್ಥಿಕತೆಯನ್ನು ಹೆಚ್ಚಿಸಬಹುದು ಎಂದು ಇದೆ ವೇಳೆ ಅಂಬಾನಿ ತಿಳಿಸಿದ್ದಾರೆ.

# ಪ್ರಸ್ತುತ ದಕ್ಷಿಣ ಕೊರಿಯಾ, ಚೀನಾ ಮತ್ತು ಯುನೈಟೆಡ್ ಸ್ಟೇಟ್ಸ್ ರಾಷ್ಟ್ರಗಳು 5ಜಿ

ತಂತ್ರಜ್ಞಾನವನ್ನು ಬಳಸಿ ಜಗತ್ತನ್ನು ಮುನ್ನಡೆಸುವ ದೇಶಗಳಾಗಿವೆ.

## 09-12-2020

### ಮೌಂಟ್ ಎವರೆಸ್ಟ್ ಶಿಖರ ಎತ್ತರವನ್ನ ಮತ್ತೊಮ್ಮ ಅಳೆದ ಚೀನಾ ಹಾಗೂ ನೇಪಾಳ



# ನೇಪಾಳ ಹಾಗೂ ಚೀನಾ ಜಂಟಿಯಾಗಿ ವಿಶ್ವದ ಅತ್ಯುನ್ನತ ಶಿಖರ ಮೌಂಟ್ ಎವರೆಸ್ಟ್ ಪರಿಷ್ಕೃತ ಎತ್ತರ 8,848.86 ಮೀಟರ್ (2,9031.69 ಅಡಿ) ಎಂದು ಘೋಷಿಸಿವೆ. ಈ ಮೊದಲು ಭಾರತವು ಮೌಂಟ್ ಎವರೆಸ್ಟ್ ನ ಎತ್ತರವನ್ನು 1954ರಲ್ಲಿ ಅಳತೆಮಾಡಿತ್ತು, ಅದು ಇದೀಗ ಬಿಡುಗಡೆಗೊಳಿಸಿರುವ ಎತ್ತರಕ್ಕಿಂತ 86 ಸೆಂಟಿ ಮೀಟರ್ ಹೆಚ್ಚಾಗಿದೆ.
# ಭಾರತವು 1954ರಲ್ಲಿ ನಡೆಸಿದ ಸಮೀಕ್ಷೆಯಂತೆ ಮೌಂಟ್ ಎವರೆಸ್ಟ್ ಎತ್ತರವು 8,848 ಮೀಟರ್ ಕಂಡು ಬಂದಿತ್ತು.
# ನೇಪಾಳ ಸರ್ಕಾರವು 2015ರ ಭೀಕರ ಭೂಕಂಪ ಕಾರಣಗಳಿಂದಾಗಿ ಮೌಂಟ್ ಎವರೆಸ್ಟ್ ನ ಎತ್ತರದಲ್ಲಿ ಬದಲಾವಣೆ ಆಗಿರಬಹುದು ಎಂಬ ಶಂಕೆಯಿಂದಾಗಿ ಸರ್ಕಾರವು ಪರ್ವತದ ನಿಖರ ಎತ್ತರವನ್ನ ಅಳೆಯಲು ನಿರ್ಧರಿಸಿತು. ಹೀಗಾಗಿ ವಿಶ್ವದ ಅತ್ಯುನ್ನತ ಶಿಖರ ಮೌಂಟ್ ಎವರೆಸ್ಟ್‌ನ ಹೊಸ ಎತ್ತರ 8,848.86 ಮೀಟರ್ ಎಂದು ಚೀನಾ ಮತ್ತು ನೇಪಾಳ ಜಂಟಿಯಾಗಿ ಘೋಷಣೆ ಮಾಡಿದೆ.

### ಬ್ರೇಕ್‌ಡಾನ್ಸ್ ಈಗ ಒಲಿಂಪಿಕ್ ಕ್ರೀಡೆ



ಲಾಸೇನ್: ಪ್ಯಾರಿಸ್‌ನಲ್ಲಿ ನಡೆಯಲಿರುವ 2024ರ ಒಲಿಂಪಿಕ್ ಕೂಟದಲ್ಲಿ ಬ್ರೇಕ್ ಡ್ಯಾನ್ಸ್ ಅನ್ನು ನೂತನ ಕ್ರೀಡೆಯಾಗಿ ಸೇರ್ಪಡೆಗೊಳಿಸಲಾಗಿದೆ. ಇತ್ತೀಚಿಗೆ ನಡೆದ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ (ಐಒಸಿ) ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಬ್ರೇಕ್‌ಡ್ಯಾನ್ಸ್‌ಗೆ ಮಾನ್ಯತೆ ನೀಡಲು ತೀರ್ಮಾನ ಕೈಗೊಳ್ಳಲಾಯಿತು. 'ಯುವಜನತೆ ಹೆಚ್ಚು ಇಷ್ಟಪಡುವ ಕ್ರೀಡೆಗಳತ್ತ ಗಮನ ಕೊಡುವುದು ನಮ್ಮ ಆದ್ಯತೆ' ಎಂದು ಒಲಿಂಪಿಕ್ ಸಮಿತಿಯ ಮುಖ್ಯಸ್ಥ ಥಾಮಸ್ ಬಾಕ್ ತಿಳಿಸಿದ್ದಾರೆ. ಇನ್ನು ಪ್ಯಾರಿಸ್ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳ ಸಂಖ್ಯೆ 10,500 ಆಗಿರಲಿದ್ದು, ಪದಕ ಗೆಲ್ಲುವ ಕ್ರೀಡೆಗಳ ಸಂಖ್ಯೆ 339 ರಿಂದ 329ಕ್ಕೆ ಇಳಿಯಲಿವೆ ಎಂದೂ ಎಂದೂ ಥಾಮಸ್ ಬಾಕ್ ತಿಳಿಸಿದ್ದಾರೆ.

### ವಿಮಾನವನ್ನು ಶಬ್ದಕ್ಕಿಂತ ವೇಗವಾಗಿ ಹಾರಿಸಿದ್ದ ಪೈಲಟ್ ಚಕ್ ಯೇಗರ್ ನಿಧನ



ಅಮೆರಿಕದ ವಾಯುಪಡೆ ಅಧಿಕಾರಿ ಚಕ್ ಯೇಗರ್ ಅವರು ಇತ್ತೀಚಿಗೆ ತಮ್ಮ 97ನೇ ವಯಸ್ಸಿನಲ್ಲಿ ನಿಧನರಾದರು. ಚಕ್ ಯೇಗರ್ ಅವರು ವಿಮಾನವನ್ನು ಶಬ್ದಕ್ಕಿಂತ ವೇಗವಾಗಿ ಚಲಾಯಿಸಿದ ವಿಶ್ವದ ಮೊದಲ ವ್ಯಕ್ತಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ, ಹಾಗೂ ಟೆಸ್ಟ್ ಪೈಲಟ್ ಆಗಿದ್ದ ಅವರು ಎರಡನೇ ಮಹಾಯುದ್ಧದಲ್ಲಿ ಭಾಗಿಯಾಗಿದ್ದರು.
# 1941ರ ಸೆಪ್ಟೆಂಬರ್‌ನಲ್ಲಿ ಯೇಗರ್ ವಾಯುಪಡೆಗೆ ಸೇರಿದ್ದರು. ನಂತರ 1947ರಲ್ಲಿ ಬೆಲ್ x 1 ಸಂಶೋಧನಾ ವಿಮಾನವನ್ನು ಅವರು ಶಬ್ದಕ್ಕಿಂತಲೂ ವೇಗವಾಗಿ ಚಲಾಯಿಸಿದ್ದರು. ಇವರು 1975ರಲ್ಲಿ ವಾಯುಪಡೆ ಸೇವೆಯಿಂದ ನಿವೃತ್ತರಾಗಿದ್ದರು.
#ಚಕ್ ಯೇಗರ್ ಅವರ ಯಶೋಗಾಥೆಯನ್ನು ಆಧರಿಸಿ 'ದಿ ರೈಟ್ ಸ್ಟಫ್' ಎಂಬ ಕೃತಿ ಬಿಡುಗಡೆಯಾಗಿದೆ, ಅಲ್ಲದೆ 1983ರಲ್ಲಿ ಇದೇ ಹೆಸರಿನಲ್ಲಿ ಚಲನಚಿತ್ರ ತೆರೆಕಂಡಿತ್ತು.

### ಭಾರತೀಯ ರೈಲ್ವೆಯಲ್ಲಿ ಲಿಡಾರ್ ತಂತ್ರ



# ದೆಹಲಿ ವಾರಣಾಸಿ ಹೈ ಸ್ಪೀಡ್ ರೈಲು ಕಾರಿಡಾರ್‌ಗೆ ಭೂ ಸಮೀಕ್ಷೆ ನಡೆಸಲು ಭಾರತೀಯ ರೈಲ್ವೆ ಲಿಡಾರ್ ತಂತ್ರವನ್ನು ಬಳಸಲಾಗುತ್ತಿದೆ. ಲಿಡಾರ್ ತಂತ್ರಜ್ಞಾನ ಒಂದು ಲೈಟ್ ಡಿಟೆಕ್ಷನ್ ಮತ್ತು ರೇಂಜಿಂಗ್ ತಂತ್ರವಾಗಿದೆ.
# ಹೆಲಿಕಾಪ್ಟರ್‌ನಲ್ಲಿ ಅಳವಡಿಸಲಾಗಿರುವ ಲಿಡಾರ್ ಈ ತಂತ್ರವನ್ನು ಭಾರತೀಯ ರೈಲ್ವೆ ಮುಂಬೈ ಅಹಮದಾಬಾದ್ ಬುಲೆಟ್ ರೈಲು ಯೋಜನೆಯಲ್ಲಿ ಮೊದಲ ಬಾರಿಗೆ ಬಳಕೆ ಮಾಡಲಾಯಿತು, ಈ ಬಳಕೆ ಯಶಸ್ವಿಯಾದ ನಂತರ ಇದನ್ನು ಬಳಸಲಾಗುತ್ತಿದೆ.
# ನಿಖರವಾದ ಸಮೀಕ್ಷೆಯನ್ನು ನೀಡಲು ತಂತ್ರವು ಜಿಪಿಎಸ್ ಡೇಟಾ, ಲೇಸರ್ ಡೇಟಾ, ಫ್ಲೈಟ್ ನಿಯತಾಂಕಗಳ ಸಂಯೋಜನೆಯನ್ನು ಬಳಸುತ್ತದೆ.
# ಲಿಡಾರ್ ಉಪಕರಣವು ಸ್ಕ್ಯಾನರ್, ಲೇಸರ್ ಮತ್ತು ಜಿಪಿಎಸ್ ರಿಸೀವರ್ ಅನ್ನು ಒಳಗೊಂಡಿದೆ. ಲಿಡಾರ್ ಡೇಟಾವನ್ನು ಪಡೆಯಲು ಹೆಲಿಕಾಪ್ಟರ್‌ಗಳು ಮತ್ತು ವಿಮಾನಗಳು ಸಾಮಾನ್ಯವಾಗಿ ಬಳಸುವ ವೇದಿಕೆಗಳಾಗಿವೆ.

## ಹೈದರಾಬಾದ್ ಭಾರತ್ ಬಯೋಟೆಜ್ ಕಂಫನಿಗೆ 64 ವಿದೇಶಿ ರಾಯಭಾರಿಗಳ ಆಗಮನ



ಭಾರತವು ವಿಶ್ವದ ಅತಿದೊಡ್ಡ ಲಸಿಕೆ ತಯಾರಕ ರಾಷ್ಟ್ರವಾಗಿದೆ ಕೊರೊನಾ ಲಸಿಕೆಗಳನ್ನು ಅಭಿವೃದ್ಧಿಪಡಿಸುತ್ತಿರುವ ಬಯೋಟೆಕ್ ಕಂಪನಿಗಳಾದ ಭಾರತ್ ಬಯೋಟೆಕ್ ಮತ್ತು ಬಯೋಲಾಜಿಕಲ್ ಇ ಗೆ ಭೇಟಿ ನೀಡಲು 64 ವಿದೇಶಿ ರಾಯಭಾರಿಗಳು ಇತ್ತೀಚಿಗೆ ಹೈದರಾಬಾದ್‌ಗೆ ಆಗಮಿಸಿದ್ದಾರೆ. ಪ್ರಧಾನಿ ಮೋದಿ ನವೆಂಬರ್ 28 ರಂದು ಲಸಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಪ್ರಕ್ರಿಯೆಯ ಬಗ್ಗೆ ವ್ಯಾಪಕ ಪರಿಶೀಲನೆ ನಡೆಸಲು ಅಹಮದಾಬಾದ್‌ನ ಝೈಡಸ್ ಬಯೋಟೆಕ್ ಪಾರ್ಕ್, ಹೈದರಾಬಾದ್‌ನ ಭಾರತ್ ಬಯೋಟೆಕ್ ಮತ್ತು ಪುಣೆಯ ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಕ್ಕೆ ಭೇಟಿ ನೀಡಿದ್ದರು.

# 10-12-2020

## ಭಾರತದ ಕ್ರಿಕೆಟ್ ತಂಡದ ವಿಕೆಟ್ ಕೀಪರ್ ಪಾರ್ಥಿವ್ ಪಟೇಲ್ ವಿದಾಯ ಘೋಷಣೆ



# ಭಾರತ ತಂಡದ ವಿಕೆಟ್‌ಕೀಪರ್ ಬ್ಯಾಟ್ಸ್ ಮನ್ ಪಾರ್ಥಿವ್ ಪಟೇಲ್ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.
# ಗುಜರಾತ್‌ನ 35 ವರ್ಷದ ಎಡಗೈ ಬ್ಯಾಟ್ಸ್‌ಮನ್ ಪಾರ್ಥಿವ್ ಪಟೇಲ್ ಅವರು "18 ವರ್ಷಗಳ ಕ್ರಿಕೆಟ್ ಜೀವನಕ್ಕೆ ವಿದಾಯ ಹೇಳುತ್ತಿದ್ದೇನೆ" ಎಂದು ಸಾಮಾಜಿಕ ಜಾಲತಾಣ ಟ್ವಿಟರ್ ನಲ್ಲಿ ಟ್ವೀಟ್ ಮಾಡುವ ಮೂಲಕ ಘೋಷಿಸಿಕೊಂಡಿದ್ದಾರೆ.
# ಟೆಸ್ಟ್ ಗೆ ಪಾದಾರ್ಪಣೆ ಮಾಡಿದ ಕಿರಿಯ ಆಟಗಾರನೆಂಬ ಹೆಗ್ಗಳಿಕೆ ಅವರದು, ಪಾರ್ಥಿವ್ ತಮ್ಮ 17ನೇ ವಯಸ್ಸಿನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದರು. ಆಗ ಸೌರವ್ ಗಂಗೂಲಿ ತಂಡದ ನಾಯಕರಾಗಿದ್ದರು.
# ಪಾರ್ಥಿವ್ 25 ಟೆಸ್ಟ್, 38 ಏಕದಿನ ಹಾಗೂ ಎರಡು ಟ್ವೆಂಟಿ 20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ.
# 2016 17ನೇ ಸಾಲಿನಲ್ಲಿ ಗುಜರಾತ್‌ಗೆ ಚೊಚ್ಚಲ ರಣಜಿ ಟ್ರೋಫಿ ಜಯದ ಕಾಣಿಕೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು
# ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್, ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಆರ್‌ಸಿಬಿ ತಂಡಗಳಲ್ಲಿ ಆಡಿದ್ದರು.

## ನೂತನ ಸಂಸತ್ ಭವನ 971 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ, ಇಂದು ಪ್ರಧಾನಿ ನರೇಂದ್ರ ಮೋದಿ ಶಿಲಾನ್ಯಾಸ



ದೆಹಲಿಯ ರಾಜಪಥದಲ್ಲಿ 971 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ನೂತನ ಸಂಸತ್ ಭವನದ ಕಟ್ಟಡಕ್ಕೆ ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಶಿಲಾನ್ಯಾಸ ನೆರವೇರಿಸಿದರು.
# ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಈ ಸಂಸತ್ ಭವನದಲ್ಲಿ ಏಕಕಾಲಕ್ಕೆ 1,224 ಸಂಸದರು ಕುಳಿತುಕೊಳ್ಳಲು ಅವಕಾಶ ಮಾಡಲಾಗುವದು.
# ಒಟ್ಟು 64,500 ಚ.ಮೀ. ವಿಸ್ತೀರ್ಣದಲ್ಲಿ

ನೂತನ ಸಂಸತ್ ಭವನದ ಕಟ್ಟಡ ನಿರ್ಮಾಣ ಕಾರ್ಯ ನಡೆಯಲಿದೆ.
# ವಿಶೇಷವಾಗಿ ಈ ಕಟ್ಟಡ ಭೂಕಂಪವನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿರಲಿದೆ.
# ಪ್ರಸ್ತುತ ಈಗಿರುವ ಸಂಸತ್ ಭವನಕ್ಕೆ 1921ರಲ್ಲಿ ಶಂಕು ಸ್ಥಾಪನೆ ನೆರವೇರಿಸಲಾಗಿತ್ತು. ಆ ವೇಳೆ 83 ಲಕ್ಷ ರೂ. ವೆಚ್ಚದಲ್ಲಿ ಈ ಕಟ್ಟಡವನ್ನು ನಿರ್ಮಿಸಲಾಗಿತ್ತು. ಕಳೆದ ಸೆಪ್ಟೆಂಬರ್‌ನ ಹರಾಜು ಪ್ರಕ್ರಿಯೆಯಲ್ಲಿ 971 ಕೋಟಿ ರೂ. ವೆಚ್ಚದ ನೂತನ ಸಂಸತ್ ಭವನದ ನಿರ್ಮಾಣದ ಜವಾಬ್ದಾರಿಯನ್ನು ಟಾಟಾ ಪ್ರಾಜೆಕ್ಟ್ ಲಿಮಿಟೆಡ್ ಪಡೆದುಕೊಂಡಿದೆ.

## ಕರ್ನಾಟಕದಲ್ಲಿ ಗೋ ಹತ್ಯೆ ನಿಷೇಧ; ಮಂಡನೆ



# ಗೋಹತ್ಯೆ ನಿಷೇಧ ತಿದ್ದುಪಡಿ ಮಸೂದೆಯನ್ನು ಕಾಂಗ್ರೆಸ್ ವಿರೋಧದ ನಡುವೆಯೂ ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು.
# ಪಶು ಸಂಗೋಪನಾ ಸಚಿವ ಪ್ರಭು ಚೌಹಾಣ್, ಸ್ಪೀಕರ್ ಅನುಮತಿ ಪಡೆದು ವಿಧಾನಸಭೆಯಲ್ಲಿ ಗೋಹತ್ಯೆ ನಿಷೇಧ ತಿದ್ದುಪಡಿ ವಿಧೇಕವನ್ನು ಮಂಡಿಸಲಾಯಿತು.
# ಗುಜರಾತ್ ಹಾಗೂ ಉತ್ತರ ಪ್ರದೇಶ ಮಾದರಿಯಲ್ಲಿ ವಿಧೇಯಕ ಮಂಡಿಸಲಾಗಿದ್ದು, ಗೋಹತ್ಯೆ ಮಾಡಿದರೆ 50 ಸಾವಿರದಿಂದ 5 ಲಕ್ಷದವರೆಗೆ ದಂಡ ವಿಧಿಸಬಹುದಾಗಿದ್ದು, ಅಲ್ಲದೇ 3 ರಿಂದ 5 ವರ್ಷಗಳವರೆಗೂ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

## 22,810 ಕೋಟಿ ರೂ. 'ಆತ್ಮ ನಿರ್ಭರ ಭಾರತ್ ರೋಜ್ ಗಾರ್ ಯೋಜನೆ' ಹಂಚಿಕೆ = ಕೇಂದ್ರ ಸಂಪುಟ ಒಪ್ಪಿಗೆ




'ಆತ್ಮ ನಿರ್ಭರ ಭಾರತ್ ರೋಜ್ ಗಾರ್ ಯೋಜನೆ'ಗಾಗಿ ಕೇಂದ್ರ ಸರ್ಕಾರವು ಹಣವನ್ನು ಹಂಚಿಕೆ ಮಾಡಿದ್ದು, ದೇಶದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸಿ ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಈ ಯೋಜನೆ ಅನುಕೂಲಕರವಾಗಲಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ಯೋಜನೆಗಾಗಿ 1,584 ಕೋಟಿ ರೂ. ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದೆ.
# ಈ ಯೋಜನೆಯ ಮೂಲಕ 2,374 ಗ್ರಾಮಗಳಿಗೆ ಮೊಬೈಲ್ ವ್ಯಾಪ್ತಿ ಲಭಿಸಲಿದೆ, ಈ ಯೋಜನೆಯನ್ನು 2022 ರ ಡಿಸೆಂಬರ್ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಿರುವದಾಗಿ ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಹೇಳಿದ್ದಾರೆ.
# ಆತ್ಮನಿರ್ಭರ ಭಾರತ್ ರೋಜಗಾರ್ ಯೋಜನೆಯಿಂದ ಹೊಸದಾಗಿ ಉದ್ಯೋಗ ನೀಡುವ ಸಂಸ್ಥೆಗಳು, ಕೈಗಾರಿಕೆಗಳ ಪರವಾಗಿ ಉದ್ಯೋಗಿ, ಸಂಸ್ಥೆ ಪಾಲನ್ನು ಕೇಂದ್ರ ಸರ್ಕಾರ ಭರಿಸಲಿದೆ ಎಂದು ಸಂತೋಷ್ ಗಂಗ್ವಾರ್ ತಿಳಿಸಿದರು.

# 11-12-2020

## ನಿರ್ಮಲಾ ಸೀತಾರಾಮನ್, ಸೇರಿದಂತೆ ವಿಶ್ವದ 100 ಅತ್ಯಂತ ಶಕ್ತಿಶಾಲಿ ಮಹಿಳೆಯರ ಪಟ್ಟಿ ಪ್ರಕಟ



# ಇತ್ತೀಚಿಗೆ ಫೋರ್ಬ್ಸ್ ನಿಯತಕಾಲಿಕೆ ಪ್ರಕಟಿಸಿದ ವಿಶ್ವದ 100 ಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ ನಿರ್ಮಲಾ ಸೀತಾರಾಮನ್ 41ನೇ ಸ್ಥಾನ ಪಡೆದುಕೊಂಡಿದ್ದಾರೆ.
# ಸತತ ಹತ್ತನೇ ವರ್ಷಕ್ಕೆ ಏಂಜೆಲಾ ಮೆರ್ಕೆಲ್ ನಂ.1 ಸ್ಥಾನ ಪಡೆದಿದ್ದಾರೆ. ಮರ್ಕೆಲ್ ಯುರೋಪಿನ ಅತ್ಯಂತ ದೊಡ್ಡ ಆರ್ಥಿಕ ನಾಯಕಿಯಾಗಿದ್ದು, ಆರ್ಥಿಕ ಬಿಕ್ಕಟ್ಟಿನಿಂದ ಜರ್ಮನಿಯನ್ನು ಮುನ್ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.
# ಇನ್ನು ಭಾರತದ ಮಹಿಳಾ ಉದ್ಯಮಿ ಕಿರಣ್ ಮಝುಮದಾರ್ ಷಾ ಅವರು ಪಟ್ಟಿಯಲ್ಲಿ 68 ನೇ ಸ್ಥಾನ ಪಡೆಯುವ ಮೂಲಕ ಈ ಪಟ್ಟಿಯಲ್ಲಿ ಸ್ಥಾನ ಪಡೆದ ಎರಡನೇ ಭಾರತೀಯ ಮಹಿಳೆಯಾಗಿದ್ದಾರೆ.

## ವಿಶ್ವಕಪ್ ವಿಜೇತ ಇಟಲಿ ಫುಟ್ಬಾಲರ್ ಪಾವೊಲೊ ರೊಸ್ಸಿ ನಿಧನ



1982ರಲ್ಲಿ ವಿಶ್ವಕಪ್ ಫುಟ್ಬಾಲ್ ನಲ್ಲಿ ವಿಜಯಸಾದಿಸಿದ್ದ ಇಟಲಿ ತಂಡದ ಟಾಪ್ ಫುಟ್ಬಾಲರ್ ಪಾವೊಲೊ ರೊಸ್ಸಿ ಅವರು ಇತ್ತೀಚಿಗೆ ತಮ್ಮ 64ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ರಾಷ್ಟ್ರೀಯ ತಂಡದಲ್ಲಿದ್ದು ವಿಶ್ವಕಪ್ ಗೆದ್ದಿದ್ದೇ ರೊಸ್ಸಿ ಶ್ರೇಷ್ಠ ಸಾಧನೆ. ರೊಸ್ಸಿ ಗಳಿಸಿದ 6 ಗೋಲ್‌ಗಳು ಸಹಾಯದಿಂದ ಅಂದು ಇಟಲಿ ತಂಡ ವಿಶ್ವಕಪ್ ಗೆಲುವಿಗೆ ಕಾರಣವಾಗಿತ್ತು. ನಾಲ್ಕು ವರ್ಷಗಳ ಕಾಲ ಯುವೆಂಟಸ್ ತಂಡದಲ್ಲಿದ್ದಾಗ ರೊಸ್ಸಿ ಅವರು ಎರಡು ಇಟಾಲಿಯನ್ ಸೀರೀ ಎ ಪ್ರಶಸ್ತಿಗಳು, ಒಂದು ಯುರೋಪಿಯನ್ ಕಪ್, ಕೋಪ್ಪ ಕಪ್‌ಗಳನ್ನು ಪಡೆದುಕೊಂಡಿದ್ದರು.

## ಡಿಸೆಂಬರ್ 9 ಅಂತರರಾಷ್ಟ್ರೀಯ ಭ್ರಷ್ಟಾಚಾರ ವಿರೋಧಿ ದಿನ



# ಭಾರತದಲ್ಲಿ ಪ್ರತಿ ವರ್ಷ ಡಿಸೆಂಬರ್ 09 ರಂದು ಅಂತರರಾಷ್ಟ್ರೀಯ ಭ್ರಷ್ಟಾಚಾರ ವಿರೋಧಿ ದಿನವನ್ನಾಗಿ ಆಚರಿಸಲಾಗುತ್ತದೆ. ಹಾಗು ಇತ್ತೀಚಿಗೆ ನವದೆಹಲಿಯ ಕೇಂದ್ರೀಯ ತನಿಖಾ ದಳವು ಅಂತರರಾಷ್ಟ್ರೀಯ ಭ್ರಷ್ಟಾಚಾರ ವಿರೋಧಿ ದಿನವನ್ನು ಆಚರಿಸಿತು.
# ಜರ್ಮನಿಯ ಬರ್ಲಿನ್‌ನಲ್ಲಿರುವ ಟ್ರಾನ್ಸ್ ಪರೆನ್ಸಿ ಇಂಟರ್‌ನ್ಯಾಷನಲ್ ಸಂಸ್ಥೆಯು ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕವನ್ನು ಆರಂಭಿಸಿದ್ದು, ಭಾರತ ಭ್ರಷ್ಟಾಚಾರ ಸಮೀಕ್ಷೆ, 2017 ರಲ್ಲಿ 45%, 2018 ರಲ್ಲಿ 58%, 2019 ರಲ್ಲಿ 51% ಕ್ಕೆ ಇಳಿದಿರುವದಾಗಿ ವರದಿಯಾಗಿದೆ.
# ಭ್ರಷ್ಟಾಚಾರ ವಿರೋಧಿ ಸಂಸ್ಥೆಯು, ಭ್ರಷ್ಟಾಚಾರದ ಆರೋಪಗಳನ್ನು ವಿಚಾರಿಸಲು ಇದು ನ್ಯಾಯವ್ಯಾಪ್ತಿಯನ್ನು ಹೊಂದಿದ್ದು, ಇದು ಅಂತರರಾಷ್ಟ್ರೀಯ ಸಹಕಾರ, ಅಪರಾಧೀಕರಣ ಮತ್ತು ಕಾನೂನು ಜಾರಿ, ತಡೆಗಟ್ಟುವ ಕ್ರಮಗಳು, ಆಸ್ತಿ ಚೇತರಿಕೆ, ತಾಂತ್ರಿಕ ನೆರವು ಮತ್ತು ಮಾಹಿತಿ ವಿನಿಮಯದಂತಹ ಐದು ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿದೆ.

## ಅಧಿಕೃತವಾಗಿ ಕನ್ನಡ ಭಾಷೆಯಾ ಕಲಿಕೆ ಅಮೆರಿಕದ ಸರ್ಕಾರಿ ಶಾಲೆಗಳಲ್ಲಿ ಆರಂಭ



ಕನ್ನಡ ಭಾಷೆಯನ್ನು ಅಮೆರಿಕಾದ ಸರ್ಕಾರಿ ಹೈಸ್ಕೂಲುಗಳಲ್ಲಿ ಅಧಿಕೃತ ವಿದೇಶಿ ಭಾಷೆಯಾಗಿ ಕಲಿಸುವ ಕಾರ್ಯ ಆರಂಭವಾಗಿದೆ. ಕಳೆದ 15 ವರ್ಷಗಳಿಂದ ಅಮೆರಿಕದಲ್ಲಿರುವ ಕನ್ನಡ ಪ್ರೇಮಿಗಳ ಸತತ ಪ್ರಯತ್ನದಿಂದಾಗಿ ಇದೆ ಮೊಟ್ಟಮೊದಲ ಬಾರಿಗೆ, ಕನ್ನಡ ಭಾಷೆಯನ್ನು ನಾರ್ತ್ ಕ್ಯಾರೊಲಿನ ರಾಜ್ಯದ ವೇಕ್ ಕೌಂಟಿ ಸರ್ಕಾರಿ ಹೈಸ್ಕೂಲಿನಲ್ಲಿ ವಿದೇಶಿ ಭಾಷೆಯಾಗಿ ಕಲಿಯುವ ಅವಕಾಶ ಇಲ್ಲಿನ ವಿದ್ಯಾರ್ಥಿಗಳಿಗೆ ಒದಗಿಬಂದಿದೆ. ಇನ್ನು ಕನ್ನಡ ಶಾಲೆಗಳನ್ನು ನಡೆಸಲು ಬೇಕಾದ ವೆಬ್ಸೈಟ್, ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ಅಮೇರಿಕದ ತುಂಬೆಲ್ಲಾ ಕನ್ನಡ ಕಲಿ ಶಾಲೆಗಳು ನಡೆಯಲು ಕನ್ನಡ ಅಕ್ಯಾಡೆಮಿಯ ಇತರೆ ಸ್ವಯಂ ಸೇವಕರು ಶ್ರಮಿಸುತ್ತಿದ್ದಾರೆ.

# 12-12-2020

## 18 ಜನರು ನಾಸಾದ ಚಂದ್ರಯಾನ ಕಾರ್ಯಕ್ರಮಕ್ಕೆಆಯ್ಕೆ.



2024ರಲ್ಲಿ ನಾಸಾದ ಕೈಗೊಳ್ಳಲಿರುವ ಚಂದ್ರಯಾನ ಕಾರ್ಯಕ್ರಮಕ್ಕೆ ಅಮೆರಿಕದ ಬಾಹ್ಯಾಕಾಶ ಸಂಸ್ಥೆ 'ನಾಸಾ'ವು ಒಟ್ಟು 18 ಗಗನಯಾನಿಗಳನ್ನು ಆಯ್ಕೆ ಮಾಡಿದ್ದು, ಇದರಲ್ಲಿ ಅರ್ಧದಷ್ಟು ಮಹಿಳೆಯರು ಇರುವುದು ಖಚಿತವಾಗಿದೆ.
# ಈ ಯೋಜನೆಯಲ್ಲಿ ಚಂದ್ರನ ಮೇಲೆ ಮೊದಲು ಮಹಿಳಾ ಗಗನಯಾನಿಯೇ ಕಾಲಿಡುವ ಸಾಧ್ಯತೆಯಿದೆ ಎಂದು "ಆರ್ಟೆಮಿಸ್" ಹೆಸರಿನ ಈ ಕಾರ್ಯಕ್ರಮದಲ್ಲಿ ನ್ಯಾಷನಲ್ ಸ್ಪೇಸ್ ಕೌನ್ಸಿಲ್‌ನ

ಚೇರಮನ್ ಆಗಿರುವ ಅಮೆರಿಕದ ಉಪಾಧ್ಯಕ್ಷ ಮೈಕ್ ಪೆನ್ಸ್ ಅವರು ತಿಳಿಸಿದ್ದಾರೆ.
# ಇನ್ನು ನಾಸಾದ ಆಡಳಿತಾಧಿಕಾರಿ ಜಿಮ್ ಬ್ರೈಡೆನ್‌ಸ್ಟಿನ್ ರವರು 'ಈ ಚಂದ್ರಯಾನ ಕಾರ್ಯಕ್ರಮಕ್ಕೆ ಇನ್ನಷ್ಟು ಗಗನಯಾನಿಗಳು ಸೇರ್ಪಡೆಯಾಗುವ ಸಾಧ್ಯತೆ ಕುರಿತು ತಿಳಿಸಿದ್ದಾರೆ.

## ಭಾರತದ ಶ್ರೇಷ್ಠ ನೃತ್ಯಗಾರ ಅಸ್ತಾದ್ ಡೆಬೂ ಇನ್ನಿಲ್ಲ



ಭಾರತೀಯ ನರ್ತಕ ಅಸ್ತಾದ್ ಡೆಬೂ ರವರು ತಮ್ಮ 73ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ. ಇವರು ಕಥಕ್ ಹಾಗೂ ಕಥಕ್ಕಲಿಯನ್ನ ವಿಶಿಷ್ಟ ರೂಪದಲ್ಲಿ ಒಂದುಗೂಡಿಸಿ ಹೊಸ ನೃತ್ಯ ಕಂಡುಹಿಡಿದರು. ಅಸ್ತಾದ್ ಡೆಬೂ ಗುಜರಾತ್‌ನ ಸವಾಸರಿ ಪಟ್ಟಣದಲ್ಲಿ ಜನಿಸಿದರು, ಇವರು ಕಥಕ್ ಹಾಗೂ ಕಥಕ್ಕಲಿ ಎರಡು ನೃತ್ಯ ಪ್ರಕಾರಗಳನ್ನು ಅಭ್ಯಾಸ ಮಾಡಿದ್ದರು, ಬಳಿಕ ಎರಡನ್ನು ಒಂದುಗೂಡಿಸಿ ಹೊಸ ನೃತ್ಯ ಪ್ರಕಾರವನ್ನೇ ಕಂಡು ಹಿಡಿದ ಹೆಗ್ಗಳಿಕೆ ಇವರಿಗೆ ಸೇರುತ್ತದೆ. ಭಾರತೀಯ ಹಾಗೂ ಪಾಶ್ಚಾತ್ಯ ಪರಂಪರೆಯನ್ನ ಒಂದುಗೂಡಿಸಿ ರಚಿಸಿದ ವಿನೂತನ ಶೈಲಿ ಭಾರತೀಯ ನೃತ್ಯ ಈಗಲೂ ಹೆಸರುವಾಸಿಯಾಗಿದೆ.

## ಕರ್ನಾಟಕದ ಫುಟ್‌ಬಾಲ್ ಆಟಗಾರ ಯತಿರಾಜ್ ವಿಧಿವಶ.



ಭಾರತ ಫುಟ್‌ಬಾಲ್ ತಂಡದಲ್ಲಿ ಆಡಿದ್ದ ಕರ್ನಾಟಕದ ಧರ್ಮಲಿಂಗಮ್ ಯತಿರಾಜ್ ತಮ್ಮ 89 ನೇ ವಯಸ್ಸಿನಲ್ಲಿ ನಿಧನರಾದರು.
# ಧರ್ಮಲಿಂಗಮ್ ಯತಿರಾಜ್ ರವರು ಕರ್ನಾಟಕ ತಂಡದ ಪರ ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿ, ಡುರಾಂಡ್ ಕಪ್, ರೋವರ್ಸ್ ಕಪ್ ಹಾಗೂ ಸ್ಟಾಫರ್ಡ್ ಕಪ್ ಟೂರ್ನಿಗಳಲ್ಲಿ ಭಾಗವಹಿಸಿದ್ದರು.
# 1962ರಲ್ಲಿ ನಡೆದ ಏಷ್ಯನ್ ಗೇಮ್ಸ್‌ನ ಕ್ರೀಡಾಕೂಟದಲ್ಲಿ ಭಾರತ ತಂಡವು ಚಿನ್ನದ ಪದಕ ಮುಡಿಗೇಸರಿಸಿಕೊಂಡಿತು.
# ಕರ್ನಾಟಕ ರಾಜ್ಯ ತಂಡಕ್ಕೆ ಆಯ್ಕೆಗಾರ ಹಾಗೂ ಕೋಚ್ ಆಗಿಯೂ ಇವರು ಕಾರ್ಯನಿರ್ವಹಿಸಿದ್ದರು. ಅಲ್ಲದೆ ರಾಜ್ಯ ಫುಟ್‌ಬಾಲ್ ಸಂಸ್ಥೆಯು ಇವರಿಗೆ ಗೌರವ ಆಜೀವ ಸದಸ್ಯತ್ವ ನೀಡಿತ್ತು.

## ಹಿಂದೂ ಸಾಗರದಲ್ಲಿ ಹಿಡಿತ ಸಾದಿಸಲು ವಿವಿಧ ರಾಷ್ಟ್ರಗಳಿಂದ 120 ಕ್ಕೂ ಅಧಿಕ ಯುದ್ಧನೌಕೆಗಳ ನಿಯೋಜನೆ



ಹಿಂದೂ ಮಹಾಸಾಗರ ವ್ಯಾಪ್ತಿಯಲ್ಲಿನ ಆಯಕಟ್ಟಿನ ನೆಲೆಗಳ ಮೇಲೆ ಹಿಡಿತ ಸಾಧಿಸುಲು 120ಕ್ಕೂ ಅಧಿಕ ಯುದ್ಧನೌಕೆಗಳನ್ನು ನಿಯೋಜನೆ ಮಾಡಲಾಗಿದೆ ಎಂದು ರಕ್ಷಣಾ ಸಿಬ್ಬಂದಿ ಮುಖ್ಯಸ್ಥರಾದ ಬಿಪಿನ್ ರಾವತ್ ರವರು ತಿಳಿಸಿದ್ದಾರೆ. ಇತ್ತೀಚಿಗೆ ನಡೆದ ಜಾಗತಿಕ ಭದ್ರತಾ ಶೃಂಗಸಭೆಯ ವೆಬಿನಾರ್‌ನಲ್ಲಿ ಈ ಮಾಹಿತಿಯನ್ನು ನೀಡಿದ್ದಾರೆ. 120ಕ್ಕೂ ಅಧಿಕ ಯುದ್ಧನೌಕೆಗಳು ಹಿಂದೂ ಮಹಾಸಾಗರ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳ ಭಾಗವಾಗಿ ಹಲವು ರಾಷ್ಟ್ರಗಳು ನಿಯೋಜಿಸಿರುವುದಾಗಿ ಅವರು ತಿಳಿಸಿದರು. ಶಾಂತಿ ಮತ್ತು ಸುಸ್ಥಿರ ಭದ್ರತೆಯ ಪರಿಸರ ನಿರ್ಮಾಣದ ಜೊತೆಗೆ ಸದೃಢ ಭಾರತ ನಿರ್ಮಿಸುವ ಅನಿವಾರ್ಯತೆ ಎದುರಿದೆ ಎಂದು ಬಿಪಿನ್ ರಾವತ್ ರವರು ತಿಳಿಸಿದ್ದಾರೆ.

## ISRO ದಿಂದ ಶೀಘ್ರ ಸಂವಹನ ಉಪಗ್ರಹ ಸಿಎಂಎಸ್ 01 ಉಡಾವಣೆ



ಇದೆ ಡಿಸೆಂಬರ್ 17ರಂದು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಪೋಲಾರ್ ಉಪಗ್ರಹ ಉಡಾವಣಾ ವಾಹನ ಬಳಸಿ ಸಂವಹನ ಉಪಗ್ರಹ ಸಿಎಂಎಸ್ 01 ಅನ್ನು ಉಡಾವಣೆ ಮಾಡಲಾಗುವದು ಎಂದು ಇಸ್ರೋ ಶುಕ್ರವಾರ ಮಾಹಿತಿ ನೀಡಿದೆ.
# ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ


ಕೇಂದ್ರದ ಎರಡನೆಯ ಉಡಾವಣಾ ಘಟಕದಿಂದ ಸಿಎಂಎಸ್ 01ಅನ್ನು ಉಡಾವಣೆ ಮಾಡಲಾಗುವುದು. ಇದು ಪಿಎಸ್ಎಲ್‌ವಿ 52ನೇ ಯೋಜನೆಯಾಗಿದೆ.
# ಸಿಎಂಎಸ್ 01 ಭಾರತದ 42ನೇ ಸಂವಹನ ಉಪಗ್ರಹವಾಗಿದ್ದು, ಶ್ರೀಹರಿಕೋಟಾದ ಸತೀಶ್ ಧವನ್ ಎಸ್‌ಎಚ್‌ಎಆರ್‌ನಿಂದ ಉಡಾವಣೆಯಾಗುತ್ತಿರುವ 77ನೇ ಉಡ್ಡಯನ ವಾಹನವಾಗಲಿದೆ. ಇದರಿಂದ ವಿಸ್ತೃತ ಸಿ ಬ್ಯಾಂಡ್ ಭಾರತದ ಮುಖ್ಯಭೂಮಿ, ಅಂಡಮಾನ್ ನಿಕೋಬಾರ್ ಮತ್ತು ಲಕ್ಷದ್ವೀಪಗಳಲ್ಲಿ ಸಂವಹನಕ್ಕೆ ನೆರವಾಗುತ್ತದೆ.

## ಭಾರತ ಇಂಗ್ಲೆಂಡ್ ಪಿಂಕ್ ಬಾಲ್ ಟೆಸ್ಟ್ ವಿಶ್ವದ ಬೃಹತ್ ಸ್ಟೇಡಿಯಂನಲ್ಲಿ ಆಯೋಜನೆ



ಅಹ್ಮದಾಬಾದ್‌ನಲ್ಲಿ ನಿರ್ಮಾಣಗೊಂಡ 'ಸರ್ದಾರ್ ಪಟೇಲ್ ಮೊಟೇರಾ ಸ್ಟೇಡಿಯಂ'ನಲ್ಲಿ ಹಗಲು ರಾತ್ರಿ ಟೆಸ್ಟ್ ಪಂದ್ಯವನ್ನು ಮುಂದಿನ ವರ್ಷ ಭಾರತ ಇಂಗ್ಲೆಂಡ್ ನಡುವೆ ಆಯೋಜಿಸಲು ಬಿಸಿಸಿಐ ವೇಳಾಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದೆ.
# ಭಾರತ ಬಾಂಗ್ಲಾದೇಶ ನಡುವೆ ಹಗಲು ರಾತ್ರಿ ಟೆಸ್ಟ್ ಕಳೆದ ವರ್ಷ ಈಡನ್ ಗಾರ್ಡನ್ಸ್‌ನಲ್ಲಿ ನಡೆದಿತ್ತು. ಇದೀಗ ಭಾರತದ ಆತಿಥ್ಯದಲ್ಲಿ ನಡೆಯುವ ದ್ವಿತೀಯ ಪಿಂಕ್ ಬಾಲ್ ಟೆಸ್ಟ್ ಫೆ. 24ರಿಂದ ಅಹ್ಮದಾಬಾದ್ ಡೇ ನೈಟ್ ಟೆಸ್ಟ್ ಆರಂಭವಾಗಲಿದೆ.
# ಮೊಟೆರಾ ಕ್ರೀಡಾಂಗಣವನ್ನು 800 ಕೋಟಿ ರೂ ವೆಚ್ಚದಲ್ಲಿ ಪುನರ್ ನಿರ್ಮಾಣ ಮಾಡಿ ಸರ್ದಾರ್ ಪಟೇಲ್ ಕ್ರೀಡಾಂಗಣ ಎಂದು ಹೆಸರಿಸಲಾಗಿದೆ. ಇದೀಗ ಈ ಕ್ರೀಡಾಂಗಣ ವಿಶ್ವದ ಬೃಹತ್ ಕ್ರಿಕೆಟ್ ಸ್ಟೇಡಿಯಂ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕ್ರೀಡಾಂಗಣವು ಒಟ್ಟು 1.10 ಲಕ್ಷ ವೀಕ್ಷಕರ ಸಾಮರ್ಥ್ಯ ಹೊಂದಿದೆ.

## ಎಸ್.ಎಲ್ ಭೈರಪ್ಪರ 'ಪರ್ವ' ಕಾದಂಬರಿ ಚೀನಿ, ರಷ್ಯನ್ ಭಾಷೆಗೆ ಅನುವಾದ





ನಾಡಿನ ಹಿರಿಯ ಸಾಹಿತಿ, ಸರಸ್ವತಿ ಸಮ್ಮಾನ್ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಎಸ್.ಎಲ್ ಭೈರಪ್ಪ ರವರ ಕಾದಂಬರಿ 'ಪರ್ವ'ವನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯು ಚೀನಿ ಹಾಗೂ ರಷ್ಯನ್ ಭಾಷೆಗಳಿಗೆ ಭಾಷಾಂತರ ಮಾಡಿದೆ
# ಪರ್ವ ಕಾದಂಬರಿವು 1979ರಲ್ಲಿ ಮೊದಲು ಮುದ್ರಣ ಕಂಡು, ನಂತರ 23 ಬಾರಿ ಮರು ಮುದ್ರಣಗೊಂಡು ಅಪಾರ ಜನಪ್ರಿಯತೆಗೆ ಪಡೆದುಕೊಂಡಿದೆ. ಭಾರತದ ಕಲೆ ಹಾಗೂ ಸಂಸ್ಕೃತಿಯನ್ನು ಪರಿಚಯಿಸುವ ದೃಷ್ಟಿಯಿಂದ ಭಾರತದ 10 ಕೃತಿಗಳನ್ನು ಇತರ ದೇಶದ ಭಾಷೆಗಳಿಗೆ ಭಾಷಾಂತರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚಿಗೆ ಆದೇಶ ನೀಡಿದ್ದರು.
# ಸಾಹಿತಿ ಎಸ್.ಎಲ್ ಭೈರಪ್ಪರವರು ದೇಶ ದೇಶಗಳ ನಡುವೆ ಸಾಹಿತ್ಯದ ಮೂಲಕ ಸಾಂಸ್ಕೃತಿಕ ವಿನಿಮಯ ಆಗುತ್ತಿರುವುದು ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆಯಾಗಲಿದೆ, 'ರಷ್ಯಾ ಮತ್ತು ಚೀನಾ' ಭಾಷೆಗಳಿಗೆ ಪರ್ವ'ಅನುವಾದ ಗೊಂಡಿರುವುದು ಸಂತಸ ತಂದಿದೆ ಎಂದು ಹೇಳಿದರು

# 14-12-2020

## ಉತ್ತರ ಪ್ರದೇಶ ಸರ್ಕಾರದಿಂದ ಜಾನಪದ ಕಲಾವಿದರಿಗೆ ತಿಂಗಳಿಗೆ 5 ಸಾವಿರ ವಿದ್ಯಾರ್ಥಿವೇತನ ಘೋಷಣೆ



# 2021ರ ಜನವರಿಯಿಂದ ಪ್ರತಿ ತಿಂಗಳು 5,000 ರೂ ವಿದ್ಯಾರ್ಥಿವೇತನವನ್ನು ಜಾನಪದ ಕಲಾವಿದರು, ವರ್ಣಚಿತ್ರಕಾರರು ಮತ್ತು ಶಿಲ್ಪಿಗಳಿಗೆ ನೀಡುವುದಾಗಿ ಉತ್ತರ ಪ್ರದೇಶ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಪ್ರಸ್ತಾಪವನ್ನು ಲಲಿತ ಕಲಾ ಅಕಾಡೆಮಿ ಸರ್ಕಾರಕ್ಕೆ ವರ್ಗಾಯಿಸಿದೆ.
# ಸಂಶೋಧನೆ ಮಾಡುತ್ತಿರುವ ಗರಿಷ್ಠ 40 ವರ್ಷ ವಯಸ್ಸಿನ ಜಾನಪದ ಕಲಾವಿದರನ್ನು ಪ್ರೋತ್ಸಾಹಿಸಲು ಈ ವಿದ್ಯಾರ್ಥಿವೇತನವನ್ನು ಪ್ರಾರಂಭಿಸಲಾಗಿದೆ. ಹಾಗೂ ಸಂಶೋಧನೆ ನಡೆಸುವ ಕಲಾವಿದರಿಗೆ ಚಿತ್ರಕಲೆ ಮತ್ತು ಶಿಲ್ಪಕಲಾ ಪ್ರದರ್ಶನಕ್ಕಾಗಿ 10,000 ರೂ ಪ್ರೋತ್ಸಾಹ ಧನ ನೀಡಲಾಗುತ್ತಿದೆ.
# ಲಲಿತ ಕಲಾ ಅಕಾಡೆಮಿ ಇಂದ ಉತ್ತರ ಪ್ರದೇಶ

ಜಾನಪದ ಕಲಾವಿದರನ್ನು ಆಕರ್ಷಿಸಿಸುವದರ ಜೊತೆಗೆ ಕಲಾವಿದರಿಗೆ ಸರಿಯಾದ ವೇದಿಕೆ ಹಾಗೂ ಪ್ರೋತ್ಸಾಹವೂ ಸಿಗುತ್ತಿದೆ, ಎಂದು ಲಲಿತ ಕಲಾ ಅಕಾಡೆಮಿಯ ಕಾರ್ಯದರ್ಶಿ ಯಶ್ವಂತ್ ಸಿಂಗ್ ರಾಥೋಡ್ ತಿಳಿಸಿದ್ದಾರೆ.

## ಸಿಆರ್‌ಪಿಎಫ್ ಯೋಧರ ಸಾಹಸ ಕುರಿತ 'ದಿ ಶೌರ್ಯ ಅನ್‌ಬಾಂಡ್' ಪುಸ್ತಕ ಬಿಡುಗಡೆ



ಕೇಂದ್ರ ಮೀಸಲು ಪೊಲೀಸ್ ಪಡೆ (CRPF) ಯು ತನ್ನ ಪಡೆಯ ವೀರ ಹುತಾತ್ಮ, ಧೈರ್ಯಶಾಲಿ 13 ಯೋಧರ ಸಾಹಸ ಕುರಿತಾದ 'ದಿ ಶೌರ್ಯ ಅನ್ ಬಾಂಡ್' ಎಂಬ ಕೃತಿಯನ್ನು ಬಿಡುಗಡೆ ಮಾಡಿದೆ. ಇನ್ನು ಈ ವಿಶೇಷ ಕೃತಿಯಲ್ಲಿ 2001ರಲ್ಲಿ ಸಂಸತ್ ಭವನ ದಾಳಿ ವೇಳೆ ಹುತಾತ್ಮರಾದ ವೀರ ಯೋಧ ಕಮಲೇಶ್ ಕುಮಾರಿ ಅವರ ಜೀವನಗಾಥೆಯನ್ನೂ ಒಳಗೊಂಡಿದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಭಾನುವಾರ ಈ ಕೃತಿಯನ್ನು ಬಿಡುಗಡೆಗೊಳಿಸಿದರು.

## ಕೇಂದ್ರದಿಂದ ವಾರಣಾಸಿಯಲ್ಲಿ ವಿಶ್ವದರ್ಜೆಯ 'ರುದ್ರಾಕ್ಷ' ಸಮಾವೇಶ ಕೇಂದ್ರ ಶೀಘ್ರ ಅಸ್ತಿತ್ವಕ್ಕೆ



2015 ರಲ್ಲಿ ನರೇಂದ್ರ ಮೋದಿ ಹಾಗೂ ಜಪಾನ್ ಪ್ರಧಾನಿ ಶಿಂಜೋ ಅಬೆ ರವರು ವಾರಾಣಸಿಯ ದೇವಾಲಯಕ್ಕೆ ಭೇಟಿ ನೀಡಿ ಬೃಹತ್ ಸಮಾವೇಶ ಕೇಂದ್ರ "ರುದ್ರಾಕ್ಷ"ಕ್ಕೆ ಶಿಲಾನ್ಯಾಸ ನೆರವೇರಿಸಿದ್ದರು. ಇದೀಗ ಈ ವಿಶ್ವದರ್ಜೆಯ ರುದ್ರಾಕ್ಷ ಸಮಾವೇಶ ಕೇಂದ್ರ ಶೀಘ್ರವೇ ಅಸ್ತಿತ್ವಕ್ಕೆ ಬರಲಿದೆ. ಈ ಕೇಂದ್ರದಲ್ಲಿ ಸಂಗೀತ, ನಾಟಕ, ಪ್ರದರ್ಶನಗಳು ನಡೆಯಲಿವೆ, ಈ ಸಮಾವೇಶ ಕೇಂದ್ರದಲ್ಲಿ 108 ರುದ್ರಾಕ್ಷಿಗಳನ್ನು ಸ್ಥಾಪಿಸಲಾಗುತ್ತದೆ. ರುದ್ರಾಕ್ಷ ನಿರ್ಮಾಣದ ಯೋಜನೆಯನ್ನುಜಪಾನ್ ನ ಸಂಸ್ಥೆ ಫುಜಿತಾ ಕಾರ್ಪೊರೇಷನ್ ನಿರ್ವಹಿಸಲಿದ್ದು, ಇದು 3 ಎಕರೆ ಪ್ರದೇಶದಲ್ಲಿ, 186 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣವಾಗಲಿದ್ದು, 1,200 ಮಂದಿ ಈ ಕಾರ್ಯಕ್ರಮಗಳನ್ನು ವೀಕ್ಷಿಸುವ ಸಾಮರ್ಥ್ಯ ಹೊಂದಿದೆ. 2018 ರಲ್ಲಿ ಪ್ರಾರಂಭವಾದ ಕಾಮಗಾರಿ 2021 ಕ್ಕೆ ಪೂರ್ಣಗೊಳ್ಳಲಿದ್ದು, ಪ್ರಧಾನಿ ಮೋದಿಯವರು ರುದ್ರಾಕ್ಷ ಲೋಕಾರ್ಪಣೆ ಮಾಡುವ ಸಾಧ್ಯತೆ ಇದೆ.

## ವಾಜಪೇಯಿ ಕ್ರೀಡಾಂಗಣ ನಿರ್ಮಾಣಕ್ಕೆ ಅಡಿಗಲ್ಲು;



ಬೆಂಗಳೂರು ಅಟಲ್ ಬಿಹಾರಿ ವಾಜಪೇಯಿ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಎಚ್.ಎಸ್.ಆರ್. ಬಡಾವಣೆಯಲ್ಲಿ ಇತ್ತೀಚಿಗೆ ಚಾಲನೆ ನೀಡಲಾಯಿತು. ಒಟ್ಟು 4.25 ಕೋಟಿ ರೂ ವೆಚ್ಚದಲ್ಲಿ 7.24 ಎಕರೆ ಪ್ರದೇಶದಲ್ಲಿ ಕ್ರೀಡಾಂಗಣವನ್ನು ಕರ್ನಾಟಕ ಸರ್ಕಾರ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ನಿರ್ಮಾಣಗೊಳ್ಳಲಿದ್ದು, ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದ ನೀಲನಕ್ಷೆಯನ್ನು ವೀಕ್ಷಣೆಮಾಡಿ ಕಾಮಗಾರಿಗೆ ಸಂಸದ ತೇಜಸ್ವಿ ಸೂರ್ಯ ಮತ್ತು ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಶನಿವಾರ ಚಾಲನೆ ನೀಡಿದರು.

## ಬ್ಯಾಂಕ್ ಗ್ರಾಹಕರಿಗೆ ಇಂದಿನಿಂದ 24×7 RTGS ಸೌಲಭ್ಯ ಲಭ್ಯ




ಡಿ.14 ರಿಂದ ಭಾರತೀಯ ರಿಸರ್ವ್ ಬ್ಯಾಂಕ್ ಡಿಜಿಟಲ್ ಪಾವತಿಗೆ ಒತ್ತು ನೀಡುವ ನಿಟ್ಟಿನಲ್ಲಿ ದಿನವಿಡೀ 24×7 RTGS ಹಣ ವರ್ಗಾವಣೆ ಮಾಡಲು ಅವಕಾಶ ನೀಡಿದೆ. ಹಾಗೂ 2020ರ ಡಿಸೆಂಬರ್ 14ರಿಂದ RTGS ಅನ್ನು ದಿನದ 24 ಗಂಟೆಯೂ ಲಭ್ಯವಾಗುವಂತೆ

ಮಾಡಲು ನಿರ್ಧರಿಸಲಾಗಿದೆ' ಎಂದು ಆರ್ ಬಿಐ ಗವರ್ನರ್ ಶಕ್ತಿಕಾಂತ ದಾಸ್ ಪ್ರಕಟಿಸಿದ್ದಾರೆ.

## ಜೈಪುರದಲ್ಲಿ RBIನಿಂದ ಆಟೋಮೆಟೆಡ್ ಬ್ಯಾಂಕ್ ನೋಟ್ ಪ್ರೊಸೆಸಿಂಗ್ ಸೆಂಟರ್




ರಾಜಸ್ಥಾನದ ಜೈಪುರದಲ್ಲಿ RBI ನಿಂದ ಆಟೋಮೆಟೆಡ್ ಬ್ಯಾಂಕ್ ನೋಟ್ ಪ್ರೊಸೆಸಿಂಗ್ ಸೆಂಟರ್ ಅನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಕರೆನ್ಸಿ ನೋಟುಗಳ ಸ್ವೀಕೃತಿ, ಸಂಗ್ರಹ ಹಾಗೂ ರವಾನೆಯನ್ನು ಇಲ್ಲಿಂದ ಮಾಡಲಾಗುತ್ತದೆ, ಕಾರಣ ಚಲಾವಣೆಯಲ್ಲಿ ಹೆಚ್ಚುತ್ತಿರುವ ಬ್ಯಾಂಕ್ ನೋಟುಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಸೆಂಟರ್ ಅನ್ನು ಸ್ಥಾಪಿಸಲಾಗುತ್ತಿದೆ. 1,883 ಮಿಲಿಯನ್ ತುಂಡು ಹೊಸ ನೋಟುಗಳನ್ನು 2024 25ರ ಸಾಲಿಗೆ ದಿನದ ಲೆಕ್ಕದಲ್ಲಿ ಸರಾಸರಿಯಲ್ಲಿ ಜೈಪುರದ ABPCನಲ್ಲಿ ಸಂಗ್ರಹಿಸಿಡಬಹುದಾಗಿದ್ದು, ಹಾಗೆ 27,757 ಮಿಲಿಯನ್ ತುಂಡು ನೋಟುಗಳನ್ನು 2039 40ರ ಹೊತ್ತಿಗೆ ಸಂಗ್ರಹಿಸಬಹುದಾಗಿದೆ ಎಂದು RBI ತಿಳಿಸಿದೆ. ಚಲಾವಣೆಗೆ ಉಪಯುಕ್ತ ಅಲ್ಲ ಎಂದ್ ನೋಟುಗಳನ್ನು ಕರೆನ್ಸಿ ವೆರಿಫಿಕೇಷನ್ ಅಂಡ್ ಪ್ರೊಸೆಸಿಂಗ್ ಸಿಸ್ಟಮ್ ಮೂಲಕ ಪರಿಶೀಲನೆ ನಡೆಸಿ ನಾಶಪಡಿಸಲಾಗುತ್ತದೆ.

## ಬಿಹಾರದ ಕೊಯಿಲ್ವಾರ್ ಸೇತುವೆ ಸಚಿವ ಶ್ರೀ ನಿತಿನ್ ಗಡ್ಕರಿಯವರಿಂದ ಉದ್ಘಾಟನೆ



ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ಶ್ರೀ ನಿತಿನ್ ಗಡ್ಕರಿಯವರು 2020 ರ ಡಿ.10 ರಂದು ಬಿಹಾರದ ಸೋನೆ ನದಿಯ ಮೇಲಿರುವ ಕೊಯಿಲ್ವಾರ್ ಸೇತುವೆಗೆ ಚಾಲನೆ ನೀಡಿದರು. ಒಟ್ಟು 256 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸೇತುವೆ ನಿರ್ಮಿಸಲಾಗಿದ್ದು, ಇದು ಮೂರು ಪಥಗಳ ಗಾಡಿ ಮಾರ್ಗವಿದೆ. ಇದರಲ್ಲಿ ಸೇತುವೆ ತರುವಾಯ NH 30 ಮತ್ತು NH 922 ನಲ್ಲಿ ಸಂಚಾರವನ್ನು ಕಡಿಮೆ ಮಾಡುತ್ತದೆ. ಇದು ಉತ್ತರ ಪ್ರದೇಶ ಮತ್ತು ಬಿಹಾರ ನಡುವಿನ ಪ್ರಮುಖ ಸಂಪರ್ಕವಾಗಿದೆ. ಬಿಹಾರದ ಕೊಯಿಲ್ವಾರ್ ಸೇತುವೆ ಭಾರತದ ಅತಿ ಉದ್ದದ ಸೇತುವೆಯಾಗಿದೆ. ಈ ಸೇತುವೆಯನ್ನು ಅಬ್ದುಲ್ ಬ್ಯಾರಿ ಸೇತುವೆ ಎಂದೂ ಕರೆಯುತ್ತಾರೆ, ಇದನ್ನು ಅಂದಿನ ಭಾರತದ ವೈಸ್ರಾಯ್ ಲಾರ್ಡ್ ಎಲ್ಗಿನ್ ಉದ್ಘಾಟಿಸಿದರು.

# 15-12-2020

## ಮಹೀಂದ್ರಾ ಇನ್ಶ್ಯುರೆನ್ಸ್ ಜೊತೆ ಎಸ್‌ಬಿಐ(SBI) ಜನರಲ್ ಇನ್ಶ್ಯುರೆನ್ಸ್ ಒಪ್ಪಂದ




SBI ಜನರಲ್ ಇನ್ಶ್ಯುರೆನ್ಸ್ ಮತ್ತು ಮಹೀಂದ್ರಾ ಇನ್ಶ್ಯುರೆನ್ಸ್ ಬ್ರೋಕರ್ಸ್ ಲಿಮಿಟೆಡ್ ಪರಸ್ಪರ ಒಪ್ಪಂದ ಮಾಡಿಕೊಂಡಿವೆ, ಎರಡು ಮತ್ತು ಮೂರನೇ ಹಂತದ ನಗರ ಪಟ್ಟಣಗಳಿಗೆ ವಿಮೆ ಸೌಲಭ್ಯ ವಿಸ್ತರಿಸಲು ಒಪ್ಪಂದ ಮಾಡಿಕೊಂಡಿವೆ. ಮಹೀಂದ್ರಾ ಇನ್ಶ್ಯುರೆನ್ಸ್ ಬ್ರೋಕರ್ಸ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಜೈದೀಪ್ ಡಿ ಅವರು ಡಿಜಿಟಲ್ ವಿಧಾನದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಿಮೆ ಸೌಲಭ್ಯ ವಿಸ್ತರಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದ್ದಾರೆ. ಈ ಒಪ್ಪಂದದಿಂದ ಕಾರು, ವಾಣಿಜ್ಯ ವಾಹನ, ಟ್ರ್ಯಾಕ್ಟರ್, ಬಳಸಿದ ಕಾರು ಹಾಗೂ ವಾಹನಗಳ ವಿಮೆ ವಿಸ್ತರಿಸಲು ಅನುಕೂಲವಾಗಲಿದೆ. ಅಲ್ಲದೆ ಈ ವಿಮೆ ಆರೋಗ್ಯದ ಕುರಿತು ಅರಿವು ಮೂಡಿಸುವಲ್ಲಿಯೂ ನೆರವಾಗಲಿದೆ. ಇದರಿಂದ ಹೆಚ್ಚು ಜನರು ಆರೋಗ್ಯ ವಿಮೆ ಪಡೆಯುವಲ್ಲಿ ಸಹಾಯವಾಗಲಿದೆ, ಎಂಬ ಭರವಸೆ ಇದೆ ಎಂದು ಎಸ್‌ಬಿಐ ಜನರಲ್ ಇನ್ಶ್ಯುರೆನ್ಸ್‌ನ ಸಿಇಒ ಪಿ.ಸಿ. ಕಂದ್ಪಾಲ್‌ರವರುತಿಳಿಸಿದ್ದಾರೆ.

## ಭಾರತದಲ್ಲಿ ಅತಿ ಹೆಚ್ಚು ಗೂಗಲ್‌ನಲ್ಲಿ ಸರ್ಚ್ ಆದ ವ್ಯಕ್ತಿಗಳು ಪಟ್ಟಿ ಬಿಡುಗಡೆ




ಇದೆ ಡಿಸೆಂಬರ್ 09 ರಂದು ಗೂಗಲ್ ಕಂಪನಿಯು ಭಾರತದಲ್ಲಿ 2020ನೇ ವರ್ಷದಲ್ಲಿ ಅತಿ ಹೆಚ್ಚು ಸರ್ಚ್ ಆದ ವ್ಯಕ್ತಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಿದ್ದು, ಪಟ್ಟಿ ಈ ಕೆಳಗಿನಂತಿರುತ್ತದೆ. ಅತಿ ಹೆಚ್ಚು ಸರ್ಚ್ ಆದ ವ್ಯಕ್ತಿಗಳು, 1. ಜೋ ಬೈಡನ್ 2. ಅರ್ನಬ್ ಗೋಸ್ವಾಮಿ 3. ಅಮಿತಾಬ್ ಬಚ್ಚನ್ 4. ಕಿಮ್ ಜಾಂಗ್ ಉಂಗ್ 5. ಕನ್ನಿಕಾ ಕಪೂರ್ 6. ರಶೀದ್ ಖಾನ್ 7. ರೇಹಾ ಚಕ್ರವರ್ತಿ 8. ಕಮಲಾ ಹ್ಯಾರೀಸ್ 9. ಅಂಕಿತಾ ಲೋಕಂಡೆ 10. ಕಂಗನಾ ರಾಣವತ್

## ಉತ್ತರ ಪ್ರದೇಶದಲ್ಲಿ 2000 ವರ್ಷ ಹಿಂದಿನ ನಾಣ್ಯಗಳು ಪತ್ತೆ



ಸುಮಾರು 1500 ರಿಂದ 2000 ವರ್ಷಕ್ಕಿಂತ ಹಳೆಯ ಕಾಲದ ನಾಣ್ಯಗಳು ಉತ್ತರ ಪ್ರದೇಶದ ರಾಜ್ಯದ ಮೊಹಮ್ಮದಾಬಾದ್ ಗೋಹ್ನಾ ತಹಸೀಲ್‌ನಲ್ಲಿ ಪತ್ತೆಯಾಗಿವೆ, ಅಲ್ಲಿನ ಗ್ರಾಮಸ್ಥರಿಂದ 128 ಪುರಾತನ ನಾಣ್ಯಗಳು, ಪ್ರತಿಮೆಗಳು ಹಾಗೂ ಪಾತ್ರೆಗಳು ಪತ್ತೆ ಹಚ್ಚಿದ್ದಾರೆ ಎಂದು ಜಿಲ್ಲಾಧಿಕಾರಿ ಅಮಿತ್ ಕುಮಾರ್ ಬನ್ಸಾಲ್ ತಿಳಿಸಿದ್ದಾರೆ.

## ಹಿರಿಯ ವಿಜ್ಞಾನಿ ರೊದ್ದಂ ನರಸಿಂಹ ನಿಧನ



ಬೆಂಗಳೂರಿನ ಹಿರಿಯ ವಿಜ್ಞಾನಿ ಪದ್ಮ ವಿಭೂಷಣ ಪ್ರಶಸ್ತಿ ಪುರಸ್ಕೃತ, ಪ್ರೊಫೆಸರ್ ರೊದ್ದಂ ನರಸಿಂಹ ರವರು ತಮ್ಮ 87ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ. ರೊದ್ದಂ ನರಸಿಂಹ ರವರು 1933ರ ಜು. 20ರಂದು ಜನಿಸಿದರು, ನಂತರ ಅವರು ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಇ ಪದವಿ ಪಡೆದ ನಂತರ ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಉನ್ನತ ವ್ಯಾಸಂಗ ಮತ್ತು ಸಂಶೋಧನೆ ಮಾಡಿದರು. ಮತ್ತು ಇವರು ಯುವ ವಿಜ್ಞಾನಿಗಳಿಗೆ ಮಾರ್ಗದರ್ಶಕರಾಗಿದ್ದರು.

## ವಿಶ್ವದಲ್ಲೇ ಭಾರತ ಮೊಬೈಲ್ ಉತ್ಪಾದನೆಯಲ್ಲಿ 2 ನೇ ಸ್ಥಾನ 6 ಲಕ್ಷ ಉದ್ಯೋಗ



# ವಿಶ್ವದಲ್ಲಿಯೇ ಭಾರತವು ಮೊಬೈಲ್ ತಯಾರಿಸುವುದರಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ಕೇಂದ್ರ ಟೆಲಿಕಾಂ ಖಾತೆ ಸಚಿವ ರವಿಶಂಕರ ಪ್ರಸಾದ್ ರವರು ತಿಳಿಸಿದ್ದಾರೆ. ಮೊಬೈಲ್ ಕಂಪನಿಗಳು ಮುಂಬರುವ 5 ವರ್ಷಗಳಲ್ಲಿ 3 ಲಕ್ಷ ನೇರ ಮತ್ತು 6 ಲಕ್ಷ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತವೆ ಎಂದು ತಿಳಿಸಲಾಗಿದೆ.

# ಭಾರತ ದೇಶದಲ್ಲಿ 2014ರಲ್ಲಿ ಕೇವಲ ಎರಡು ಮೊಬೈಲ್ ಉತ್ಪಾದನೆ ಕಾರ್ಖಾನೆಗಳಿದ್ದವು ಇತ್ತೀಚಿಗೆ ಭಾರತ ದೇಶದಲ್ಲಿ 260 ಮೊಬೈಲ್ ತಯಾರಿಸುವ ಕಾರ್ಖಾನೆಗಳಿವೆ. ಇನ್ನು ಕೆಲವೇ ವರ್ಷಗಳಲ್ಲಿ ಚೀನಾ ದೇಶವನ್ನು ಭಾರತವು ಹಿಂದಿಕ್ಕಲಿದೆ ಎಂದು ಮಾಹಿತಿ ನೀಡಿದ್ದಾರೆ.

## ಭಾರತ ಮ್ಯಾನ್ಮಾರ್ ಔಷಧ ನಿಯಂತ್ರಣ ಕಾರ್ಯಾಚರಣೆಯ ದ್ವಿಪಕ್ಷೀಯ ಸಭೆ



ಭಾರತ ಮ್ಯಾನ್ಮಾರ್ ಔಷಧ ನಿಯಂತ್ರಣ ಕಾರ್ಯಾಚರಣೆ ಐದನೇ ದ್ವಿಪಕ್ಷೀಯ ಸಭೆಯು

ಇತ್ತೀಚೆಗೆ ನಡೆಯಿತು. ಕೇಂದ್ರ ಸಮಿತಿಯು ಈ ಸಭೆಯಲ್ಲಿ ಭಾರತದ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಮತ್ತು ಮ್ಯಾನ್ಮಾರ್‌ನ ಮಾದಕ ದ್ರವ್ಯ ದುರುಪಯೋಗ ನಿಯಂತ್ರಣ ಕುರಿತ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲು ಒಪ್ಪಿಕೊಳ್ಳಲಾಗಿದೆ. ಭಾರತ, ಮ್ಯಾನ್ಮಾರ್ ದೇಶಗಳು ಇತ್ತೀಚೆಗೆ ಹತ್ತು ಒಪ್ಪಂದಗಳಿಗೆ ಸಹಿ ಹಾಕಿದವು. ಈ ದ್ವಿಪಕ್ಷೀಯ ವ್ಯಾಪಾರವು 1.7 ಬಿಲಿಯನ್ USD ಯಾಗಿದೆ, ಇಂಧನ, ಸಂವಹನ, ಆರೋಗ್ಯ, ಮೂಲಸೌಕರ್ಯ ಕ್ಷೇತ್ರಗಳಲ್ಲಿ ಭಾರತವು ಮ್ಯಾನ್ಮಾರ್‌ನ ಐದನೇ ಅತಿದೊಡ್ಡ ವ್ಯಾಪಾರ ಪಾಲುದಾರವಾಗಿದೆ.

## 16-12-2020

### 306 ಎಲೆಕ್ಟೋರಲ್ ಮತಗಳೊಂದಿಗೆ ಜೋ ಬೈಡನ್ ಗೆ ಜಯ




ಎಲೆಕ್ಟೋರಲ್ ಕಾಲೇಜ್ ಅಧಿಕೃತವಾಗಿ ಅಮೆರಿಕಾದ ಚುನಾವಣಾ ಫಲಿತಾಂಶ ಘೋಷಣೆ ಮಾಡಿದೆ. ಡೆಮಾಕ್ರಟಿಕ್ ಪಕ್ಷದ ಜೋ ಬೈಡನ್ ಅವರು 306 ಎಲೆಕ್ಟೋರಲ್ ಮತಗಳನ್ನು ಪಡೆದು ಜಯ ಗಳಿಸಿದ್ದಾರೆ. ಒಂದು ತಿಂಗಳು ಕಳೆದ ಬಳಿಕ ಅಮೆರಿಕ ಅಧ್ಯಕ್ಷೀಯ ಚುನಾವಣೆ ಫಲಿತಾಂಶ ಅಧಿಕೃತವಾಗಿ ಹೊರಬಂದಿದೆ. ಡೆಮಾಕ್ರಟಿಕ್ ಪಕ್ಷದ ಜೋ ಬೈಡನ್ ಅವರು ಜಯಗಳಿಸಿರುವುದಾಗಿ ಮಾಧ್ಯಮಗಳು ತಿಳಿಸಿದವು, ಇವರು ಮುಂದಿನ ಅಧ್ಯಕ್ಷರಾಗಲಿದ್ದಾರೆ ಎಂದು ಅಧಿಕೃತವಾಗಿ ಘೋಷಣೆ ಮಾಡಲಾಗಿದೆ.

### ಭಾರತೀಯ ನೌಕಾಪಡೆ ಬತ್ತಳಿಕೆಗೆ ಶೀಘ್ರದಲ್ಲೇ 38 ಬ್ರಹ್ಮೋಸ್ ಸೂಪರ್ ಸಾನಿಕ್ ಕ್ಷಿಪಣಿ ಸೇರ್ಪಡೆ




ಭಾರತೀಯ ನೌಕಾಪಡೆ ಇದೀಗ 38 ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳನ್ನು ಪಡೆದುಕೊಳ್ಳುವ ಪ್ರಸ್ತಾಪವನ್ನು ಸರ್ಕಾರದ ಮುಂದಿಟ್ಟಿದೆ. ನಿರ್ಮಾಣ ಹಂತದಲ್ಲಿರುವ ವಿಶಾಖಪಟ್ಟಣಂ ಯುದ್ಧನೌಕೆಗಳಲ್ಲಿ ಈ ಕ್ಷಿಪಣಿಗಳನ್ನು ಅಳವಡಿಸಲಾಗುವುದು ಎಂದು ಭಾರತೀಯ ನೌಕಾಪಡೆ ತಿಳಿಸಿದೆ. ಭಾರತೀಯ ನೌಕಾಪಡೆಯು 1800 ಕೋಟಿ ರೂ. ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳ ಪ್ರಸ್ತಾಪವನ್ನು ರಕ್ಷಣಾ ಸಚಿವಾಲಯದ ಮುಂದೆ ಇಡಲಾಗಿದೆ, ಇದು ಅತಿ ಶೀಘ್ರದಲ್ಲಿ ಅನುಮೋದನೆ ಪಡೆಯುವ ನಿರೀಕ್ಷೆ ಇದೆ ಎಂದು ಸರ್ಕಾರ ತಿಳಿಸಿದೆ, 450 ಕಿ.ಮೀ. ವೇಗದಲ್ಲಿ ಚಲಿಸಿ ಗುರಿ ತಲುಪಿ ವೈರಿ ಪಡೆಯನ್ನು ನಾಶಗೊಳಿಸುವ ಶಕ್ತಿಯನ್ನು ಬ್ರಹ್ಮೋಸ್ ಕ್ಷಿಪಣಿ ಹೊಂದಿದೆ.

### ಬ್ರೈಲ್ ಲಿಪಿ ಬಳಸದೆ ದಿವ್ಯಾಂಗ ವಿದ್ಯಾರ್ಥಿ ಪಿಎಚ್‌ಡಿ ಪದವಿ



ಯಾವುದೇ ಬ್ರೈಲ್ ಲಿಪಿಯ ಸಹಾಯ ಇಲ್ಲದೆ ವಿದ್ಯಾರ್ಥಿ ಎಚ್.ಎನ್ ಮನು ಕುಮಾರ್ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಗೌರವಕ್ಕೆ ಭಾಜನರಾಗಿದ್ದಾರೆ. ಚಾಮರಾಜನಗರ ಜಿಲ್ಲೆಯ ಸಮೀಪದ ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದ ದಿವ್ಯಾಂಗ ವಿದ್ಯಾರ್ಥಿ ಬ್ರೈಲ್ ಲಿಪಿ ಬಳಸದೆ ಸ್ಕ್ರೈಬ್ ಗಳನ್ನು ಬಳಸಿಕೊಂಡು ಮಹಾ ಪ್ರಬಂಧವೊಂದನ್ನು ಮಂಡಿಸಿದ್ದು, ಇದರಿಂದ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆಯುವ ಮೂಲಕ ಎಚ್.ಎನ್ ಮನು ಕುಮಾರ್ ಸಾಧನೆ ಮಾಡಿದ್ದಾನೆ. 2016ರಲ್ಲಿ ಕೆ ಸೆಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಇವರು ರಾಜ್ಯಶಾಸ್ತ್ರ ವಿಷಯದಲ್ಲಿ 'ಡಾ.ಆರ್.ಎನ್ ದಿನೇಶ್' ಅವರ ಮಾರ್ಗದರ್ಶನದಲ್ಲಿ ಚಾಮರಾಜನಗರ ಜಿಲ್ಲೆಯ ಅಂಧ ವಿದ್ಯಾರ್ಥಿಗಳ ಪ್ರಗತಿಯಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ ಎಂಬ ಮಹಾಪ್ರಬಂಧವನ್ನು 3 ವರ್ಷಗಳ ಕಾಲ 105 ಶಾಲೆಯ 354ಕ್ಕೂ ಹೆಚ್ಚು ಮಕ್ಕಳನ್ನು ಸ್ವತಃ ತಾವೇ ಸಂದರ್ಶಿಸಿ ಪ್ರಬಂಧ ಮಂಡಿಸಿ ಪಿಎಚ್‌ಡಿ ಪದವಿಯನ್ನು ಪಡೆದುಕೊಂಡಿದ್ದಾರೆ.

### ಭಾರತೀಯ ಅಂಚೆ ಇಲಾಖೆಯಿಂದ 'ಡಾಕ್ ಪೇ' ಡಿಜಿಟಲ್ ಪೇಮೆಂಟ್ ಆಪ್ ಶುರು




ಭಾರತೀಯ ಅಂಚೆ ಇಲಾಖೆಯಿಂದ 'DakPay' ಎಂಬ ಹೊಸ ಡಿಜಿಟಲ್ ಪಾವತಿ ಅಪ್ಲಿಕೇಷನ್ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ವತಿಯಿಂದ ಆರಂಭಮಾಡಲಾಗಿದೆ. ಗ್ರಾಹಕರಿಗೆ ಆನ್ ಲೈನ್ ಮೂಲಕ ಬ್ಯಾಂಕಿಂಗ್ ಸೇವೆಯನ್ನು ಈ ಅಪ್ಲಿಕೇಷನ್ ಒದಗಿಸಿಕೊಡುತ್ತದೆ. ಇದು ಇತರ ಯಾವುದೇ ಬ್ಯಾಂಕ್ ಜತೆಗೆ ಕೂಡ ಬ್ಯಾಂಕಿಂಗ್ ಸೇವೆಯನ್ನು ಬಳಸಬಹುದಾಗಿದೆ. ಯುಪಿಐ ಆಧಾರಿತ ಡಿಜಿಟಲ್ ಪಾವತಿ ಅಪ್ಲಿಕೇಷನ್ ಇದಾಗಿದ್ದು, ಇದರಿಂದ ಹಣ ವರ್ಗಾವಣೆ ಮತ್ತು ವಿವಿಧ ಪೋಸ್ಟಲ್ ಸೇವೆಗಳಿಗೆ ಇದು ತುಂಬಾ ಅನುಕೂಲಕರವಾಗಲಿದೆ ಎಂದು ಅಂಚೆ ಇಲಾಖೆ ಡಾಕ್ ಪೇ ಆರಂಭಿಸಿದೆ. ಇದು ಪ್ರಧಾನಿ ಮೋದಿ ಹೇಳಿರುವ ಆತ್ಮನಿರ್ಭರ್ ಭಾರತಕ್ಕೆ ಬಹಳ ಉಪಯುಕ್ತವಾಗಲಿದೆ ಎಂದು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಮಾಹಿತಿಯನ್ನು ನೀಡಿದ್ದಾರೆ.

## ಇನ್ನು ವಾಹನ ಸವಾರರಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಕಡ್ಡಾಯ




ಇತ್ತೀಚಿಗೆ ಕರ್ನಾಟಕ ಸರ್ಕಾರದಿಂದ ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಕಡ್ಡಾಯಗೊಳಿಸುವಂತೆ ಸುಪ್ರೀಂ ಕೋರ್ಟ್ ಆದೇಶವನ್ನು ನೀಡಿದೆ. ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಬಳಸದಿದ್ದಲ್ಲಿ 5,500 ರೂಪಾಯಿ ದಂಡ ವಿಧಿಸಲಾಗುವದು. 2 ವರ್ಷಗಳ ಹಿಂದೆಯೇ ಸುಪ್ರೀಂ ಕೋರ್ಟ್ ಹೈಸೆಕ್ಯೂರಿಟಿ ನಂಬರ್ ಪ್ಲೇಟ್ ಕಡ್ಡಾಯಗೊಳಿಸಲು ಆದೇಶವನ್ನ ನೀಡಲಾಗಿತ್ತು ಇನ್ನು ಹೈಸೆಕ್ಯೂರಿಟಿ ನಂಬರ್ ಪ್ಲೇಟ್ ಕಡ್ಡಾಯವಾಗಿ ಜೋಡಿಸಲು ಪೊಲೀಸರು ಕೆಲವು ಸಮಯಾವಕಾಶ ನೀಡಿದ್ದಾರೆ. ಬೆಂಗಳೂರು ಜೊತೆಗೆ ಕರ್ನಾಟಕ ಸೇರಿದಂತೆ ಶೀಘ್ರದಲ್ಲಿಯೇ ಎಲ್ಲಾ ಪ್ರದೇಶಗಳಲ್ಲಿ ಹೈಸೆಕ್ಯೂರಿಟಿ ನಂಬರ್ ಪ್ಲೇಟ್ ಕಡ್ಡಾಯವಾಗಲಿದೆ ಎಂದು ತಿಳಿಸಲಾಗಿದೆ.

## ದೇಶದ ಹಿಂದ್ ಕೇಸರಿ ಪ್ರಖ್ಯಾತಿಯ ಪೈಲ್ವಾನ್ ಶ್ರೀಪತಿ ಖಂಚನಾಳೆ ನಿಧನ



ಭಾರತದ ಮೊದಲ ಹಿಂದ್ ಕೇಸರಿ ಎಂದೇ ಪ್ರಖ್ಯಾತರಾದ ಚಿಕ್ಕೋಡಿ ತಾಲೂಕಿನ ಯಕ್ಸಂಬಾದ ಪೈಲ್ವಾನರಾದ ಶ್ರೀಪತಿ ಶಂಕರ ಖಂಚನಾಳೆರವರು ತಮ್ಮ 86 ನೇ ವಯಸ್ಸಿನಲ್ಲಿ ಸೋಮವಾರ ನಿಧನರಾದರು.

# ಇವರು 1959ರಲ್ಲಿ ದೆಹಲಿಯ ನ್ಯೂ ರೈಲ್ವೆ ಸ್ಟೇಡಿಯಂನಲ್ಲಿ ನಡೆದ ಕುಸ್ತಿಯಲ್ಲಿ ಆಟದಲ್ಲಿ ಪಂಜಾಬನ ಪೈಲ್ವಾನ್ ರುಸ್ತಮ ಎ ಪಂಜಾಬ್ ಬತ್ತಾಶಿಂಗ್ರನ್ನು ಸೋಲಿಸಿ ಹಿಂದ ಕೇಸರಿ ಎಂದೇ ಪ್ರಖ್ಯಾತಿ ಪಡೆದಿದ್ದರು. ಆಗ ರಾಷ್ಟ್ರಪತಿಯಾಗಿದ್ದ ರಾಜೇಂದ್ರ ಪ್ರಸಾದರು ಖಂಚನಾಳೆಯವರಿಗೆ ಹಿಂದ ಕೇಸರಿ ಪ್ರಶಸ್ತಿ ನೀಡಿ ಅವರಿಗೆ ಸನ್ಮಾನಿಸಿದ್ದರು.

# ಇವರು ಗುರುಗಳು ಶ್ರೀಪತಿ ಹಿರುಕುಡೆ, ಇವರಿಗೆ ಕರ್ನಾಟಕ ಸರಕಾರ ಕರ್ನಾಟಕ ಭೂಷಣ ಮತ್ತು ಮಹಾರಾಷ್ಟ್ರ ಸರಕಾರ ಶಿವ ಛತ್ರಪತಿ ಪ್ರಶಸ್ತಿಗಳು ಸಂದಿವೆ.

# ಇವರು ರಾಷ್ಟ್ರೀಯ ತಾಲಿಮ (ಗರಡಿ ಮನೆ) ಸಂಘದ ಅಧ್ಯಕ್ಷರಾಗಿಯು ಸಹ ಕಾರ್ಯವನ್ನು ನಿರ್ವಹಿಸಿದ್ದಾರೆ.

## ವಿಶ್ವಸಂಸ್ಥೆಯ ಚೀನಾದ ಸ್ಥಾನಿಕ ಸಂಯೋಜಕರಾಗಿ ಭಾರತದ ಸಿದ್ಧಾರ್ಥ್ ಚಟರ್ಜಿ ನೇಮಕ



ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿರುವ ಅಂಟೋನಿಯೊ ಗುಟೆರೆಸ್‌ರವರು ವಿಶ್ವಸಂಸ್ಥೆಯಲ್ಲಿ ಹಿರಿಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಭಾರತದ ಸಿದ್ಧಾರ್ಥ್ ಚಟರ್ಜಿಯವರನ್ನು ವಿಶ್ವಸಂಸ್ಥೆಯ ಚೀನಾದ ಸ್ಥಾನಿಕ ಸಂಯೋಜಕರಾಗಿ ಇತ್ತೀಚಿಗೆ ನೇಮಿಸಿದರು. ಚಟರ್ಜಿಯವರಿಗೆ ಸುಸ್ಥಿರ ಅಭಿವೃದ್ಧಿ, ಮಾನವೀಯ ಸಮನ್ವಯ, ಶಾಂತಿ ಮತ್ತು

ಸುರಕ್ಷತೆ, ಅಂತರರಾಷ್ಟ್ರೀಯ ಸಹಕಾರದ ಕ್ಷೇತ್ರಗಲ್ಲಿ ಇವರಿಗೆ 25 ವರ್ಷಗಳ ಅನುಭವವಿದೆ ಎಂದು ವಿಶ್ವಸಂಸ್ಥೆಯು ಹೇಳಿದೆ. ಇವರು ದೇಶದ ಅಭಿವೃದ್ಧಿ ಕಾರ್ಯದಲ್ಲಿ ಮತ್ತು ಸ್ಥಾನಿಕ ಸಂಯೋಜಕರು ಆಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

### ಹೊಸದಾದ ಡಿಜಿಟಲ್ ಮತದಾರರ ಗುರುತಿನ ಚೀಟಿಯ ಆರಂಭ




ಭಾರತದ ಚುನಾವಣಾ ಆಯೋಗವು ನೂತನವಾಗಿ ಡಿಜಿಟಲ್ ಮತದಾರರ ಗುರುತಿನ ಚೀಟಿಯು (EPIC) ಎಲೆಕ್ಟ್ರಾನಿಕ್ ರೂಪ ಪಡೆದುಕೊಳ್ಳಲಿದೆ. ಈ ಡಿಜಿಟಲ್ ಕಾರ್ಡ್ ಕ್ಯೂಆರ್ ಕೋಡ್ ನ್ನು ಹೊಂದಿರಲಿದ್ದು, ಇದನ್ನು ಸ್ಕ್ಯಾನ್ ಮಾಡುವ ಮೂಲಕ ಮತದಾರನ ಹೆಸರು, ವಿಳಾಸ ಮತ್ತು ಹುಟ್ಟಿದ ದಿನಾಂಕದಂತಹ ಹಲವು ಮಾಹಿತಿಯನ್ನು ತಿಳಿಯಬಹುದಾಗಿದೆ. 2021ರ ಬೇಸಿಗೆಯ ಆರಂಭದಲ್ಲಿ ವಿಧಾನಸಭಾ ಚುನಾವಣೆಗೆ ಇದು ಬಳಕೆಗೆ ತರಲಿದ್ದು ಇದನ್ನು ಅಸ್ಸಾಂ, ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಪುದುಚೇರಿಯಂತಹ ರಾಜ್ಯಗಳಲ್ಲಿ ಬಳಕೆಗೆ ತರಲು ಸರ್ಕಾರ ನಿರ್ಧಾರವನ್ನು ಮಾಡಿದೆ. ಹಾಗೆಯೇ ಇದಕ್ಕೆ ಮುಖ್ಯ ಚುನಾವಣಾ ಆಯುಕ್ತರಾದ ಸುನಿಲ್ ಅರೋರಾ ಮತ್ತು ಚುನಾವಣಾ ಆಯುಕ್ತರಾದ ರಾಜೀವ್ ಕುಮಾರ್ ಮತ್ತು ಸುಶೀಲ್ ಚಂದ್ರರವರು ಸಹಿ ಹಾಕುವ ಮೂಲಕ ಅನುಮೋದನೆಯನ್ನ ನೀಡಬೇಕಾಗಿದೆ.

## 17-12-2020

### ಚೀನಾ ರಾಷ್ಟ್ರದ ಚಾಂಗ್‌ಇ 5 ಪ್ರೋಬ್, ಚಂದ್ರನ ಮೇಲ್ಮೈ ಮಾಹಿತಿ ಸಂಗ್ರಹಿಸಿ ಯಶಸ್ವಿ ಭೂಸ್ಪರ್ಶ



ಚೀನಾ ದೇಶವು ಕಳೆದ ನವೆಂಬರ್ ತಿಂಗಳ 24 ನೇ ತಾರೀಕಿನಂದು 'ಚಾಂಗ್‌ಇ 5 ಪ್ರೋಬ್ಸ್'ಎಂಬ ಉಪಗ್ರಹವನ್ನು ಉಡಾವಣೆ ಮಾಡಿತ್ತು. ಈ ಬಾಹ್ಯಾಕಾಶ ನೌಕೆ ಇದೀಗ ಚಂದ್ರನ ಮೇಲ್ಮೈಯಿಂದ ಕಲ್ಲು ಹಾಗೂ ಮಣ್ಣಿನ ಮಾಹಿತಿಯನ್ನು ಹೊತ್ತು ಯಶಸ್ವಿಯಾಗಿ ಭೂಮಿಯನ್ನು ತಲುಪಿದೆ. 40 ವರ್ಷಗಳ ಬಳಿಕ ಇದೆ ಮೊದಲ ಬಾರಿ ಚಂದ್ರನ ಮೇಲ್ಮೈ ಮಾದರಿ ಮಾಹಿತಿಯನ್ನು ಸಂಗ್ರಹಿಸಿದ ಮೊದಲ ನೌಕೆ ಇದಾಗಿದೆ. ಚೀನಾ ರಾಷ್ಟ್ರವು ಈ ಯೋಜನೆಗಾಗಿ 2004ರಿಂದ ತಯಾರಿ ನಡೆಸಿತ್ತು, ಚಂದ್ರನ ಮೇಲಿನ ಮಾದರಿ ಮಾಹಿತಿಯನ್ನು ಸಂಗ್ರಹಿಸುವ ಯೋಜನೆಯು ಇದೀಗ ಯಶಸ್ವಿಯಾಗಿದೆ, ಎಂದು ಸಿಎನ್ಎಸ್ಎ ಮುಖ್ಯಸ್ಥ 'ಜಾಂಗ್ ಕೆಜಿಯಾನ್' ಮಾಹಿತಿ ನೀಡಿದ್ದಾರೆ.

### ಪರೀಕ್ಷಾ ಪ್ರಯೋಗ ಪೃಥ್ವಿ 2 ಕ್ಷಿಪಣಿಯ ಯಶಸ್ವಿ




ಆತ್ಮನಿರ್ಭರ್ ಸ್ವದೇಶಿ ನಿರ್ಮಿತ ನೆಲದಿಂದ ನೆಲಕ್ಕೆ ಚಿಮ್ಮುವ ಪೃಥ್ವಿ 2 ಕ್ಷಿಪಣಿಯ, 1 ಸಾವಿರ ಕೆ.ಜಿ. ಸಿಡಿತಲೆಗಳನ್ನು ಸಾಗಿಸಬಲ್ಲ ಹಾಗೂ 300 ಕಿ.ಮೀ. ಚಲಿಸಬಲ್ಲ ಪೃಥ್ವಿ 2 ಮಿಸೈಲ್ನ ಪರೀಕ್ಷಾರ್ಥ ಪ್ರಯೋಗ ಒಡಿಶಾದ ಬಾಲಸೋರ್ ತೀರದಲ್ಲಿ ಇತ್ತೀಚಿಗೆ ಯಶಸ್ವಿಯಾಗಿ ನಡೆದಿದೆ ಎಂದು DRDO ಮಾಹಿತಿ ನೀಡಿದೆ. ಡಿಆರ್ಡಿಒ ನಿರ್ಮಿತ ಈ ಕ್ಷಿಪಣಿಯನ್ನು 2003ರಲ್ಲಿಯೇ ಭಾರತೀಯ ಸೇನೆಗೆ ಸೇರ್ಪಡೆ ಮಾಡಲಾಗಿದ್ದು, ಪೃಥ್ವಿ 2 ಕ್ಷಿಪಣಿಯ ಗರಿಷ್ಠ 500 ಕಿ.ಮೀ ದೂರ ಕ್ರಮಿಸಬಲ್ಲ ಸಾಮರ್ಥ್ಯ ಹೊಂದಿದೆ, ಈ ಕ್ಷಿಪಣಿಯ ಮಿತಿಯನ್ನು 350 ಕಿ.ಮೀಗೆ ನಿಗದಿಪಡಿಸಲಾಗಿದೆ ಎಂದು ಡಿಆರ್ಡಿಒ ಮಾಹಿತಿಯನ್ನು ನೀಡಿದೆ.

### ಕೇಂದ್ರ ಕ್ರೀಡಾ ಸಚಿವಾಲಯದಿಂದ ಯೋಗಾಸನ ಸ್ಪರ್ಧಾತ್ಮಕ ಕ್ರೀಡೆ ಅಧಿಕೃತ ಘೋಷಣೆ



ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಮತ್ತು ಆಯುಷ್ ಸಚಿವ ಶ್ರೀಪಾದ ಯೆಸ್ಸೊ ನಾಯಕ್ ರವರು ಕಾರ್ಯಕ್ರಮವೊಂದರಲ್ಲಿ ಯೋಗಾಸನ ಸ್ಪರ್ಧಾತ್ಮಕ ಕ್ರೀಡೆ ಎಂದು ಅಧಿಕೃತ ಘೋಷಣೆಮಾಡಿದ್ದಾರೆ. ಯೋಗಾಸನ ಒಂದು ಸ್ಪರ್ಧಾತ್ಮಕ ಕ್ರೀಡೆ ಯೋಗವನ್ನು ಉತ್ತೇಜಿಸಲು ಅದರ ಉಪಯೋಗದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸಲು ಯೋಗಾಸನವು ಅನುಕೂಲಕರವಾಗಿದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಇದೆ ವೇಳೆ ಮುಂದಿನ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ಯೋಗಾಸನವನ್ನು ಸೇರಿಸಲಾಗುವುದು ಎಂದು ಕ್ರೀಡಾ ಸಚಿವರು ತಿಳಿಸಿದ್ದಾರೆ, ಯೋಗಾಸನವನ್ನು ಸ್ಪರ್ಧಾತ್ಮಕ ಕ್ರೀಡೆಯನ್ನಾಗಿ ಮಾಡುವದರಿಂದ ಜನರ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಸುಧಾರಿಸಲು ಅನುಕೂಲಕರವಾಗಲಿದೆ. ಯೋಗಾಸನ ಕ್ರೀಡಾ ಒಕ್ಕೂಟವನ್ನು ಕಳೆದ ತಿಂಗಳು ನವೆಂಬರ್ ನಲ್ಲಿ ಯೋಗ ಗುರು ಬಾಬಾ ರಾಮದೇವ್ ಅವರ ಅಧ್ಯಕ್ಷತೆಯಲ್ಲಿ ಸ್ಥಾಪನೆಮಾಡಲಾಗಿದ್ದು, ಸ್ಪರ್ಧಾತ್ಮಕ ಕ್ರೀಡೆಯಾಗಿ ಯೋಗದ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ ಫೆಡರೇಶನ್ ಆಫ್ ಇಂಡಿಯಾ ಅನ್ನು ಸ್ಥಾಪಿಸಲಾಗಿದೆ.

### ಭಾರತ ಬಾಂಗ್ಲಾ ವರ್ಚುವಲ್ ಶೃಂಗಸಭೆ 7 ಒಪ್ಪಂದಗಳಿಗೆ ಸಹಿ



ಬಾಂಗ್ಲಾದೇಶದ 49ನೇ ವಾರ್ಷಿಕೋತ್ಸವದಂದು ಭಾರತ ಹಾಗೂ ಬಾಂಗ್ಲಾದೇಶ ವರ್ಚುವಲ್ ಶೃಂಗಸಭೆಯು ನಡೆದಿದೆ ಈ ಸಭೆಯಲ್ಲಿ ಭಾರತದ ಪ್ರಧಾನಿ ಮೋದಿ ಹಾಗೂ ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾರವರು ಭಾಗಿಯಾಗಿದ್ದರು. 1965ರಲ್ಲಿ ಸ್ಥಗಿತಗೊಂಡಿದ್ದ ಚಿಲಿಹತಿ ಹಲ್ದಿಬಾರಿ ರೈಲು ಸಂಪರ್ಕ ಪುನಾರಂಭ ಸೇರಿದಂತೆ ಒಟ್ಟು 7 ವಿವಿಧ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಶೃಂಗಸಭೆಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದ್ದು, ನೆರೆಹೊರೆಯ ಮಿತ್ರರಾಷ್ಟ್ರಗಳಲ್ಲಿ ಭಾರತ ಬಾಂಗ್ಲಾದೇಶಕ್ಕೆ ಪ್ರಮುಖ ಸ್ಥಾನ ನೀಡಲಾಗಿದೆ ಎಂದು ತಿಳಿಸಿದರು. ಚಿಲಹತಿ ಹಲ್ದಿಬಾರಿ ರೈಲು ಸಂಪರ್ಕದಿಂದಾಗಿ ಬಾಂಗ್ಲಾದೇಶದಿಂದ ಅಸ್ಸಾಂ ಮತ್ತು ಪಶ್ಚಿಮ ಬಂಗಾಳಕ್ಕೆ ಸಂಪರ್ಕ ಹೆಚ್ಚಲಿದೆ.

## 18-12-2020

### ಬಾಹ್ಯಕಾಶ ಕ್ಷೇತ್ರದಲ್ಲಿ ಭಾರತದ ಹೊಸ ಕ್ರಾಂತಿ: PSLVC 50 ಯಶಸ್ವಿ ಉಡಾವಣೆ



ಪಿಎಸ್ ಎಲ್'ವಿ ಸರಣಿಯ 26ನೇ ಸಂಪರ್ಕ ಉಪಗ್ರಹ PSLVC 50 ಉಪಗ್ರಹವನ್ನು ಭಾರತೀಯ ಬಾಹ್ಯಾಕಾಶ ಸಂಸ್ಥೆ (ISRO) ಯಶಸ್ವಿಯಾಗಿ ಬಾಹ್ಯಕಾಶಕ್ಕೆ ತಲುಪಿಸಲಾಗಿದೆ. ಈ ಉಪಗ್ರಹದಿಂದ ಸಂಪರ್ಕ ಕ್ಷೇತ್ರ ಮತ್ತು ಹವಾಮಾನದ ವೈಪರಿತ್ಯಗಳ ಮೇಲೆ ನಿಗಾ ವಹಿಸಲು ಅನುಕೂಲವಾಗಲಿದೆ. ಆಂಧ್ರಪ್ರದೇಶದ ಶ್ರೀಹರಿಕೋಟಾ ಸತೀಶ್ ಧವನ್ ಉಡಾವಣಾ ಕೇಂದ್ರದದಿಂದ ಉಪಗ್ರಹವನ್ನು ಹಾರಿಬಿಡಲಾಗಿತ್ತು, ಈ ಉಪಗ್ರಹವು ಸುರಕ್ಷಿತವಾಗಿ ಬಾಹ್ಯಕಾಶ ಕೇಂದ್ರವನ್ನು ತಲುಪಿದೆ ಎಂದು ಇಸ್ರೊ ಸಂಸ್ಥೆ ಮಾಹಿತಿಯನ್ನು ನೀಡಿದೆ.

### ಗೂಗಲ್‌ನ ಅಂಗಸಂಸ್ಥೆಯಾದ ಪ್ರಾಜೆಕ್ಟ್ ಲೂನ್ ನ ಬಲೂನಗಳ ಯಶಸ್ವೀ



ಗೂಗಲ್‌ನ ಅಂಗಸಂಸ್ಥೆಯಾದ ಪ್ರಾಜೆಕ್ಟ್ ಲೂನ್ ಇತ್ತೀಚೆಗೆ ಆಕಾಶಬುಟ್ಟಿಗಳು ವಾಯುಮಂಡಲದಲ್ಲಿ ಸುಮಾರು 1 ವರ್ಷಗಳ ಕಾಲ ಯಶಸ್ವಿಯಾಗಿ ಉಳಿದಿದ್ದು, ವಿಶ್ವದ ದೂರದ ಭಾಗಗಳಿಗೆ ಇಂಟರ್ನೆಟ್ ಸಂಪರ್ಕವನ್ನು ಒದಗಿಸುವ ಗುರಿಯನ್ನು ಪ್ರಾಜೆಕ್ಟ್ ಲೂನ್ ಹೊಂದಿದೆ.

# 2.1 ಲಕ್ಷ ಕಿಲೋ ಮೀಟರ್ ದೂರವನ್ನು ಈ ಹೀಲಿಯಂ ಆಕಾಶಬುಟ್ಟಿಗಳು ಒಳಗೊಂಡಿರುತ್ತವೆ.

# ಈ ಆಕಾಶಬುಟ್ಟಿಗಳು 15 ಮೀಟರ್ ಅಗಲ ಮತ್ತು

12 ಮೀಟರ್ ಎತ್ತರವನ್ನು ಹೊಂದಿದ್ದು, ಇವುಗಳು ಭೂಮಿಯಿಂದ 20 ಕಿ.ಮೀ ಎತ್ತರದಲ್ಲಿ ಉಡಾವಣೆಗೊಳ್ಳುತ್ತವೆ.

# ಲೂನ್ 312 ದಿನಗಳ ಕಾಲ ಗಾಳಿಯಲ್ಲಿ ಉಳಿಯುವ ಮೂಲಕ ವಾಯುಮಂಡಲ ಹಾರಾಟದಲ್ಲಿ ಹೊಸ ದಾಖಲೆಯನ್ನು ಸೃಷ್ಟಿಸಿವೆ. ಆಕಾಶಬುಟ್ಟಿಗಳು ಸೌರ ಫಲಕಗಳಿಂದ ನಿಯಂತ್ರಿಸಲ್ಪಡುತ್ತವೆ, ಬಲೂನ್‌ನಲ್ಲಿನ ಫಲಕಗಳು ಸೂರ್ಯನ ಕಡೆ ಒಲೆಕೊಂಡಾಗ 100 ವ್ಯಾಟ್ ಶಕ್ತಿಯನ್ನು ಉತ್ಪಾದನೆಮಾಡುತ್ತವೆ.

## ಸುಭಾಷ್ ಚಂದ್ರ ಬೋಸ್ ರವರ ಮ್ಯೂಸಿಯಂ ಕೋಲ್ಕತ್ತಾದಲ್ಲಿ ಶೀಘ್ರ ಸ್ಥಾಪನೆ



ಭಾರತ ಸರ್ಕಾರವು ನೇತಾಜಿಯ 125 ನೇ ಜನ್ಮದಿನದಂದು 2022 ರ ಜನವರಿ 23 ರಂದು ನೇತಾಜಿ ಸುಭಾಷ್ ಚಂದ್ರ ಬೋಸ್ ವಸ್ತುಸಂಗ್ರಹಾಲಯವನ್ನು ಕೋಲ್ಕತ್ತಾ ನಗರದಲ್ಲಿ ತೆರೆಯಲಿದೆ. ಜೊತೆಗೆ ಭಾರತ ಸರ್ಕಾರವು ನೇತಾಜಿ ಬರೆದ ಕೆಲವು ಪುಸ್ತಕಗಳನ್ನು ಮರುಮುದ್ರಣ ಮಾಡುವ ಯೋಜನೆ ಕೈಗೊಂಡಿದೆ. ನವದೆಹಲಿಯಲ್ಲಿರುವ ವಸ್ತುಸಂಗ್ರಹಾಲಯವನ್ನು ಡಿಜಿಟಲೀಕರಣಗೊಳಿಸಲಾಗಿದೆ ಕೆಂಪು ಕೋಟೆಯಲ್ಲಿ ಸುಭಾಷ್ ಚಂದ್ರ ಬೋಸ್ ರವರ ಮ್ಯೂಸಿಯಂನಲ್ಲಿ ಜಲಿಯನ್ವಾಲಾ ಬಾಗ್ ಹತ್ಯಾಕಾಂಡ, 1857 ರ ದಂಗೆ ಮತ್ತು ಸಮಕಾಲೀನ ವರ್ಣಚಿತ್ರಗಳಿರುತ್ತವೆ. ಇದನ್ನು ಹೊರತುಪಡಿಸಿ ಇನ್ನೂ ಮೂರು ವಸ್ತು ಸಂಗ್ರಹಾಲಯಗಳು ಸ್ಥಾಪಿಸಲಾಗುವುದು ಎಂದು ಸರ್ಕಾರ ಮಾಹಿತಿ ನೀಡಿದೆ.

## ಭಾರತ ಸರ್ಕಾರದಿಂದ ₹28 ಸಾವಿರ ಕೋಟಿ ಮೌಲ್ಯದ ಶಸ್ತ್ರಾಸ್ತ್ರ, ಸೇನಾ ಉಪಕರಣ ಖರೀದಿಗೆ ಒಪ್ಪಿಗೆ



ಭಾರತ ಸರ್ಕಾರವು ₹28 ಸಾವಿರ ಕೋಟಿ ಮೌಲ್ಯದ ಶಸ್ತ್ರಾಸ್ತ್ರಗಳನ್ನೂ ಭೂಸೇನೆ ಹಾಗೂ ವಾಯುಪಡೆ, ನೌಕಾಪಡೆಗಾಗಿ ದೇಶೀಯ ಕೈಗಾರಿಕೆಗಳಿಂದಲೇ ಖರೀದಿಸಲು ರಕ್ಷಣಾ ಸಚಿವಾಲಯ ಅನುಮೋದನೆ ನೀಡಿದೆ ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆತ್ಮನಿರ್ಭರ ಭಾರತ ಹಾಗೂ ಮೇಕ್ ಇನ್ ಇಂಡಿಯಾ ಯೋಜನೆಗೆ ಉತ್ತೇಜನ ನೀಡಲು ₹28 ಸಾವಿರ ಕೋಟಿ ಮೌಲ್ಯದ ಉಪಕರಣಗಳನ್ನು ದೇಶಿ ಸಂಸ್ಥೆಗಳಿಂದಲೇ ಖರೀದಿಸುವ "ಅಸೆಪ್ಟೆನ್ಸ್ ಆಫ್ ನೆಸೆಸ್ಸಿಟಿ"ಗೆ ಒಪ್ಪಿಗೆ ನೀಡಲಾಗಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ರವರು ತಿಳಿಸಿದ್ದಾರೆ. ಇದರಲ್ಲಿ DRDO ವಿನ್ಯಾಸಗೊಳಿಸಿದ 'ಏರ್‌ಬಾರ್ನ್ ಅರ್ಲಿ ವಾರ್ನಿಂಗ್ ಆಯಂಡ್ ಕಂಟ್ರೋಲ್ ಸಿಸ್ಟಂ' ಭಾರತೀಯ ನೌಕಾಪಡೆಗಾಗಿ ಅತ್ಯಾಧುನಿಕ ಗಸ್ತು ಹಡಗು ಹಾಗೂ ಭೂಸೇನೆಗಾಗಿ ಮಾಡ್ಯುಲಾರ್ ಬ್ರಿಜ್ ಒಳಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ವಿಶ್ವ ಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಂಕ: 131ನೇ ಸ್ಥಾನಕ್ಕೆ ಭಾರತ




2020ರ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಇತ್ತೀಚಿಗೆ ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಬಿಡುಗಡೆಮಾಡಿದ್ದು, ಈ ಪಟ್ಟಿಯಲ್ಲಿ ಒಟ್ಟು 189 ದೇಶಗಳ ಪೈಕಿ ಭಾರತವು 131ನೇ ಸ್ಥಾನ ಪಡೆದುಕೊಂಡಿದೆ. ದೇಶದ ಶಿಕ್ಷಣ, ಆರೋಗ್ಯ ಮತ್ತು ಜೀವನ ಗುಣಮಟ್ಟದ ಆದರಿಸಿ ಈ ಸೂಚ್ಯಂಕವನ್ನು ಬಿಡುಗಡೆ ಮಾಡಲಾಗುತ್ತದೆ. 2018ಗೆ ಹೋಲಿಸಿದಾಗ ಎರಡು ಸ್ಥಾನಗಳಷ್ಟು ಕೆಳಕ್ಕೆ ಕುಸಿತ ಕಂಡಿದೆ. ವಿಶ್ವ ಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ ಬಿಡುಗಡೆ ಮಾಡಿರುವ ಈ ಸೂಚ್ಯಂಕದಲ್ಲಿ ನಾರ್ವೆ ಪ್ರಥಮ ಸ್ಥಾನ ಪಡೆದುಕೊಂಡಿದೆ. ನಂತರದ ಸ್ಥಾನಗಳು ಐಯಲ್ಯಾಂಡ್, ಸ್ವಿಝುಲ್ಯಾಂಡ್, ಹಾಂಕಾಂಗ್ ಮತ್ತು ಐಸ್ ಲ್ಯಾಂಡ್‌ಗೆ ಪಡೆದುಕೊಂಡಿವೆ.

# 19-12-2020

## 2020 ರ ಫಿಫಾ ಪ್ರಶಸ್ತಿ ರಾಬರ್ಟ್ ಲೆವಾಂಡೋವ್ಸ್ಕಿ ಆಯ್ಕೆ



2020ನೇ ಸಾಲಿನ 'ಬೆಸ್ಟ್ ಮೆನ್ಸ್ ಪ್ಲೇಯರ್' ವೈಯಕ್ತಿಕ ಪ್ರಶಸ್ತಿಯನ್ನು ಪೋಲಾಂಡ್ ತಂಡದ ರಾಬರ್ಟ್ ಲೆವಾಂಡೋವ್ಸ್ಕಿರವರು ಪಡೆದುಕೊಂಡಿದ್ದಾರೆ. ಜಗತ್ತಿನ ಶ್ರೇಷ್ಠ ಫುಟ್ಬಾಲ್ ಆಟಗಾರ ಎಂದು ಕರೆಸಿಕೊಂಡಿರುವ ಲಿಯೋನೆಲ್ ಮೆಸ್ಸಿ ಮತ್ತು ಕ್ರಿಸ್ಟಿಯಾನೋ ರಿನಾಲ್ಡೋ ಅವರನ್ನು ಹಿಂದಿಕ್ಕಿ ರಾಬರ್ಟ್ ಲೆವಾಂಡೋವ್ಸ್ಕಿ ಫಿಫಾ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವುದು ವಿಶೇಷ # ಈ ವರ್ಷ 55 ಗೋಲ್‌ಗಳನ್ನು ಹೊಡೆದಿರುವ ಪೋಲಾಂಡ್ ದೇಶದ ಬೇಯ್‌ರ್ನ್ ಮ್ಯೂನಿಚ್ ತಂಡದ ನಾಯಕ ರಾಬರ್ಟ್ ಲೆವಾಂಡೋವ್ಸ್ಕಿ ರವರು ತಮ್ಮ ತಂಡ ದೇಶೀಯ ಮತ್ತು ಅಂತಾರಾಷ್ಟ್ರೀಯ ಟ್ರೋಫಿಗಳನ್ನು ಗೆಲ್ಲುವಲ್ಲಿ ಪ್ರಮುಖ ಪ್ರಮುಖ ಪಾತ್ರವಹಿಸಿದ್ದಾರೆ. # ಈ ಫಿಫಾ ಪ್ರಶಸ್ತಿ ಆಯ್ಕೆಯನ್ನು ಜಾಗತಿಕ ಜ್ಯೂರಿಗಳು ಮತ್ತು ರಾಷ್ಟ್ರೀಯ ತಂಡಗಳ ನಾಯಕರು ಜೊತೆಗೆ ಅಭಿಮಾನಿಗಳು ಮತ ಚಲಾಯಿಸುವದರ ಮೂಲಕ ರಾಬರ್ಟ್ ಲೆವಾಂಡೋವ್ಸ್ಕಿರವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

## 20-12-2020

### ಹಸುವಿನ ಸಗಣಿಯಿಂದ ವೇದಿಕ್ ಪೇಂಟ್ ತಯಾರಿ: ನಿತಿನ್ ಗಡ್ಕರಿ



ಭಾರತದ ಮಾರುಕಟ್ಟೆಗೆ ಶೀಘ್ರದಲ್ಲೇ ಹಸುವಿನ ಸಗಣಿಯಿಂದ ತಯಾರಿಸಲಾಗುತ್ತಿರುವ "ವೇದಿಕ್ ಪೇಂಟ್" ಬಿಡುಗಡೆಯಾಗುವುದಾಗಿ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿಯವರು ಹೇಳಿದ್ದಾರೆ. ರೈತರಿಗೆ ವರ್ಷಕ್ಕೆ ಹೆಚ್ಚುವರಿ 55 ಸಾವಿರ ರೂ. ಈ ವೇದಿಕ ಪೈಂಟ್ ನಿಂದ ಲಾಭ ದೊರೆಯುವುದಾಗಿ ಅವರು ಮಾಹಿತಿ ನೀಡಿದ್ದು, ಜೊತೆಗೆ ಖಾದಿ ಗ್ರಾಮೋದ್ಯೋಗ ಮಂಡಳಿಯ ಗ್ರಾಮೀಣ ಆರ್ಥಿಕತೆಗೆ ಉತ್ತೇಜನ ನೀಡಲು ಮತ್ತು ರೈತರಿಗೆ ಹೆಚ್ಚಿನ ಲಾಭವನ್ನು ದೊರಕಿಸಿಕೊಡಲು ಈ ವೇದಿಕೆ ಪೈಂಟ್ ಅನ್ನು ಬಿಡುಗಡೆಯಾಗಲಿದೆ ಎಂದು ತಿಳಿಸಲಾಗಿದೆ. ಈ ವೇದಿಕ್ ಪೈಂಟ್ ಡಿಸ್ಟೆಂಪರ್ ಮತ್ತು ಎಮಲ್ಶನ್ ರೂಪದಲ್ಲಿ ದೊರೆಯಲಿದೆ.

### ಭಾರತೀಯ ಸೇನೆಯಿಂದ ಸುಮಾರು 203 ಕೋಟಿ ರೂ. ಪಿಎಂ ಕೇರ್ಸ್‌ಗೆ




ಆಂಗ್ಲಪತ್ರಿಕೆ 'ಇಂಡಿಯನ್ ಎಕ್ಸ್ ಪ್ರಸ್' ಇತ್ತೀಚಿಗೆ ನೀಡಿರುವ ಇತ್ತೀಚಿನ ಮಾಹಿತಿಯ ಪ್ರಕಾರ, ಭಾರತೀಯ ಸೇನೆಯು ಸ್ವಯಂಪ್ರೇರಣೆಯಿಂದ ತನ್ನ 1 ದಿನದ ವೇತನವನ್ನು ಅಂದರೆ ಸುಮಾರು 203.67 ಕೋಟಿ ರೂ.ಗಳನ್ನು ಪಿಎಂ ಕೇರ್ಸ್ ನಿಧಿಗೆ ನೀಡಿದೆ. ಹಾಗೂ 500 ಕೋಟಿ ರೂ.ಗಳನ್ನು ರಕ್ಷಣಾ ಸಚಿವಾಲಯದಿಂದ ನೀಡಿದೆ ಎಂದು ಮಾಹಿತಿ ನೀಡಿದೆ.

# ಭೂಸೇನೆ ನಮ್ಮ ಯೋಧರು ಸ್ವಯಂಪ್ರೇರಣೆಯಿಂದ 157.71 ಕೋಟಿ ರೂ. ನೀಡಿದ್ದಾರೆ.

# ವಾಯುಸೇನೆ ಯೋಧರು 29.18 ಕೋಟಿ ರೂ ನೀಡಿದ್ದಾರೆ.

# ನೌಕಾಸೇನೆ ಯೋಧರು 16.77 ಕೋಟಿ ರೂ. ನೀಡಿದ್ದಾರೆ.

### ನಾಸಾ ಮತ್ತು ಕೆನಡಿಯನ್ ಬಾಹ್ಯಾಕಾಶ ಸಂಸ್ಥೆ ಒಪ್ಪಂದ



ಅಮೆರಿಕಾದ ಬಾಹ್ಯಾಕಾಶ ಸಂಸ್ಥೆ ನಾಸಾ ಮತ್ತು ಕೆನಡಿಯನ್ ಬಾಹ್ಯಾಕಾಶ ಸಂಸ್ಥೆ ಇತ್ತೀಚಿಗೆ ಪರಸ್ಪರ ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಿವೆ. ಈ ಒಪ್ಪಂದದ ಅನ್ವಯ ಕೆನಡಾವು ಚಂದ್ರನ ಗೇಟ್‌ವೇ ಬಾಹ್ಯಾಕಾಶ ನಿಲ್ದಾಣದ ಭಾಗವಾಗುವುದರೊಂದಿಗೆ, ಕೆನಡಾರ್ಮ್ 3 ಎಂಬ ಹೊಸ ರೊಬೊಟಿಕ್ ನೀಡುತ್ತದೆ. 1972ರಿಂದ ನಾಸಾ ಚಂದ್ರನ ಮೊದಲ ಸಿಬ್ಬಂದಿ ಕಾರ್ಯಾಚರಣೆಯಾಗಿದೆ. ಕೆನಡಿಯನ್ ಆರ್ಟೆಮಿಸ್ II ಈ ಕಾರ್ಯಾಚರಣೆಯನ್ನು 2023 ರಲ್ಲಿ ಪ್ರಾರಂಭಿಸಲಾಗುತ್ತದೆ ಮತ್ತು ಈ ಒಪ್ಪಂದವನ್ನು ಗೇಟ್‌ವೇ ಒಪ್ಪಂದ ಎಂದು ಕರೆಯಲಾಗುತ್ತದೆ.

### WHO ನಿಂದ 2021ರ ಆರಂಭದಲ್ಲಿ ಬಡದೇಶಗಳಿಗೆ ಕೊರೋನ ಲಸಿಕೆಯನ್ನು ಪೂರೈಕೆ ಆರಂಭ




# ವಿಶ್ವ ಆರೋಗ್ಯ ಸಂಸ್ಥೆ (WHO) 2021ರ ವರ್ಷದ ಆರಂಭದಲ್ಲಿ ಕೊರೋನ ವೈರಸ್ ಲಸಿಕೆಯನ್ನು ಎಲ್ಲ ದೇಶಗಳ ಬಡ ಜನರಿಗೆ ನೀಡುವ ಗುರಿ ಹೊಂದಿದೆ.

# ವಿಶ್ವ ಆರೋಗ್ಯ ಸಂಸ್ಥೆಯು 'ಕೋವ್ಯಾಕ್ಸ್' ಎಂಬ ನೂತನ ಸಂಸ್ಥೆಯನ್ನು ಆರಂಭಿಸಿದ್ದು, ಇದರಿಂದ ಕೊರೋನ ಲಸಿಕೆಯನ್ನು ದೇಶದ ಬಡ ಜನರಿಗೂ ಸುಲಭವಾಗಿ ಸಿಗಬೇಕು ಎನ್ನುವ ಉದ್ದೇಶವು WHO ಹೊಂದಿದ್ದು, ಈಗಾಗಲೇ ಈ ಸಂಸ್ಥೆಯಿಂದ 200 ಕೋಟಿ ಡೋಸ್‌ಗಳನ್ನು ಕಾಯ್ದಿರಸಲಾಗಿದೆ.

# 2021ರ ವರ್ಷದ ಮೊದಲಾರ್ಧ ಎಲ್ಲ ಬಡ ದೇಶಗಳಿಗೆ ಮುಂದಿನ ತ್ರೈಮಾಸಿಕದೊಳಗಡೆ ಲಸಿಕೆಯನ್ನು ಸರಬರಾಜು ಮಾಡಲು WHO ಸಿದ್ಧತೆ ನಡೆಸಿರುವುದಾಗಿ WHO ನ ಮೂಲಗಳು ಖಚಿತಪಡಿಸಿವೆ.

## 21-12-2020

### ಜಪಾನ್ ನಿಂದ ಭಾರತದ ಮೊದಲ ಬುಲೆಟ್ ರೈಲಿನ ಫೋಟೋ ಬಿಡುಗಡೆ




# ಭಾರತ ದೇಶದ ಮೊದಲನೇ ಬುಲೆಟ್ ರೈಲು ಮುಂಬೈ ಅಹ್ಮದಾಬಾದ್ ಮಾರ್ಗದಲ್ಲಿ ನಿರ್ಮಾಣವಾಗುತ್ತಿದ್ದು, ಈ ಬುಲೆಟ್ ರೈಲಿನಲ್ಲಿ ಸುಧಾರಿತ ಬೋಗಿ ಎಂಜಿನ್ ಅಳವಡಿಸಲಾಗುವದು ಎಂದು ಜಪಾನ್ ರಾಯಭಾರ ಕಚೇರಿ ತಿಳಿಸಿದೆ.

# ಜಪಾನ್ E5 ಸೀರೀಸ್ ಬುಲೆಟ್ ಟ್ರೈನ್ ಗಂ.320 ಕಿ.ಮೀ ವೇಗದಲ್ಲಿ ಗಂಟೆಗೆ ಗರಿಷ್ಠ 350 ಕಿ.ಮೀ ವೇಗದಲ್ಲಿ ಓಡಲಿದೆ ಹಾಗೂ ಈ ರೈಲಿನ ಮೊದಲ ಅಧಿಕೃತ ಫೋಟೋಗವನ್ನು ಜಪಾನ್ ಬಿಡುಗಡೆಗೊಳಿಸಿದೆ.

# 508 ಕಿ.ಮೀ ಉದ್ದದ ರೈಲು ಯೋಜನೆ ಇದಾಗಿದ್ದು, 2023ರ ವೇಳೆಗೆ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಈಗಾಗಲೇ ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಅನುಮೋದನೆ ಸಿಕ್ಕಿದ್ದು, ಈ ಬುಲೆಟ್ ರೈಲು ಮುಂಬೈ ಮತ್ತು ಅಹಮದಾಬಾದ್ ನಡುವಿನ ಸಂಚರಿಸಲಿದೆ.

### ಕೇಂದ್ರ ಸಚಿವ ನಿತಿನ್ ಗಡ್ಕರಿಯಿಂದ ರಾಜ್ಯದ ಶಿರಾಡಿ, ಚಾರ್ಮಾಡಿ,ಸಂಪಾಜೆ ರಸ್ತೆ ಸೇರಿ 33 ಹೆದ್ದಾರಿ ಕಾಮಗಾರಿ ಉದ್ಘಾಟನೆ




ಇತ್ತೀಚಿಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ವಿಡಿಯೋ ಕಾನ್ಫರೆನ್ಸ್ ಮೂಲಕ ಕರ್ನಾಟಕ ರಾಜ್ಯದ 33 ಬೃಹತ್ ಹೆದ್ದಾರಿ ಕಾಮಾಗಾರಿಗಳಿಗೆ ಚಾಲನೆ ನೀಡಿದರು. ಈ ಕಾಮಗಾರಿಯು ಸುಮಾರು 10,904 ಕೋಟಿ ರೂ. ವೆಚ್ಚದ 1,197 ಕಿ.ಮೀ ಉದ್ದದ ಹೆದ್ದಾರಿ ರಸ್ತೆ ನಿರ್ಮಾಣ ಯೋಜನೆಯಾಗಿದೆ.

# ಪ್ರಮುಖವಾಗಿ ರಾ.ಹೆ. 75ರ ಶಿರಾಡಿ, ರಾ.ಹೆ. 73ರ ಚಾರ್ಮಾಡಿ ಮತ್ತು ರಾ.ಹೆ. 275ರ ಸಂಪಾಜೆ ಘಾಟಿಯ ಪ್ರದೇಶಗಳನ್ನು ಈ ಯೋಜನೆ ಒಳಗೊಂಡಿದೆ.


# ಕಳೆದ 6 ವರ್ಷಗಳಲ್ಲಿ ಕರ್ನಾಟಕದ ಸುಮಾರು 900 ಕಿ.ಮೀ ಹೆದ್ದಾರಿ ಕಾಮಗಾರಿ ಹೆಚ್ಚುವರಿಯಾಗಿದ್ದು, ಇದರಿಂದ ರಾಜ್ಯದಲ್ಲಿ ಒಟ್ಟು ಹೆದ್ದಾರಿ ಕಾಮಗಾರಿ 7652 ಕಿ.ಮೀಗೆ ಏರಿಕೆಯಾಗಿದೆ.

### ಭಾರತೀಯ ವೇದಾಂತ್ ಪಟೇಲ್ ಅಮೆರಿಕನ್ ಶ್ವೇತಭವನದ ಸಹಾಯಕ ಪತ್ರಿಕಾ ಕಾರ್ಯದರ್ಶಿಯಾಗಿ ನೇಮಕ



ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರ ಸರ್ಕಾರದಲ್ಲಿ ಭಾರತೀಯ ಮೂಲದ ವೇದಾಂತ್ ಪಟೇಲ್ ಅವರನ್ನು ಶ್ವೇತಭವನದ ಸಹಾಯಕ ಪತ್ರಿಕಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಪ್ರಸ್ತುತ ಪಟೇಲ್ ಅವರು ಬೈಡನ್ ಅವರ ಹಿರಿಯ ವಕ್ತಾರರಾಗಿ ಸೇವೆಸಲ್ಲಿಸುತ್ತಿದ್ದರು. ವೇದಾಂತ್ ಪಟೇಲ್ ಅವರು ಭಾರತದಲ್ಲಿ ಜನಿಸಿ ಕ್ಯಾಲಿಫೋರ್ನಿಯಾ ರಿವರ್ ಸೈಡ್ ಹಾಗೂ ಫ್ಲೋರಿಡಾ ಯುನಿವರ್ಸಿಟಿಯ ಪದವಿಯನ್ನು ಪಡೆದುಕೊಂಡಿದ್ದು, ಡೆಮಾಕ್ರಟಿಕ್ ರಾಷ್ಟ್ರೀಯ ಸಮಿತಿಯ ಪಾಶ್ಚಿಮಾತ್ಯ ಪ್ರಾದೇಶಿಕ ಪತ್ರಿಕಾ ಕಾರ್ಯದರ್ಶಿಯಾಗಿ ಹಾಗೂ ಕಾಂಗ್ರೆಸ್ ಸದಸ್ಯ ಮೈಕ್ ಹೋಂಡಾಗೆ ಸಂವಹನ ನಿರ್ದೇಶಕರಾಗಿ ಕೆಲಸ ಮಾಡಿ, ಪ್ರಸ್ತುತ ಶ್ವೇತಭವನದ ಸಹಾಯಕ ಪತ್ರಿಕಾ ಕಾರ್ಯದರ್ಶಿಯಾಗಿ ನೇಮಕ ಗೊಂಡಿದ್ದಾರೆ.

## ಡಿ.21 ರಂದು ಗುರು ಶನಿ ಗ್ರಹಗಳ ಮಹಾ ಸಮಾಗಮ




ಇದೆ ಡಿಸೆಂಬರ್ 21ರಂದು ಸಂಜೆ ಆಕಾಶದಲ್ಲಿ ಗುರು ಮತ್ತು ಶನಿ ಗ್ರಹಗಳ ಜೋಡಿಯ ಅಪರೂಪದ ವಿದ್ಯಮಾನವೊಂದು ಕಂಡಿದೆ. ಕಳೆದ 20 ವರ್ಷಗಳ ಬಳಿಕ ಗುರು ಮತ್ತು ಶನಿ ಗ್ರಹಗಳು ಅತ್ಯಂತ ಸಮೀಪದಲ್ಲಿ ಘೋಚರಿಸಿದ್ದು, ಈ ವಿದ್ಯಾಮಾನವು 800 ವರ್ಷಗಳ ಬಳಿಕ ಅತ್ಯಂತ ಸಮೀಪದಲ್ಲಿ ಗೋಚರಿಸುತ್ತಿರುವುದಾಗಿ ಉಡುಪಿ ಪೂರ್ಣಪ್ರಜ್ಞ ಹವ್ಯಾಸಿ ಖಗೋಳ ವೀಕ್ಷಕರ ಸಂಘವು ಪ್ರಕಟಣೆಯಲ್ಲಿ ತಿಳಿಸಿದೆ. ಇನ್ನು ಈ ವಿದ್ಯಮಾನವನ್ನು 'ಗ್ರೇಟ್ ಕಂಜಂಕ್ಷನ್' ಎಂದು ಕರಿಯಲಾಗುತ್ತದೆ.

# ಗುರುಗ್ರಹವು ಸೂರ್ಯನ ಸುತ್ತ ಪರಿಭ್ರಮಿಸಲು 11.86 ವರ್ಷಗಳು ಬೇಕು. ಮತ್ತು ಶನಿಗ್ರಹವು ಪರಿಭ್ರಮಿಸಲು 29.46 ವರ್ಷಗಳನ್ನು ಕಾಲ ಬೇಕಾಗುತ್ತದೆ. ಗುರು ಶನಿ ಗ್ರಹಗಳು ಸಮೀಪಿಸಲು ಕನಿಷ್ಠ 20 ವರ್ಷಗಳು ಕಾಲ ಬೇಕಾಗುತ್ತದೆ. ಆದ್ದರಿಂದ ಇದನ್ನು ಗ್ರಹಗಳ ಸಮಾಗಮ ಎನ್ನುತ್ತಾರೆ.

# ಈ ಗುರು ಶನಿ ಗ್ರಹಗಳ ಸಾಯಂಕಾಲ 6.15 ರಿಂದ ರಾತ್ರಿ 8 ಗಂಟೆ ತನಕ, ಅಂದರೆ ಕೇವಲ 1 ಗಂಟೆ 45 ನಿಮಿಷ ಮಾತ್ರ ವೀಕ್ಷಣೆ ಮಾಡಲು ಸಿಗುತ್ತವೆ.

# 22-12-2020

## ಡಿ.19 ಗೋವಾ ವಿಮೋಚನಾ ದಿನ




ಭಾರತದಲ್ಲಿ ಪ್ರತಿ ವರ್ಷ ಡಿಸೆಂಬರ್ 19 ರಂದು ಗೋವಾ ವಿಮೋಚನಾ ದಿನವನ್ನು ಆಚರಣೆ ಮಾಡಲಾಗುತ್ತದೆ. ಪೋರ್ಚುಗೀಸ್ ಆಳ್ವಿಕೆಯಿಂದ ಗೋವಾವನ್ನು ಮುಕ್ತಗೊಳಿಸಿರುವ ಭಾರತೀಯ ಸೈನ್ಯದ ವಿಜಯವನ್ನು ಗುರುತಿಸಲು ಸಲುವಾಗಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ. ಭಾರತೀಯ ಸೇನೆಯು ಡಿ.18, 1961ರಂದು ಆಪರೇಷನ್ ವಿಜಯ್ ಎಂಬ 36 ಗಂಟೆಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಈ ಕಾರ್ಯಾಚರಣೆಯಲ್ಲಿ ಭಾರತೀಯ ವಾಯುಪಡೆ ಮತ್ತು ನೌಕಾಪಡೆಯ ಸೇರಿಕೊಂಡು ಡಿ.19, 1961 ರಂದು ಗೋವಾ ಪ್ರದೇಶವನ್ನು ಪುನಃ ಪಡೆದುಕೊಳ್ಳುವದರಲ್ಲಿ ಯಶಸ್ವಿಯಾದವು.

## ಬಾಕ್ಸಿಂಗ್ ವಿಶ್ವಕಪ್ = ಭಾರತಕ್ಕೆ 3 ಚಿನ್ನ



ಇತ್ತೀಚಿಗೆ ಜರ್ಮನಿಯ ಕಲೋನ್‌ನಲ್ಲಿ ನಡೆದ ಬಾಕ್ಸಿಂಗ್ ವಿಶ್ವಕಪ್ ನಲ್ಲಿ ಭಾರತವು ಮೂರು ಚಿನ್ನದ ಪದಕಗಳನ್ನು ಪಡೆದುಕೊಂಡಿದೆ. ಅದರ ಜೊತೆಯಲ್ಲ 2 ಬೆಳ್ಳಿ ಮತ್ತು 4 ಕಂಚು ಸೇರಿ ಒಟ್ಟಾರೆ 9 ಪದಕಗಳನ್ನು ಮುಡಿಗೇರಿಸಿಕೊಂಡಿದೆ.

# ಪುರುಷರ ವಿಭಾಗದಲ್ಲಿ ಚಿನ್ನದ ಪದಕವನ್ನು ಅಮಿತ್ ಪಂಗಲ್ ಗೆದ್ದಿದಾರೆ, ಮತ್ತು ಮಹಿಳಾ ವಿಭಾಗದಲ್ಲಿ ಮನೀಶಾ ಮೌನ್ ಮತ್ತು ಸಿಮ್ರಾಂಜಿತ್

ಕೌರ್ ರವರು ಪದಕ ಗೆದ್ದು ಸಾಧನೆ ಮಾಡಿದ್ದಾರೆ.

## ಶೀಘ್ರದಲ್ಲೇ ಬಿಹಾರದಲ್ಲಿ ದೇಶದ ಮೊದಲ ಗಾಜಿನಸೇತುವೆ



ದೇಶದ ಮೊದಲ ಗಾಜಿನ ಸೇತುವೆಯನ್ನು ಬಿಹಾರದ ನಳಂದಾ ಜಿಲ್ಲೆಯ ರಾಜಗೃಹದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಮಾರ್ಚ್ 2021ರ ಹೊತ್ತಿಗೆ ಈ ಗಾಜಿನ ಸೇತುವೆಯನ್ನು ಪ್ರವಾಸಿಗರ ವೀಕ್ಷಣೆಗೆ ತೆರೆದುಕೊಳ್ಳುವ ಸಾಧ್ಯತೆಯಿದ್ದು, ಜೊತೆಗೆ ಈ ಪ್ರದೇಶದಲ್ಲಿ ಮೃಗಾಲಯ ಹಾಗೂ ಸಫಾರಿ ಪಾರ್ಕ್ ನಿರ್ಮಿಸುವ ಗುರಿಯನ್ನು ಬಿಹಾರದ ಅರಣ್ಯ ಇಲಾಖೆ ಹೊಂದಿದೆ. ಬಿಹಾರ ರಾಜ್ಯದಲ್ಲಿರುವ ಈ ಗಾಜಿನ ಸೇತುವೆ 200 ಅಡಿ ಎತ್ತರ ಮತ್ತು 85 ಅಡಿ ಉದ್ದವನ್ನು ಹಾಗೂ 6 ಅಡಿ ಅಗಲವನ್ನು ಹೊಂದಿದ್ದು, ಈ ಸೇತುವೆ ಮೇಲೆ 40 ಮಂದಿ ಏಕ ಕಾಲಕ್ಕೆ ಸುತ್ತಾಡಬಹುದಾಗಿದೆ ಎಂದು ಬಿಹಾರದ ಅರಣ್ಯ ಇಲಾಖೆ ಮಾಹಿತಿಯನ್ನು ನೀಡಿದೆ.

## ಉತ್ತರ ಪ್ರದೇಶ ಸರ್ಕಾರವು ಪ್ಲಾಸ್ಟಿಕ್ ನಿಂದ ರಸ್ತೆ ನಿರ್ಮಾಣ ಪ್ರಾರಂಭಿಸಿದ



# ಉತ್ತರ ಪ್ರದೇಶದ ಲಖನೌ ಎಂಬಲ್ಲಿ ಯೋಗಿ ಆದಿತ್ಯನಾಥ ರವರ ಸಮ್ಮುಖದಲ್ಲಿ ಮರಳಿ ಉಪಯೋಗಕ್ಕೆ ಬಾರದ ಪ್ಲಾಸ್ಟಿಕ್ ನಿಂದ ಸುಮಾರು 1500 ಕಿಮೀ ಉದ್ದದ ರಸ್ತೆ ನಿರ್ಮಾಣ ಮಾಡಲು ಉತ್ತರ ಪ್ರದೇಶ ಸರ್ಕಾರ ಚಿಂತನೆ ನಡೆಸಿದೆ . ರಾಜ್ಯದ ಲೋಕೋಪಯೋಗಿ ಇಲಾಖೆಯ ಮಾಹಿತಿ ಪ್ರಕಾರ ಅಂದಾಜು 2ಸಾವಿರ ಟನ್ ಸಿಂಗಲ್ ಯೂಸ್ ಪ್ಲಾಸ್ಟಿಕ್ ಈ ಯೋಜನೆಯಲ್ಲಿ ಬಳಕೆಯಾಗುತ್ತದೆ ಎಂದು ತಿಳಿಸಲಾಗಿದೆ.

# ಭಾರತ ಸರ್ಕಾರ 2015 ರಲ್ಲೇ ಈ ಯೋಜನೆ ಶುರುಮಾಡಿದೆ, ಈಗಾಗಲೇ 63 ಟನ್ ಪ್ಲಾಸ್ಟಿಕ್ ಕಸ ಬಳಸಿ 43 ಕಿಮೀಯ 32 ರಸ್ತೆ ಕಾಮಗಾರಿಗಳು ಶುರು ಮಾಡಲಾಗಿದೆ. ಹಾಗೂ ಇದರ ಜೊತೆಗೆ ಪ್ಲಾಸ್ಟಿಕ್ ಬಳಸಿ 94 ಕಿಮೀ ಉದ್ದದ 75 ರಸ್ತೆ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರವು ಮಾಹಿತಿ ನೀಡಿದೆ.

## ಖೇಲೋ ಇಂಡಿಯಾ ಯೂತ್ ಗೇಮ್ಸ್ ನಲ್ಲಿ ಇನ್ನು ಮಲ್ಲಕಂಬ, ಕಳರಿಪಯಟ್ಟು ಹಾಗೂ ಗಾಟ್ಕಾ ಸ್ಪರ್ಧೆ



ಕೇಂದ್ರ ಕ್ರೀಡಾ ಸಚಿವಾಲಯ 2021ರ ವರ್ಷದ ಹರಿಯಾಣದಲ್ಲಿ ನಡೆಯಲಿರುವ ಖೇಲೋ ಇಂಡಿಯಾ ಯೂತ್‌ಗೇಮ್ಸ್‌ನಲ್ಲಿ ಸ್ಥಳೀಯ ಕ್ರೀಡೆಗಳಿಗೆ ಭಾಗವಹಿಸಲು ಮಧ್ಯ ಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಹೆಚ್ಚು ಪ್ರಖ್ಯಾತವಾಗಿರುವ ಮಲ್ಲಕಂಬ ಮತ್ತು ಕೇರಳ ಮೂಲದ ಕಳರಿ ಪಯಟ್ಟು ಹಾಗೂ ಪಂಜಾಬ್ ಮೂಲದ ಯುದ್ಧ ಕೌಶಲ್ಯವನ್ನು ಒಳಗೊಂಡಿರುವ ಗಾಟ್ಕಾ ಎಂಬ ಸ್ಥಳೀಯ ಕ್ರೀಡೆಗಳಿಗೆ ಒಳಪಡಿಸಲು ಅನುಮತಿಯನ್ನು ನೀಡಲಾಗಿದೆ.

# ಕ್ರೀಡಾ ಇಲಾಖೆ ತೆಗೆದುಕೊಂಡ ಈ ನಿರ್ಧಾರದಿಂದ ಭಾರತದ ಸ್ಥಳೀಯ ಕ್ರೀಡೆಗಳ ಸಮೃದ್ಧವಾದ ಸಂಸ್ಕೃತಿಯನ್ನು ಮತ್ತು ಪ್ರೋತ್ಸಾಹವನ್ನು ನೀಡಲು ಕ್ರೀಡಾ ಇಲಾಖೆಯ ಸಿದ್ಧವಾಗಿದೆ ಎಂದು ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ರವರು ತಿಳಿಸಿದ್ದಾರೆ.

## ಭಾರತದಲ್ಲಿ ಹೈಪರ್ಸೋನಿಕ್ ವಿಂಡ್ ಟನಲ್ ಟೆಸ್ಟ್ ಸೌಲಭ್ಯಕ್ಕೆ ಚಾಲನೆ




ಇತ್ತೀಚೆಗೆ ಭಾರತದ ಹೈದರಾಬಾದ್‌ನಲ್ಲಿ ಹೈಪರ್ಸಾನಿಕ್ ವಿಂಡ್ ಟನಲ್ ಪರೀಕ್ಷಾ ಸೌಲಭ್ಯವನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಣೆ ಮಾಡಿದರು. ಈ ಹೈಪರ್ಸೋನಿಕ್

ವಿಂಡ್ ಟನಲ್ ಟೆಸ್ಟ್ ಸೌಲಭ್ಯವನ್ನು ಆರಂಭಿಸಿದ ಮೂರನೇ ರಾಷ್ಟ್ರವಾಗಿ ಭಾರತ ಗುರುತಿಸಿಕೊಂಡಿತು, ಮೊದಲ ಮತ್ತು ಎರಡನೇ ಸ್ಥಾನದಲ್ಲಿ ಯುನೈಟೆಡ್ ಸ್ಟೇಟ್ಸ್ ಮತ್ತು ರಷ್ಯಾ ದೇಶಗಳಿವೆ. ಈ ಹೈಪರ್ಸಾನಿಕ್ ವಿಂಡ್ ಟನಲ್ ಟೆಸ್ಟ್ ಸೌಲಭ್ಯ ಭವಿಷ್ಯದ ಏರೋಸ್ಪೇಸ್ ಮತ್ತು ರಕ್ಷಣಾ ವ್ಯವಸ್ಥೆಯನ್ನು ತಿಳಿದುಕೊಳ್ಳುವದರಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

# 23-12-2020

## ರಷ್ಯಾ ಮತ್ತು ಭಾರತದ ರಕ್ಷಣಾ ವ್ಯವಹಾರದ ಸಂಬಂಧ ಉತ್ತಮ



ಭಾರತದ ಹಾಗೂ ರಷ್ಯಾ ಜೊತೆಗಿನ ರಕ್ಷಣಾ ವ್ಯವಹಾರ ಸಂಬಂಧ ಉತ್ತಮವಾಗಿ ಸಾಗುತ್ತಿದೆ ಜೊತೆಗೆ ಎಸ್ 400 ಕ್ಷಿಪಣಿ ಸೇರಿದಂತೆ ರಕ್ಷಣಾ ಸಾಮಗ್ರಿಗಳ ಪೂರೈಕೆ ಭಾರತದೊಂದಿಗೆ ಸುಗಮವಾಗಿ ನಡೆಯುತ್ತಿದೆ ಎಂದು ಇತ್ತೀಚಿಗೆ ರಷ್ಯಾ ಮಾಹಿತಿಯನ್ನು ನೀಡಿದೆ. ರಷ್ಯಾ ರಾಯಭಾರಿ ನಿಕೋಲಾಯ್ ಕುಡ್‌ಶೆವ್ ರವರು ಇತ್ತೀಚಿಗೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ್ದು, ಜೊತೆಗೆ ಯಾವುದೇ ದೇಶದ ಮೇಲೆ ನಿರ್ಬಂಧಗಳನ್ನು ಹೇರುವುದನ್ನು ರಷ್ಯಾ ಒಪ್ಪಿಕೊಳ್ಳುವುದಿಲ್ಲ ಹಾಗೂ 2021ರಂದು ಬೆಂಗಳೂರಿನಲ್ಲಿ ನಡೆಯಲಿರುವ ಏರೋ ಇಂಡಿಯಾದಲ್ಲಿ ರಷ್ಯಾ ದೇಶದಿಂದ ಎಸ್‌ಯು 57, ಎಸ್‌ಯು 35, ಮಿಗ್ 35 ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಪ್ರದರ್ಶಿಸಲಾಗುವುದು ಎಂದು ರಷ್ಯಾ ರಾಯಭಾರಿ ನಿಕೋಲಾಯ್ ಕುಡ್‌ಶೆವ್ ಇದೆ ವೇಳೆ ಹೇಳಿದ್ದಾರೆ.

## ಮಧ್ಯಪ್ರದೇಶದ ಮಾಜಿ ಸಿಎಂ ಮೋತಿಲಾಲ್ ವೋರಾ ವಿಧಿವಶ



ಮಧ್ಯಪ್ರದೇಶದ ಮುಖ್ಯಮಂತ್ರಿ ಮೋತಿಲಾಲ್ ವೊರಾ ಅವರು ತಮ್ಮ 93ನೇ ವಯಸ್ಸಿನಲ್ಲಿ ಇತ್ತೀಚಿಗೆ ನಿಧನರಾದರು. (ಜನನ: 20 ಡಿಸೆಂಬರ್ 1927 ನಿಧನ: 21 ಡಿಸೆಂಬರ್ 2020) ಮೋತಿಲಾಲ್ ವೊರಾ ಅವರು ಮಧ್ಯಪ್ರದೇಶದಲ್ಲಿ ೨ ಭಾರಿ ಮುಖ್ಯಮಂತ್ರಿಯಾಗಿ (1985 1988) ಮತ್ತು (1989 1989) ಸೇವೆಸಲ್ಲಿಸಿದ್ದಾರೆ. ಮೋತಿಲಾಲ್ ವೊರಾರವರು ಉತ್ತರ ಪ್ರದೇಶದ ರಾಜ್ಯಪಾಲರಾಗಿ, ಮತ್ತು ಕೇಂದ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಾಗರಿಕ ವಿಮಾನಯಾನ ಸಚಿವರಾಗಿ ಕೂಡ ಸೇವೆ ಸಲ್ಲಿಸಿದ್ದಾರೆ.

## MSME ಗಳಿಗೆ ಸಾಲ ನೀಡುವಲ್ಲಿ ಉತ್ತರಪ್ರದೇಶ ರಾಜ್ಯಕ್ಕೆ ಮೊದಲ ಸ್ಥಾನ



# ಉತ್ತರ ಪ್ರದೇಶ ರಾಜ್ಯವು ಸುಮಾರು 22,800 ಕೋಟಿ ರೂ. ಮೊತ್ತದ ಸಾಲವನ್ನು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ ಘಟಕಗಳು ತಮ್ಮ ವ್ಯವಹಾರವನ್ನು ಹೆಚ್ಚಿಸಲು MSME ಮುಖಾಂತರ ಸಾಲ ಕೊಡುವದರಲ್ಲಿ ದೇಶದಲ್ಲಿ ಮೊದಲ ಸ್ಥಾನ ಪಡೆದಿದೆ.

# ಉತ್ತರ ಪ್ರದೇಶ ಸರ್ಕಾರದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರವರು ಒಟ್ಟು 3,54,825 MSME ಘಟಕಗಳಿಗೆ ಅಂದಾಜು 10,390 ಕೋಟಿ ರೂ. ಸಾಲವನ್ನು ನೀಡಿದ್ದಾರೆ.

# ಬ್ಯಾಂಕ್‌ನಿಂದ 2.05 ಲಕ್ಷ ಕೋಟಿ ಸಾಲ MSME ವಲಯಕ್ಕೆ ಮಂಜೂರಾಗಿದ್ದು, MSME ಗಳ ಮುಖಾಂತರ 11 ರಾಜ್ಯಗಳಿಗೆ ಅತಿ ಹೆಚ್ಚು ಸಾಲವನ್ನು ನೀಡಲಾಗಿದೆ. ಉತ್ತರ ಪ್ರದೇಶ ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ, ಕೇರಳ, ಪಶ್ಚಿಮ ಬಂಗಾಳ, ಗುಜರಾತ್, ಮಧ್ಯಪ್ರದೇಶ, ಒಡಿಶಾ, ಆಂಧ್ರಪ್ರದೇಶ ಮತ್ತು ಬಿಹಾರ ರಾಜ್ಯಗಳು ಒಳಗೊಂಡಿದೆ.

## ಪ್ರಧಾನಿ ಮೋದಿಗೆ ಅಮೆರಿಕದ ಅತ್ಯುನ್ನತ ಪ್ರಶಸ್ತಿ 'ಲೀಜನ್ ಆಫ್ ಮೆರಿಟ್' ಪ್ರಧಾನ




ಭಾರತದ ಪ್ರಧಾನಿ ನರೇಂದ್ರ ಮೋದಿಯವರಿಗೆ ಅಮೆರಿಕದ ಪ್ರತಿಷ್ಠಿತ 'ಲೀಜನ್ ಆಫ್ ಮೆರಿಟ್' ಪ್ರಶಸ್ತಿಯನ್ನು ಅಮೆರಿಕದಲ್ಲಿನ ಶ್ವೇತಭವನದಲ್ಲಿ ಇತ್ತೀಚಿಗೆ ಪ್ರಧಾನ ಮಾಡಲಾಯಿತು. ಈ ಪ್ರಶಸ್ತಿಯನ್ನು ಭಾರತದ ರಾಯಭಾರಿ ತರನ್‌ಜಿತ್ ಸಿಂಗ್ ಸಂಧುರವರು ಪ್ರಧಾನಿಯವರ ಪರವಾಗಿ ಸ್ವೀಕರಿಸಿದರು. ರಾಷ್ಟ್ರದ ಪ್ರಧಾನಿ ಅಥವಾ ಅಗ್ರನಾಯಕನಿಗೆ ಮಾತ್ರ ಈ ಅತ್ಯುನ್ನತ ಪ್ರಶಸ್ತಿಯನ್ನು ನೀಡಲಾಗುತ್ತದೆ. ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರವರು ಪ್ರಧಾನಿ ಮೋದಿಯವರಿಗೆ ಭಾರತವನ್ನು ಜಾಗತಿಕ ಶಕ್ತಿಯಾಗಿ ರೂಪಿಸುವಲ್ಲಿ ಹಾಗೂ ಅಮೆರಿಕದೊಂದಿಗಿನ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ಇಲ್ಲಿಯವರೆಗೆ ಪ್ರಧಾನಿ ಮೋದಿ ಅವರಿಗೆ ತಮ್ಮ ದೇಶದ ಅತ್ಯುನ್ನತ ಪ್ರಶಸ್ತಿಯನ್ನು ನೀಡಿದ ವಿವಿಧ ದೇಶಗಳು:
#ಸೌದಿ ಅರೇಬಿಯಾದ "ಆರ್ಡರ್ ಆಫ್ ಅಬ್ದುಲಜೀಜ್ ಅಲ್ ಸೌದ್" ಮತ್ತು "ಘಾಜಿ ಅಮಿರ್ ಅಮಾನುಲ್ಲಾಖಾನ್" ಪ್ರಶಸ್ತಿಯನ್ನು 2016ರಲ್ಲಿ ಪ್ರದಾನ ಮಾಡಲಾಗಿದೆ.
# "ಗ್ರ್ಯಾಂಡ್ ಕಾಲರ್ ಆಫ್ ದಿ ಸ್ಟೇಟ್ ಆಫ್ ಪಾಲೆಸ್ಟೈನ್" ಅವಾರ್ಡ್ ಪ್ರಶಸ್ತಿಯನ್ನು 2018ರಲ್ಲಿ ಪ್ರದಾನ ಮಾಡಲಾಗಿದೆ.
# "ಆರ್ಡರ್ ಆಫ್ ಝೂಯೇದ್ ಅವಾರ್ಡ್" ಪ್ರಶಸ್ತಿಯನ್ನು ಯುಎಇ ನೀಡಿದೆ.

# "ಆರ್ಡರ್ ಆಫ್ ಸೇಂಟ್ ಆಂಡ್ರ್ಯೂ" ಪ್ರಶಸ್ತಿಯನ್ನು ರಷ್ಯಾ ನೀಡಿದೆ.

# "ಆರ್ಡರ್ ಆಫ್ ದಿ ಡಿಸ್ಟಿಂಗ್‌ವಿಷ್ಡ್ ರೂಲ್ ಆಫ್ ನಿಶಾನ್ ಇಜುದ್ದೀನ್" ಪ್ರಶಸ್ತಿಯನ್ನು ಮಾಲ್ಡೀವ್ಸ್ ನೀಡಿದೆ.

## ಡಿಸೆಂಬರ್ 23ರಂದು ರಾಷ್ಟ್ರೀಯ ಕಿಸಾನ್ ದಿವಸ್

ಭಾರತ ಸರ್ಕಾರವು 2001 ರಿಂದ ರೈತ ದಿನಾಚರಣೆಯನ್ನು ಆಚರಿಸಲು ಆರಂಭಿಸಿತು. ಪ್ರತಿ ವರ್ಷವು ಡಿಸೆಂಬರ್ 23 ರಂದು ಕಿಸಾನ್ ದಿವಾಸ್‌ವನ್ನು ಆಚರಣೆ ಮಾಡಲಾಗುತ್ತಿದ್ದು, ಈ ದಿನಾಂಕದಂದು ಭಾರತದ ಐದನೇ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರ ಜನ್ಮದಿನವಾಗಿದ್ದು, ಅವರನ್ನು ಗೌರವಿಸಲು ಕಿಸಾನ್ ದಿವಸ್ ಆಚರಣೆ ಮಾಡಲಾಗುತ್ತದೆ. ಕಿಸಾನ್ ದಿನವನ್ನು ರೈತ ದಿನ ಎಂದೂ ಕರೆಯುತ್ತಾರೆ.
# ಚೌಧರಿ ಚರಣ್ ಸಿಂಗ್ ಅವರು 1978 ರಲ್ಲಿ ಕಿಸಾನ್ ಟ್ರಸ್ಟ್ ಅನ್ನು ಪ್ರಾರಂಭಿಸಿದರು. ಜೊತೆಗೆ ರೈತರ ಕಲ್ಯಾಣಕ್ಕಾಗಿ ಅನೇಕ ಕೊಡುಗೆಗಳನ್ನು ನೀಡಿದರು. ಚೌಧರಿ ಚರಣ್ ಸಿಂಗ್ ಅವರ ಸ್ಮಾರಕವನ್ನು ದೆಹಲಿಯಲ್ಲಿ 'ಕಿಸಾನ್ ಘಾಟ್' ಎಂದು ಕರೆಯುತ್ತಾರೆ.
# ಚರಣ್ ಸಿಂಗ್ ರವರು ಸಾಲ ವಿಮೋಚನಾ ಮಸೂದೆಯನ್ನು 1939 ರಲ್ಲಿ ಮಂಡಿಸಿದರು.
# ಭಾರತದ ಜಮೀನ್ದಾರಿ ಪದ್ಧತಿಯನ್ನು 1952 ರಲ್ಲಿ ರದ್ದುಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

# 24-12-2020

## ಚೀನಾ ರಾಷ್ಟ್ರದಿಂದ 500 ಮೀಟರ್ ಗೋಳಾಕಾರದ ದೂರದರ್ಶಕ



ಚೀನಾ ದೇಶವು 500 ಮೀಟರ್ ಗೋಳಾಕಾರದ ದೂರದರ್ಶಕವನ್ನು ಅಂತರರಾಷ್ಟ್ರೀಯ ವಿಜ್ಞಾನಿಗಳಿಗಾಗಿ ಪ್ರಾರಂಭಿಸುವದಾಗಿ ಘೋಷಣೆ ಮಾಡಿದ್ದು, ವಿಶ್ವದ ಅತಿದೊಡ್ಡ ರೇಡಿಯೊ ಟೆಲಿಸ್ಕೋಪ್ ಇದಾಗಲಿದೆ. ದೂರದರ್ಶಕವನ್ನು 175 ಮಿಲಿಯನ್ USD ವೆಚ್ಚದಲ್ಲಿ ನಿರ್ಮಾಣಮಾಡಲು ಯೋಜಿಸಿದ್ದು, ಇದರಿಂದ ಕಾಸ್ಮಿಕ್ ವಿದ್ಯಮಾನಗಳನ್ನು ಕಂಡುಹಿಡಿಯಲು ಮತ್ತು ಸೂಪರ್ ಸೂಕ್ಷ್ಮತೆಯನ್ನು ಕೂಡ ಹೊಂದಿರಲಿದೆ. ಅಲ್ಲದೆ ರೇಡಿಯೋ ಸ್ಫೋಟಗಳು ಮತ್ತು ಪಲ್ಸಾರ್‌ಗಳನ್ನು ಈ ದೊರದರ್ಶಕದಲ್ಲಿ ಅಳವಡಿಸಲಾಗುವದು. ಇದನ್ನು 'ಐ ಆಫ್ ಹೆವನ್' ಅಥವಾ ಟಿಯಾನಿಯನ್ ಎನ್ನುತ್ತಾರೆ.

## 2020ನೇ ಸಾಲಿನ ಮಾನವ ಸ್ವಾತಂತ್ರ್ಯ ಸೂಚ್ಯಂಕ ಪ್ರಕಟ



ಕ್ಯಾಟೊ ಸಂಸ್ಥೆ ಮತ್ತು ಫ್ರೇಸರ್ ಸಂಸ್ಥೆಯು ಇತ್ತೀಚಿಗೆ 2020ರ ಮಾನವ ಸ್ವಾತಂತ್ರ್ಯ ಸೂಚ್ಯಂಕವನ್ನು ಪ್ರಕಟಣೆ ಮಾಡಿದ್ದು, ಮಾನವ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತವು 2020ರ ಸಾಲಿನಲ್ಲಿ 111ನೇ ಸ್ಥಾನಪಡೆದಿದೆ, ಈ ಮೊದಲು ಭಾರತವು 2019 ರಲ್ಲಿ 94ನೇ ಸ್ಥಾನದಲ್ಲಿತ್ತು, ಮಾನವ ಸ್ವಾತಂತ್ರ್ಯ ಸೂಚ್ಯಂಕವು ವೈಯಕ್ತಿಕ ಹಾಗೂ ಆರ್ಥಿಕ ಸ್ವಾತಂತ್ರ್ಯದ ಜೊತೆಗೆ 79 ಬೇರೆ ಬೇರೆ ರೀತಿಯ ಸೂಚಕಗಳನ್ನು ಒಳಗೊಂಡಿರುತ್ತದೆ ಭಾರತವು ಮಾನವ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಚೀನಾ ಮತ್ತು ಬಾಂಗ್ಲಾದೇಶಕ್ಕಿಂತ ಮುಂದೆ ಇದೆ. ಚೀನಾ ಮತ್ತು ಬಾಂಗ್ಲಾದೇಶ ಕ್ರಮವಾಗಿ 129 ಮತ್ತು 139 ನೇ ಸ್ಥಾನದಲ್ಲಿವೆ. ಇನ್ನು ನ್ಯೂಜಿಲೆಂಡ್ ಮೊದಲನೇ ಸ್ಥಾನ, ಸ್ವಿಟ್ಜರ್ಲೆಂಡ್ ಎರಡನೇ ಸ್ಥಾನ ಹಾಗೂ ಹಾಂಗ್ ಕಾಂಗ್ ಮೂರನೇ ಸ್ಥಾನಗಳನ್ನು ಪಡೆದಿವೆ.

## ಕೃಷ್ಣ ಗೋದಾವರಿ ಜಲಾನಯನ ಆರ್ ಕ್ಲಸ್ಟರ್‌ನಿಂದ ಅನಿಲ ಉತ್ಪಾದನೆ



ಆರ್ ಕ್ಲಸ್ಟರ್ ಏಷ್ಯಾದ ಆಳವಾದ ಆಫ್ ಶೋರ್ ಅನಿಲ ಉತ್ಪಾದನೆಯ ಕ್ಷೇತ್ರವಾಗಿದ್ದು, ಬ್ರಿಟಿಷ್ ಪೆಟ್ರೋಲಿಯಂ ಜೊತೆ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಒಂದು ಗೂಡಿ ಅನಿಲ ಉತ್ಪಾದನೆಯನ್ನು ಪ್ರಾರಂಭಿಸುವುದಾಗಿ ಈ ಯೋಜನೆಯನ್ನು ಘೋಷಣೆ ಮಾಡಿವೆ. ಅದರ ಜೊತೆಗೆ ಮೂರು ಕ್ಷೇತ್ರಗಳಲ್ಲಿ 40,000 ಕೋಟಿ ರೂ ಹೂಡಿಕೆಯನ್ನು ಮಾಡಿವೆ. 2021 22ರಲ್ಲಿ ಉಪಗ್ರಹ ಕ್ಲಸ್ಟರ್ ಉತ್ಪಾದನೆ ಪ್ರಾರಂಭವಾಗಲಿದೆ ಎಂದು ಮಾಹಿತಿಯನ್ನು ನೀಡಿವೆ. ಈ ಯೋಜನೆಇಂದ ಭಾರತದ ಇಂಧನ ಬುಟ್ಟಿಯಲ್ಲಿನ ನೈಸರ್ಗಿಕ ಅನಿಲದ ಪಾಲು ಈಗ 6.2% ರಷ್ಟಿದೆ ಹಾಗೂ 2030 ರಲ್ಲಿ 15% ಕ್ಕೆ ಹೆಚ್ಚಿಸಲಾಗುತ್ತದೆ. ಜೊತೆಗೆ ಭಾರತದ ಅನಿಲ ಆಮದಿನ ಅವಲಂಬನೆಯನ್ನು ಕಡಿಮೆಗೊಳ್ಳಲಿದೆ.

# 25-12-2020

## ಮಧ್ಯಮ ಶ್ರೇಣಿಯ ವಾಯು ಕ್ಷಿಪಣಿ (MRSAM) ಪರೀಕ್ಷೆ ಯಶಸ್ವೀ



ಇತ್ತೀಚಿಗೆ MRSAM ಎಂಬ ವಾಯು ಕ್ಷಿಪಣಿ ಯನ್ನು ಒಡಿಶಾದ ಕರಾವಳಿ ತೀರದಲ್ಲಿ ಯಶಸ್ವಿಯಾಗಿ ಪರೀಕ್ಷೇ ಮಾಡಲಾಯಿತು. ಈ ವಾಯು ಕ್ಷಿಪಣಿ ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆ ಜೊತೆಗೆ ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರೀಸ್ ಜಂಟಿಯಾಗಿ ಸಿದ್ಧಪಡಿಸಿವೆ. ಈ ಕ್ಷಿಪಣಿಯು 276 ಕಿಲೋ ಗ್ರಾಂ ತೂಕ ಮತ್ತು 4.5 ಮೀಟರ್ ಉದ್ದವನ್ನು ಹೊಂದಿದ್ದು, ಇದರಿಂದ ರೇಡಾರ್ ಮತ್ತು ಮೊಬೈಲ್ ಲಾಂಚರ್ ವ್ಯವಸ್ಥೆಗಳನ್ನು ಪತ್ತೆ ಮಾಡುತ್ತದೆ, ಹಾಗೂ ಕ್ಷಿಪಣಿಗಳನ್ನು ಉಡಾಯಿಸಲು ಇದು ಸಮರ್ಥವಾಗಿದೆ ಎಂದು ಮಾಹಿತಿಯನ್ನು ನೀಡಿದೆ. ಈ ಕ್ಷಿಪಣಿಯು 70 ಕಿ.ಮೀ ವ್ಯಾಪ್ತಿಯಲ್ಲಿ ಏಕಕಾಲದಲ್ಲಿ ಅನೇಕ ಗುರಿಗಳನ್ನು ಹೊಡೆದುರಿಳಿಸಬಲ್ಲುದು ಜೊತೆಗೆ ಉತ್ತಮ ಗುಣಮಟ್ಟದ ವಾಯು ಪರಿಸ್ಥಿತಿ ಚಿತ್ರನವನ್ನು ನೀಡಬಲ್ಲುದು.

## ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ಅವರಿಂದ "ಜನ್ ರಸೋಯಿ" ಕ್ಯಾಂಟೀನ್ ಆರಂಭ:



ಕರ್ನಾಟಕದ ಇಂದಿರಾ ಕ್ಯಾಂಟೀನ್ ಹಾಗು ತಮಿಳುನಾಡಿನ ಅಮ್ಮ ಕ್ಯಾಂಟೀನ್ ಮಾದರಿಯಲ್ಲಿ ದೆಹಲಿಯ ಗಾಂಧಿಗರದಲ್ಲಿ ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ರವರು 1 ರೂ.ಗೆ ಊಟ ನೀಡುವ, 'ಜನ್ ರಸೋಯಿ ಕ್ಯಾಂಟೀನ್' ಗೆ ಚಾಲನೆ ನೀಡಿದರು. ಕಡು ಬಡವರು ಹೊತ್ತಿನ ಊಟಕ್ಕೂ ಅಲೆದಾಡುವದನ್ನು ಕಂಡು ಉತ್ತಮ ಊಟ ನೀಡುವ 'ಜನ್ ರಸೋಯಿ' ಎಂಬ ಕ್ಯಾಂಟೀನ್ ಪ್ರಾರಂಭ ಮಾಡಿದ್ದಾರೆ. ಈ ಕ್ಯಾಂಟೀನ್‌ನಲ್ಲಿ ಏಕ ಕಾಲಕ್ಕೆ 100 ಮಂದಿಗ ಊಟ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಇದರಿಂದ ಬಡವರಿಗೆ ಹಾಗೂ ನಿರಾಶ್ರಿತರಿಗೆ ತುಂಬಾ ಅನುಕೂಲವಾಗಲಿದೆ.

## ವಿಶ್ವ ಬ್ಯಾಂಕ್ ನೊಂದಿಗೆ ಹಸಿರು ರಾಷ್ಟ್ರೀಯ ಹೆದ್ದಾರಿ ಯೋಜನೆಗೆ ಒಪ್ಪಂದ




ಭಾರತ ಸರ್ಕಾರವು ದೇಶದಲ್ಲಿ ಹಸಿರು ರಾಷ್ಟ್ರೀಯ ಹೆದ್ದಾರಿ ಕಾರಿಡಾರ್‌ಗಳನ್ನು ಅಭಿವೃದ್ಧಿ ಮಾಡಲು ಇತ್ತೀಚೆಗೆ ವಿಶ್ವಬ್ಯಾಂಕ್‌ನೊಂದಿಗೆ 500 ಮಿಲಿಯನ್ ಅಮೆರಿಕನ್ ಡಾಲರು ಮೊತ್ತದ ಸಾಲ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಈ ಹಸಿರು ರಾಷ್ಟ್ರೀಯ ಹೆದ್ದಾರಿ ಕಾರಿಡಾರ್ ಯೋಜನೆಯಡಿ 783 ಕಿಲೋ ಮೀಟರ್ ಹಸಿರು ಹೆದ್ದಾರಿಗಳನ್ನು ಹಿಮಾಚಲ ಪ್ರದೇಶ, ಆಂಧ್ರಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸುವ ಈ ಯೋಜನೆಗೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಒಪ್ಪಿಗೆಯನ್ನು ನೀಡಿವೆ ಹಾಗೂ ಇದು ದೇಶದ ಅಭಿವೃದ್ಧಿಪಡಿಸಲಾಗುತ್ತದೆ. ಒಟ್ಟು 7,660 ಕೋಟಿ ರೂ. ವೆಚ್ಚದ ಯೋಜನೆ ಇದಾಗಿದ್ದು, ಸರ್ಕಾರವು ಈ ಯೋಜನೆಯ ವೆಚ್ಚದ 1% ಹೆದ್ದಾರಿ ತೋಟ ಮತ್ತು ಅದರ ನಿರ್ವಹಣೆಗೆ ಮೀಸಲಿಡಲಾಗುತ್ತದೆ ಎಂದು ತಿಳಿಸಲಾಗಿದೆ.

## ಭಾರತದಲ್ಲಿ ಶೇಕಡಾ 60 ರಷ್ಟು ಚಿರತೆಗಳ ಸಂಖ್ಯೆ ಹೆಚ್ಚಳ



# ಇತ್ತೀಚಿಗೆ ಕೇಂದ್ರ ಅರಣ್ಯ ಮತ್ತು ಹವಾಮಾನ ಇಲಾಖಾಯ ಸಚಿವಾಲಯವು 2018ರ ಚಿರತೆಗಳ ವರದಿಯನ್ನು ಬಿಡುಗಡೆಗೊಳಿಸಿದ್ದು, ಈ ವರದಿಯಲ್ಲಿ ಭಾರತದಲ್ಲಿನ ಚಿರತೆಗಳ ಜನಸಂಖ್ಯೆ 60% ಹೆಚ್ಚಾಗಿದೆ ಎಂದು ತಿಳಿಸಲಾಗಿದೆ.
# 2014 ರ ವರದಿಯ ಪ್ರಕಾರ ಭಾರತದಲ್ಲಿ 7,910 ಚಿರತೆಗಳಿದ್ದವು, ಪ್ರಸ್ತುತ 2018 ವರದಿ ಪ್ರಕಾರ ಭಾರತದಲ್ಲಿ 12,852 ಚಿರತೆಗಳಿವೆ ಎಂದು ತಿಳಿಸಲಾಗಿದೆ.
# ಪ್ರಸ್ತುತ ಸುಮಾರು 3,387 ಚಿರತೆಗಳು ಕರ್ನಾಟಕ, ತಮಿಳುನಾಡು, ಗೋವಾ ಮತ್ತು ಕೇರಳ ಪ್ರದೇಶಗಳಲ್ಲಿ ಕಾಣಿಸಿಕೊಂಡಿವೆ.
# ಸುಮಾರು 1,253 ಕ್ಕೂ ಹೆಚ್ಚು ಚಿರತೆಗಳು ಗಂಗಾ ಬಯಲು ಮತ್ತು ಶಿವಾಲಿಕ್‌ನಲ್ಲಿ ಕಾಣಿಸಿಕೊಂಡಿವೆ.
# ವನ್ಯಜೀವಿಗಳ ವಿಶ್ವದ ಅತಿದೊಡ್ಡ ಕ್ಯಾಮೆರಾ ಟ್ರ್ಯಾಪ್ ಭಾರತದ ಹುಲಿ ಸಮೀಕ್ಷೆಗಾಗಿ ಗಿನ್ನೆಸ್ ವಿಶ್ವ ದಾಖಲೆಗೆ ಪಡೆದಿದೆ.
# ಚಿರತೆಗಳನ್ನು 1972 ರ ವನ್ಯಜೀವಿ ಸಂರಕ್ಷಣೆ ಕಾಯ್ದೆಯ ಅಡಿಯಲ್ಲಿ ರಕ್ಷಿಸಲಾಗಿವೆ.

## 2020ರಲ್ಲಿ ಏಷ್ಯಾದಲ್ಲೇ ಕಳಪೆ ಸಾಧನೆ ತೋರಿದ ಭಾರತದ ರೂಪಾಯಿ



ಭಾರತದ ರೂಪಾಯಿ ಡಾಲರ್ ಎದುರು ಚೇತರಿಕೆ ಕಾಣುವಲ್ಲಿ ವಿಫಲವಾಗಿದ್ದು, ಏಷ್ಯಾದಲ್ಲಿಯೇ ಅತ್ಯಂತ ಕಳಪೆ ಮಟ್ಟದ ನಿರ್ವಹಣೆ ತೋರಿದ ಕರೆನ್ಸಿಗಳಲ್ಲಿ ಇದು ಒಂದಾಗಿದೆ. ಪ್ರಸ್ತುತ ಈ ವರ್ಷದಲ್ಲಿ ಅಮೆರಿಕನ್ ಡಾಲರ್ ಎದುರು ಶೇಕಡಾ 3.28ರಷ್ಟು ಕುಸಿತವನ್ನು ಭಾರತದ ರೂಪಾಯಿ ಕಂಡಿದೆ. ದೇಶ ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಗರಿಷ್ಠ ಮಟ್ಟದ ನಿಬಂಧನೆಗಳನ್ನು ಹೇರಿರುವ ಕಾರಣದಿಂದಾಗಿ ಭಾರತದ ರೂಪಾಯಿ ಅಮೆರಿಕನ್ ಡಾಲರ್ ಮತ್ತು ವಿದೇಶಿ ಕರೆನ್ಸಿಗಳ ಪ್ರಯೋಜನ ಪಡೆಯುವಲ್ಲಿ ಕುಸಿತವನ್ನು ಕಂಡು ಅತ್ಯಂತ ಕೆಟ್ಟ ನಿರ್ವಹಣೆ ತೋರಿರುವುದಾಗಿ ವರದಿಯಾಗಿದೆ.

## ಮಧ್ಯಪ್ರದೇಶ ಸರ್ಕಾರವು ಸರ್ಕಾರಿ ಕಾರ್ಯಕ್ರಮದಲ್ಲಿ ಕಡ್ಡಾಯ ಕನ್ಯಾ ಪೂಜೆ ಆದೇಶ:



ಮಧ್ಯಪ್ರದೇಶ ಸರ್ಕಾರವು ರಾಜ್ಯದ ಹೆಣ್ಣುಮಕ್ಕಳಿಗೆ ವಿಶೇಷ ಸ್ಥಾನಮಾನ ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ವಿಶಿಷ್ಠ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು, ಇನ್ನು

ರಾಜ್ಯದ ಯಾವುದೇ ಸರ್ಕಾರಿ ಕಾರ್ಯಕ್ರಮವನ್ನು ಆರಂಭಿಸುವ ಮುನ್ನ ಹೆಣ್ಣನ್ನು ದೇವರ ಸ್ಥಾನದಲ್ಲಿ ಇಟ್ಟು ಕನ್ಯಾ ಪೂಜೆ ಮಾಡುವಂತೆ ಮಧ್ಯಪ್ರದೇಶ ಸರ್ಕಾರವು ಆದೇಶವನ್ನು ಜಾರಿಗೆಮಾಡಿದೆ, ಹಾಗೂ ಕನ್ಯಾ ಪೂಜೆ ಕಾರ್ಯಕ್ರಮವನ್ನು ಎಲ್ಲಾ ಸರ್ಕಾರಿ ಖಚೇರಿಗಳಲ್ಲಿ ನೆರವೇರಿಸಬೇಕು ಎಂದು ಮಧ್ಯಪ್ರದೇಶ ಸಿಎಂ ಶಿವರಾಜ್ ಸಿಂಗ್ ಚೌಹಾಣ್ ಆದೇಶವನ್ನು ಹೊರಡಿಸಿದ್ದಾರೆ.

### ಭಾರತೀಯ ತತ್ವಜ್ಞಾನಿ, ಖ್ಯಾತ ಸಾಹಿತಿ ಹಾಗೂ ಮಾಜಿ ಸಂಸದ ಜಮಾಲ್ ಖ್ವಾಜಾ ವಿಧಿವಶ



# ಭಾರತೀಯ ತತ್ವಜ್ಞಾನಿ, ಖ್ಯಾತ ಸಾಹಿತಿ ಹಾಗೂ ಮಾಜಿ ಸಂಸದ ಜಮಾಲ್ ಖ್ವಾಜಾರವರು 2020 ಡಿ.25 ರಂದು ತಮ್ಮ 92ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.
# ಜಮಾಲ್ ಖ್ವಾಜಾ ಅವರು 1926 ಆಗಸ್ಟ್ 12 ರಂದು ದೆಹಲಿಯಲ್ಲಿ ಜನಿಸಿದರು, ಹಾಗೂ ಇವರು ಅಲಿಘರ್ ಲೋಕಸಭಾ ಕ್ಷೇತ್ರದಿಂದ 1957 ರಲ್ಲಿ ಜಯಶಾಲಿಯಾಗಿ ಸಂಸದರಾಗಿದ್ದರು, ಜೊತೆಗೆ ಇವರು 1960ರಲ್ಲಿ ಭಾರತೀಯ ಸಂಸ್ಕೃತಿ ನಿಯೋಗದ ನೇತೃತ್ವ ವಹಿಸಿಕೊಂಡಿದ್ದರು.
# 1980ರಲ್ಲಿ ಜಮಾಲ್ ಖ್ವಾಜಾಅವರು ವಿವಿಯ ಕಲಾ ವಿಭಾಗದ ಡೀನ್ ಆಗುವದರ ಜೊತೆಗೆ ಜೀವನ ನಡೆಸುವ 12ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಖ್ಯಾತ ಸಾಹಿತಿಯಾಗಿ ಮೆಚ್ಚುಗೆಯನ್ನು ಪಡೆದಿದ್ದರು.

## 26-12-2020

### ಬ್ರೆಕ್ಸಿಟ್ ವಾಣಿಜ್ಯ ಒಪ್ಪಂದಕ್ಕೆ ಸಹಿ ಘೋಷಣೆ = ಬ್ರಿಟನ್ ಪ್ರಧಾನಿ



# ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟಗಳ ನಡುವೆ ಉಳಿದು ಕೊಂಡಿರುವಂತಹ, ಬ್ರೆಕ್ಸಿಟ್ ವಾಣಿಜ್ಯ ಒಪ್ಪಂದಕ್ಕೆ ಒಪ್ಪಿಗೆ ಸಿಕ್ಕಿದೆ, ಎಂದು ಬ್ರಿಟನ್ ಪ್ರಧಾನಿ ಜಾನ್ಸನ್ ರವರು ಟ್ವೀಟ್ ಮಾಡುವದರ ಮೂಲಕ ಮಾಹಿತಿ ನೀಡಿದ್ದಾರೆ. ಜೊತೆಗೇನೆ ದೇಶದ ಗಡಿಗಳನ್ನು ಹಿಡಿತದ್ದಲ್ಲಿ ತಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.
# ಐರೋಪ್ಯ ಒಕ್ಕೂಟ ವಾಣಿಜ್ಯ ಆಯುಕ್ತ ಉಸುಲಾ ವಂಡೆರ್ ಲೆಯಾನ್ ರವರು ಬ್ರುಸೆಲ್ಸ್‌ನಲ್ಲಿ ಮಾತನಾಡಿ ಅಂತಿಮವಾಗಿ ನಮ್ಮಿಂದ ಒಪ್ಪಂದಕ್ಕೆ ಸಹಿ ಹಾಕಿಲಾಗಿದೆ ಎಂದು ತಿಳಿಸಿದ್ದಾರೆ, ಅದರ ಜೊತೆಗೆ ಹೊಸ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ.



## 27-12-2020

### 2020ನೇ ವರ್ಷದಲ್ಲಿ ಪ್ರವಾಸೋದ್ಯಮ ಇಲಾಖೆಗೆ 15 ಲಕ್ಷ ಕೋಟಿ ನಷ್ಟ

2020ರಲ್ಲಿ ಭಾರತದ ಪ್ರವಾಸೋದ್ಯಮ ಇಲಾಖೆಯು ಅಂದಾಜು 15 ಲಕ್ಷ ಕೋಟಿ ರೂ. ನಷ್ಟವನ್ನು ಅನುಭವಿಸಿದೆ ಎಂದು ಫೆಡರೇಶನ್ ಆಫ್ ಅಸೋಸಿಯೇಶನ್ ಇಂಡಿಯನ್ ಟೂರಿಸಂ ಆಯಂಡ್ ಹಾಸ್ಪಿಟಾಲಿಟಿ ವರದಿಯನ್ನು ಮಾರ್ಚ್ ನಲ್ಲಿ ಸರ್ಕಾರಕ್ಕೆ ನೀಡಿದೆ. ಈ ನಷ್ಟಕ್ಕೆ ಮುಖ್ಯ ಕರಣ ಭಾರತದಲ್ಲಿ ಕೋರೋಣ ಭೀತಿಗೆ ವಿಧಿಸಲಾದ ಲಾಕ್ ಡೌನ್ ಮುಖ್ಯ ಕಾರಣವಾಗಿದೆ, ಲಾಕ್ ಡೌನ್ ಸಮಯದಲ್ಲಿ ಬಹುತೇಕ ಎಲ್ಲ ಪ್ರವಾಸಿ ಸ್ಥಳಗಳನ್ನು ಬಂದ್ ಮಾಡಲಾಗಿತ್ತು.

### 2030ರ ವೇಳೆಗೆ ಜಗತ್ತಿನ 3ನೇ ಅತೀ ದೊಡ್ಡ ಆರ್ಥಿಕ ದೇಶ ಭಾರತ = CEBR ವರದಿ



# ಇತ್ತೀಚಿಗೆ ಭಾರತದ ಆರ್ಥಿಕತೆ ಬಗ್ಗೆ ಸೆಂಟರ್ ಫಾರ್ ಎಕನಾಮಿಕ್ಸ್ ಅಂಡ್ ಬಿಸಿನೆಸ್ ರಿಸರ್ಚ್ (CEBR) ವರದಿಯನ್ನು ಬಿಡುಗಡೆ ಮಾಡಿದೆ.
# ಈ ವರದಿಯ ಪ್ರಕಾರ ಭಾರತವು 2030ರ ಹೊತ್ತಿಗೆ

ಜಗತ್ತಿನ 3ನೇ ಅತೀ ದೊಡ್ಡ ಆರ್ಥಿಕ ಶಕ್ತಿಯ ದೇಶವಾಗಿ ಹೊರ ಬರಲಿದೆ ಎಂದು ತಿಳಿಸಿದೆ.

# ಈ ಹಿಂದೆ ಭಾರತವು 2019ರಲ್ಲಿ UK ಹಿಂದಾಕಿ ಜಗತ್ತಿನ 5ನೇ ದೊಡ್ಡ ಆರ್ಥಿಕತೆಯ ದೇಶವಾಗಿತ್ತು, ಆದರೆ ಪ್ರಸ್ತುತ ಈ 2020ರಲ್ಲಿ ಕೊರೊನಾ ಕಾರಣದಿಂದ 5ನೇ ಸ್ಥಾನದಿಂದ ಭಾರತ 6ನೇ ಸ್ಥಾನಕ್ಕೆ ಕೆಳಗಿಳಿದಿದೆ.

## ಪಾಕಿಸ್ತಾನಕ್ಕೆ ಚೀನಾ ದೇಶದ 50 ಸಶಸ್ತ್ರ ಡ್ರೋನ್




ಚೀನಾ ದೇಶವು 50 ವಿಂಗ್ ಲೂಂಗ್ 2 ಸಶಸ್ತ್ರ ಡ್ರೋನ್ ಗಳನ್ನು ಪಾಕಿಸ್ತಾನಕ್ಕೆ ನೀಡಲು ನಿರ್ಧಾರ ಮಾಡಿದೆ ಎಂದು ಚೀನಾ ಮಾಧ್ಯಮಗಳಿಂದ ಇತ್ತೀಚಿಗೆ ತಿಳಿದುಬಂದಿದೆ. ಈ ಅತ್ಯಾಧುನಿಕ ಡ್ರೋನ್‌ಗಳನ್ನೂ ಪಾಕಿಸ್ತಾನಕ್ಕೆ ನೀಡುವದರಿಂದ ಭಾರತಕ್ಕೆ ಸ್ವಲ್ಪ ಮಟ್ಟಿಗೆ ತೊಂದರೆಯಾಗಬಹುದು ಎಂದು ಮಾಧ್ಯಮಗಳು ತಿಳಿಸಿವೆ, ಮತ್ತು ಭಾರತದ ಮೇಲೆ ಮಾನಸಿಕ ಒತ್ತಡ ಹೇರುವುದು ಚೀನಾದ ಉದ್ದೇಶವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿಸಲಾಗಿದೆ.

## ಪ್ರಧಾನಿ ಮೋದಿಯಿಂದ ಶೀಘ್ರ ಭಾರತದ ಮೊದಲ 'ಚಾಲಕ ರಹಿತ' ರೈಲು ಸೇವೆಗೆ ಚಾಲನೆ



ಇದೆ ಡಿಸೆಂಬರ್ 28 ರಂದು ಭಾರತದ ಪ್ರಧಾನಿ ನರೇಂದ್ರ ಮೋದಿಯವರುಭಾರತದೇಶದಮೊದಲ ಸ್ವಯಂಚಾಲಿತ ಚಾಲಕ ರಹಿತ ರೈಲು ಸೇವೆಗೆ ಚಾಲನೆ ನೀಡಲಿದ್ದಾರೆ. ಈ ಚಾಲಕ ರಹಿತ ರೈಲುಗಳು ದೆಹಲಿಯ ಮೆಜೆಂಟಾ ಲೈನ್ ಮತ್ತು ಪಿಂಕ್ ಲೈನ್ ನಲ್ಲಿ ಕಾರ್ಯನಿರ್ವಹಿಸಲಿವೆ ಎಂದು ತಿಳಿದಿಬಂದಿದ್ದು, ಇದು 37 ಕಿ.ಮೀ ಉದ್ದದ ದೆಹಲಿ ಮೆಟ್ರೋ ಲೈನ್ ಇದಾಗಿದೆ.

## WHO ಕೊರೊನಾ ಮಾಹಿತಿಗಾಗಿ ಮತ್ತೆ ಮೊಬೈಲ್ ಆಯಪ್ ಆರಂಭ:




ವಿಶ್ವ ಆರೋಗ್ಯ ಸಂಸ್ಥೆಯು (WHO) COVID 19 Updates ಎಂಬ ಮೊಬೈಲ್ ಅಪ್ಲಿಕೇಶನ್ ಅನ್ನು ಸಿದ್ದಪಡಿಸಿದೆ. ಹಾಗೂ ಇದು ಕೊರೊನಾ ವೈರಸ್ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತದೆ ಮತ್ತು ಸಂಪರ್ಕವನ್ನು ಪತ್ತೆ ಮಾಡಲು ಸಹಾಯ ಮಾಡುತ್ತದೆ. ಹಾಗೂ ಸ್ಥಳೀಯ ಮಾಹಿತಿ ಬಗ್ಗೆ ಅಪ್ಡೇಟ್ಸ್ ನೀಡುತ್ತದೆ.

## ಲವ್ ಜಿಹಾದ್ ನಿಷೇಧಕ್ಕೆ ಮಧ್ಯಪ್ರದೇಶ ಸರ್ಕಾರದ ಸಚಿವ ಸಂಪುಟ ಒಪ್ಪಿಗೆ:



# ಲವ್ ಜಿಹಾದ್ ವಿರೋಧಿ ಮಸೂದೆಗೆ ಮಧ್ಯಪ್ರದೇಶದ ಸಚಿವ ಸಂಪುಟ ಸಭೆಯಲ್ಲಿ ಅಂಗೀಕಾರ ನೀಡಲಾಗಿದೆ, ಮತ್ತು ಕಾನೂನು ನಿಯಮ ಪಾಲಿಸದವರಿಗೆ ಜೈಲುಶಿಕ್ಷೆ ನೀಡಲಾಗುವದು ಎಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ರವರು ತಿಳಿಸಿದ್ದಾರೆ.

# 2020ರ ಧಾರ್ಮಿಕ ಸ್ವಾತಂತ್ರ್ಯ ಮಸೂದೆ ಅನ್ವಯ ಪ್ರಕಾರ ಮಧ್ಯಪ್ರದೇಶದ ಹಿಂದುಳಿದ ಮಹಿಳೆ ಹಾಗೂ ಪುರುಷರನ್ನು ಬಲವಂತವಾಗಿ ಮತಾಂತರ ಮಾಡಿದಲ್ಲಿ ಈ ಹೊಸ ಮಸೂದೆ ಪ್ರಕಾರ ಜೈಲುಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ ಎಂದು ಮಧ್ಯಪ್ರದೇಶದ ಗೃಹ ಮಂತ್ರಿಯಾದ ನರೋತ್ತಮ್ ಮಿಶ್ರಾ ರವರು ತಿಳಿಸಿದ್ದಾರೆ.

# ಪ್ರಸ್ತುತ ಮಧ್ಯಪ್ರದೇಶವು ಲವ್ ಜಿಹಾದ್ ಮಸೂದೆಯನ್ನು ಜಾರಿಗೆ ತಂದ 3ನೇ ರಾಜ್ಯವಾಗಿದೆ, ಮೊದಲ ಮತ್ತು ಎರಡನೇ ಸ್ಥಾನದಲ್ಲಿ ಉತ್ತರಪ್ರದೇಶ ಮತ್ತು ಹಿಮಾಚಲ್ ಪ್ರದೇಶ ರಾಜ್ಯಗಳಿವೆ.

# 28-12-2020

## ಕವಿ ಮತ್ತು ಖ್ಯಾತ ಉರ್ದು ವಿಮರ್ಶಕ ಶಂಸುರ್ ರಹಮಾನ್ ಫಾರೂಕಿ ವಿಧಿವಶ



# ಭಾರತೀಯ ಕವಿ ಮತ್ತು ಉರ್ದು ವಿಮರ್ಶಕ ಸಿದ್ಧಾಂತಿಯಾಗಿರುವ ಶಮ್ಸೂರ್ ರಹಮಾನ್ ಫಾರೂಕಿ ಅವರು ಇತ್ತೀಚಿಗೆ ತಮ್ಮ 85ನೇ ವಯಸ್ಸಿನಲ್ಲಿ ವಿಧಿವಶರಾದರು.

# 30 ಸೆಪ್ಟೆಂಬರ್ 1935 ರಂದು ಉತ್ತರ ಪ್ರದೇಶದಲ್ಲಿ ಜನಿಸಿದ ಇವರು ರಚಿಸಿದ ಕೃತಿ, ಶೇರ್ ಇ ಶೋರ್ ಅಂಗೇಝ್‌ಗಾಗಿ 1996ರಲ್ಲಿ ಸರಸ್ವತಿ ಸಮ್ಮಾನ್ ಪುರಸ್ಕಾರವು ಪಡೆದಿದ್ದಾರೆ. ಮತ್ತು ಸಾಹಿತ್ಯದ ಮೆಚ್ಚುಗೆಯ ಹೊಸ ಮಾದರಿಗಳನ್ನು ರೂಪಿಸಿದ್ದಾರೆ.

# 29-12-2020

## ಡಿಸೆಂಬರ್ 29 = ರಾಷ್ಟ್ರಕವಿ ಕುವೆಂಪು ಜನ್ಮದಿನ



ಡಿಸೆಂಬರ್ 29 ವಿಶ್ವ ಮಾನವ, ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನ, ಇವರನ್ನು ಗೌರವಿಸಲು ಪ್ರತೀ ವರ್ಷ ಅವರ ಜನ್ಮ ದಿನವನ್ನು 'ವಿಶ್ವ ಮಾನವ ದಿನ' ಎಂದು ಆಚರಣೆ ಮಾಡಲಾಗುತ್ತದೆ. ಕುವೆಂಪುರವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಇವರು 29 ಡಿಸೆಂಬರ್ 1904 ರಲ್ಲಿ ಜನಿಸಿದರು, ಹಾಗೂ ಇವರು ವಿಶ್ವ ಮಾನವ ಸಂದೇಶಗಳಾದ ಮನುಜ ಪಥ, ವಿಶ್ವಪಥ, ಸರ್ವೋದಯ, ಸಮನ್ವಯಗಳು ಈ ಜಗತ್ತೇ ಉಪಯುಕ್ತವಾದ ಸಂದೇಶಗಳಾಗಿವೆ. ಇವರಿಗೆ ದೊರೆತ ಪ್ರಶಸ್ತಿಗಳು: ಜ್ಞಾನಪೀಠ ಪುರಸ್ಕಾರ (ಶ್ರೀ ರಾಮಾಯಣ ದರ್ಶನಂ) (1968), ಕರ್ನಾಟಕ ರತ್ನ(1992), ಪದ್ಮ ವಿಭೂಷಣ(1989), ಪದ್ಮ ಭೂಷಣ (1958), ಕನ್ನಡ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಶ್ರೀರಾಮಾಯಣ ದರ್ಶನಂ) (1955), ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್. (1956), ರಾಷ್ಟ್ರಕವಿ ಪುರಸ್ಕಾರ (1964), ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. (1966), ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. (1969), ಕೇಂದ್ರ ಸಾಹಿತ್ಯ ಅಕಾಡೆಮಿಯು ಫೆಲೋಷಿಪ್ (1979), ಪಂಪ ಪ್ರಶಸ್ತಿ (1988), ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (ಮರಣೋತ್ತರ), ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ ಸೇರಿ ಹಲವು ಗೌರವಗಳಿಗೆ ಪಾತ್ರರಾಗಿದ್ದಾರೆ.

# ಕುವೆಂಪು ಅವರ 113 ನೇ ಜನ್ಮ ದಿನದಂದು, ಗೂಗಲ್ ಇಂಡಿಯಾ ಅವರ ಗೌರವಾರ್ಥ ಡೂಡಲ್ ಪ್ರದರ್ಶಿಸಿತು (2017 ಡಿಸೆಂಬರ್ 29)

## ಪ್ರಧಾನಿ ಮೋದಿಯಿಂದ 100ನೇ ಕಿಸಾನ್ ರೈಲು ಸಂಚಾರಕ್ಕೆ ಚಾಲನೆ



# ಇದೆ ಡಿಸೆಂಬರ್ 28, 2020 ರಂದು ಮಹಾರಾಷ್ಟ್ರದ ಸಾಂಗೋಲಾದಿಂದ ಪಶ್ಚಿಮಬಂಗಾಳದ ಶಾಲಿಮಾರ್ ತನಕ ಸಂಚರಿಸಲಿರುವ 100ನೇ ಕಿಸಾನ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿಜಿ ಅವರು ವಿಡಿಯೋ ಕಾನ್ಫರೆನ್ಸ್ ನಲ್ಲಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

# ಏನಿದು ಕಿಸಾನ್ ರೈಲು ? ರೈತರು ಬೆಳೆದ ಬೆಳೆಯನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸಲು ವಿಶೇಷ ದರದಲ್ಲಿ ರೈತರ ಅನುಕೂಲಕ್ಕಾಗಿ ಆರಂಭಿಸಿದ ರೈಲು ಕಿಸಾನ್ ರೈಲು ಆಗಿದೆ.

## ಐಸಿಸಿ ದಶಕದ ಕ್ರಿಕೆಟಿಗ ಪ್ರಶಸ್ತಿ, ಧೋನಿ ಮತ್ತು ವಿರಾಟ್ ಕೊಹ್ಲಿ




ಅಂತರಾಷ್ಟ್ರಿಯ ಕ್ರಿಕೆಟ್ ಸಂಸ್ಥೆಯು ತನ್ನ

ದಶಕದ ಕ್ರಿಕೆಟಿಗ ಪ್ರಶಸ್ತಿಯನ್ನು ಬಿಡುಗಡೆ ಮಾಡಿದ್ದು, ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಕಳೆದ ದಶಕದಲ್ಲಿ ತೋರಿದ ಅತ್ಯುತ್ತಮ ಪ್ರದರ್ಶನಕ್ಕಾಗಿ ಪ್ರತಿಷ್ಠಿತ ಗ್ಯಾರಿ ಸೋಬರ್ಸ್ ಪ್ರಶಸ್ತಿ ಮತ್ತು ದಶಕದ ಏಕದಿನ ಕ್ರಿಕೆಟಿಗ ಪ್ರಶಸ್ತಿಯನ್ನು ಇವರು ಪಡೆದುಕೊಂಡಿದ್ದಾರೆ, ಜೊತೆಗೆ ಭಾರತ ತಂಡದ ಮಾಜಿ ನಾಯಕ ಎಂಎಸ್ ಧೋನಿ ಐಸಿಸಿಯ ಕ್ರಿಕೆಟ್ ಸ್ಪೂರ್ತಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

# ICC ಪ್ರಕಟಿಸಿದ ದಶಕದ ಕ್ರಿಕೆಟ್ ಪ್ರಶಸ್ತಿ ಪಡೆದುಕೊಂಡವರ ವಿವರ : ದಶಕದ ಕ್ರಿಕೆಟಿಗ ಮತ್ತು ವಿರಾಟ್ ಕೊಹ್ಲಿ. ಕ್ರಿಕೆಟ್ ಸ್ಪೂರ್ತಿ ವಿರಾಟ್ ಕೊಹ್ಲಿ. ಕ್ರಿಕೆಟ್ ಸ್ಪೂರ್ತಿ ಎಂಎಸ್ ಧೋನಿ. ಟಿ20 ರಶೀದ್ ಖಾನ್. ಟೆಸ್ಟ್ ಸ್ಟೀವನ್ ಸ್ಮಿತ್. ದಶಕದ ಮಹಿಳಾ ಕ್ರಿಕೆಟರ್, ಟಿ20, ಏಕದಿನ ಆಸ್ಟ್ರೇಲಿಯಾದ ಎಲ್ಲಿಸ್ ಫೆರರ್.

## 2021ರಲ್ಲಿ ಭಾರತದ ಮಾರುಕಟ್ಟೆಯಲ್ಲಿ ಟೆಸ್ಲಾ ಕಾರು



2021ರ ಪ್ರಾರಂಭದಲ್ಲಿ ಟೆಸ್ಲಾ ಕಂಪನಿಯ ವಿದ್ಯುತ್ ಚಾಲಿತ ವಾಹನಗಳು ಭಾರತದ ಮಾರುಕಟ್ಟೆಯಲ್ಲಿ ಲಭ್ಯವಿರುವುದಾಗಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಾಹಿತಿಯನ್ನು ನೀಡಿದ್ದಾರೆ. 2021ರ ಜೂನ್ ತಿಂಗಳಿನಲ್ಲಿ ಭಾರತದ ಮಾರುಕಟ್ಟೆಯಲ್ಲಿ ಟೆಸ್ಲಾ ಕಂಪನಿಯ ಕಾರುಗಳು ಸಿಗುವ ಸಾಧ್ಯತೆ ಕುರಿತು ತಿಳಿಸಿದ್ದಾರೆ.

## ಚೀನಾದ ರಿಮೋಟ್ ಸೆನ್ಸಿಂಗ್ ಉಪಗ್ರಹ ಉಡಾವಣೆ ಯಶಸ್ವಿ



ಇತ್ತೀಚಿಗೆ ಚೀನಾ ದೇಶವು ಜಿಯುಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ, ರಿಮೋಟ್ ಸೆನ್ಸಿಂಗ್ ಉಪಗ್ರಹ, ಹಾಗೂ ಮೈಕ್ರೋ ಮತ್ತು ನ್ಯಾನೊ ತಂತ್ರಜ್ಞಾನ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿರುವುದಾಗಿ ಚೀನಾದ ಸರ್ಕಾರಿ ಸುದ್ದಿ ಸಂಸ್ಥೆಯಾದ ಕ್ಸಿನ್ಹುವಾ ಮಾಹಿತಿಯನ್ನು ನೀಡಿದೆ. ಈ ಉಪಗ್ರಹಗಳಿಂದ ಭೂ ಸಂಪನ್ಮೂಲಗಳ ಸಮೀಕ್ಷೆ ಮತ್ತು ಬೆಳೆ ಇಳುವರಿ ಅಂದಾಜು, ವೈಜ್ಞಾನಿಕ ಪ್ರಯೋಗಗಳು ಜೊತೆಗೆ ವಿಪತ್ತು ತಡೆಗಟ್ಟುವಿಕೆ ದೃಷ್ಟಿಯಿಂದ ದೇಶವನ್ನು ಕಾಪಾಡಲು ಈ ಉಪಗ್ರಹವು ಸಹಕರಿಸಲಿದೆ ಎಂದು ಸುದ್ದಿ ಸಂಸ್ಥೆ ತಿಳಿಸಿದೆ.

## 21ನೇ ವಯಸ್ಸಿನಲ್ಲೇ ಮೇಯರ್ ಹುದ್ದೆಗೇರಿದ ಕೇರಳದ ಮಹಿಳೆ




# ಕೇರಳ ರಾಜ್ಯದ ತಿರುವನಂತಪುರ ಮಹಾನಗರ ಪಾಲಿಕೆ ಮೇಯರ್ ಆಗಿ 21 ವರ್ಷದ ಆರ್ಯ ರಾಜೇಂದ್ರನ್ ರವರು ನೇಮಕಗೊಂಡಿದ್ದಾರೆ, ಪ್ರಸ್ತುತ ಇವರು ಬಿಎಸ್‌ಸಿ ಗಣಿತಶಾಸ್ತ್ರದ ಕಾಲೇಜು ವಿದ್ಯಾರ್ಥಿನಿಯಾಗಿದ್ದಾರೆ, ಹಾಗೂ ಅತಿ ಚಿಕ್ಕ ವಯಸ್ಸಿನಲ್ಲೇ ಮೇಯರ್ ಸ್ಥಾನ ಪಡೆದ ವ್ಯಕ್ತಿ ಇವರಾಗಿದ್ದಾರೆ.

# ತಿರುವನಂತಪುರ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಸಿಪಿಐ ಎಂ ನೇತೃತ್ವದ ಎಲ್ ಡಿಎಫ್, ಬಿಜೆಪಿ ಹಾಗೂ ಯುಡಿಎಫ್, ಪಕ್ಷೇತರರು ಸೇರಿ, ಒಟ್ಟು 100 ಸದಸ್ಯರು ಪಾಲಿಕೆಯ ಮೇಯರ್ ಸ್ಥಾನ ಪಡೆಯಲು ಪ್ರಯತ್ನಿಸುತ್ತಿದ್ದರು ಅದರಲ್ಲಿ ಸಿಪಿಐಎಂ ಸದಸ್ಯೆ ಆಗಿರುವ ಆರ್ಯ ರಾಜೇಂದ್ರನ್ ರವರು 54 ಮತಗಳನ್ನು ಪಡೆದು ಮೇಯರ್ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.

# 30-12-2020

## ಅರುಣಾಚಲ ಪ್ರದೇಶದಲ್ಲಿ ಹೊಸ ಪ್ರಭೇದದ ಹಾವು ಪತ್ತೆಯಾಗಿದೆ



# 2019 ಜುಲೈನಲ್ಲಿ ಸಂಶೋಧಕರು ಅರುಣಾಚಲ ಪ್ರದೇಶದ ಕಮಲಂಗ್ ಹುಲಿ

ಸಂರಕ್ಷಣಾ ಅರಣ್ಯದ ಕಾಡಿನೊಳಗೆ ಕಾರ್ಯಾಚರಣೆ ನಡೆಸುವ ವೇಳೆಯಲ್ಲಿ ಹೊಸ ಪ್ರಭೇದದ ಹಾವನ್ನು ಪತ್ತೆಮಾಡಿದ್ದಾರೆ, ಮತ್ತು ಇದಕ್ಕೆ "ಪರಿಯಾಸ್ ಕಡುರೈ" ಎಂಬ ಹೆಸರಿನಿಂದ ಕರೆಯಲಾಗುತ್ತದೆ ಹಾಗೂ ಇದು ಹೊಸ ಪ್ರಭೇದದ ವಿಷರಹಿತ ಹಾವಾಗಿದೆ.

# ವನ್ಯಜೀವಿ ಚಿತ್ರನಿರ್ಮಾಪಕ, ಹಾಗೂ ನ್ಯಾಷನಲ್ ಜಿಯೊಗ್ರಾಫಿಕ್ ಛಾಯಾಚಿತ್ರಗಾರರಾದ ಸಂದೇಶ್ ಕಡೂರ್ ಅವರ ಹೆಸರನ್ನು ಹೊಸ ಪ್ರಭೇದದ ಹಾವಿಗೆ ಸೂಚಿಸಿದ್ದಾರೆ.

# ಈ ಹೊಸ ಪ್ರಭೇದದ ಹಾವು ಬಸವನ ಹುಳುಗಳನ್ನೂ ತಿಂದು ಜೀವಿಸುತ್ತವೆ, ಮತ್ತು ಇದಕ್ಕೆ ಸ್ನೈಲ್ ಈಟಿಂಗ್ ಸ್ನೇಕ್ಸ್ ಎಂದು ಕರೆಯಲಾಗುತ್ತದೆ.

## ಫುಟ್ಬಾಲ್ ಆಟಗಾರ ರೊನಾಲ್ಡೊಗೆ "ಪ್ಲೇಯರ್ ಆಫ್ ದಿ ಸೆಂಚುರಿ" ಗೌರವ ಪ್ರಶಸ್ತಿ




ಖ್ಯಾತ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊಗೆ, 'ಪ್ಲೇಯರ್ ಆಫ್ ದಿ ಸೆಂಚುರಿ' ಗೌರವ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ ಎಂದು ಗ್ಲೋಬ್ ಸಾಕರ್ ಅವಾರ್ಡ್ಸ್ ತನ್ನ ಟ್ವಿಟರ್ ಖಾತೆಯಲ್ಲಿ ಪ್ರಕಟಣೆ ಮಾಡಿದೆ. ಈ ಹಿಂದೆ ಈ ಪ್ರಶಸ್ತಿಯನ್ನು ಬಾರ್ಸಿಲೋನಾದ ಲಿಯೋನೆಲ್ ಮೆಸ್ಸಿ, ಲಿವರ್‌ಪೂಲ್‌ನ ಮೊಹಮ್ಮದ್ ಸಲಾಹ್ ರವರು ಪಡೆದುಕೊಂಡಿದ್ದರು. ಈಗ ರೊನಾಲ್ಡೊ ಅವರಿಗೂ ಕೂಡ ಈ ಪ್ರಶಸ್ತಿ ಪುರಸ್ಕಾರ ಲಭಿಸಿದೆ.

## 2020ರ ಡಿಜಿಟಲ್ ಇಂಡಿಯಾ ಪ್ರಶಸ್ತಿಯನ್ನು, ಸಾಂಕ್ರಾಮಿಕ ವಿಭಾಗದಲ್ಲಿ ಬಿಹಾರ ರಾಜ್ಯ ಪಡೆದಿದೆ.




# ಪ್ರತಿ ವರ್ಷದಂತೆ 2020 ನೇ ಸಾಲಿನಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದರವರು ನೀಡುವ ಡಿಜಿಟಲ್ ಇಂಡಿಯಾ ಪ್ರಶಸ್ತಿಯ ಸಾಂಕ್ರಾಮಿಕ ವಿಭಾಗದಲ್ಲಿ ಬಿಹಾರದ ಮುಖ್ಯಮಂತ್ರಿ ಸಚಿವಾಲಯ ಪಡೆದಿದೆ.

# ಬಿಹಾರ ರಾಜ್ಯದಲ್ಲಿ 21 ಲಕ್ಷಕ್ಕೂ ಹೆಚ್ಚು ಕಾರ್ಮಿಕರನ್ನು ಆರ್ಥಿಕ ಸಹಾಯಕ್ಕಾಗಿ ಸಾಂಕ್ರಾಮಿಕ ವರ್ಗದ ಅಡಿಯಲ್ಲಿ ಆಯ್ಕೆ ಮಾಡಲಾದ ಕಾರಣ ಬಿಹಾರ ಸಚಿವಾಲಯವನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ

## ದೇಶದ ಮೊದಲ ಪರಾಗಸ್ಪರ್ಶಕ ಪಾರ್ಕ್ ಉತ್ತರಾಖಂಡದಲ್ಲಿ ಆರಂಭ




# ದೇಶದ ಮೊತ್ತ ಮೊದಲ ಪರಾಗಸ್ಪರ್ಶಕ ಪಾರ್ಕ್ ಅನ್ನು ಇತ್ತೀಚಿಗೆ ಉತ್ತರಾಖಂಡ ರಾಜ್ಯದ ಹಲ್ದ್ವಾನಿ ಎಂಬಲ್ಲಿ 4 ಎಕರೆ ವಿಸ್ತೀರ್ಣದ ಜಾಗದಲ್ಲಿ ಚಿಟ್ಟೆತಜ್ಞ ಪೀಟರ್ ಸ್ಮೆಟಾಸೆಕ್ ಅವರು ಉದ್ಘಾಟಣೆಮಾಡಿದರು.

# ಈ ಪಾರ್ಕ್ ನಲ್ಲಿ 40ಕ್ಕೂ ಅಧಿಕ ಜಾತಿಗಳ ಚಿಟ್ಟೆಗಳು, ಜೇನ್ನೊಣಗಳು, ಪಕ್ಷಿಗಳು ಮತ್ತು ಕೀಟಗಳಿಂದ ಕೂಡಿದ ಪಾರ್ಕ್ ತಯಾರಾಗಿದೆ, ಮತ್ತು ಇದು ದೇಶದ ಮೊದಲ ಪರಾಗಸ್ಪರ್ಶಕ ಪಾರ್ಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

# ಬೇರೆ ಬೇರೆ ಜಾತಿಯ ಪರಾಗಸ್ಪರ್ಶಕ ಜೀವಿಗಳ ಸಂರಕ್ಷಣೆಯ ಬಗ್ಗೆ ಜನಸಾಮಾನ್ಯರಿಗೆ ತಿಳಿಸುವ ಮುಖ್ಯ ಉದ್ದೇಶ ಈ ಪಾರ್ಕ್ ಹೊಂದಿರುವುದಾಗಿ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂಜೀವ ಚತುರ್ವೇದಿ ಅವರು ಮಾಹಿತಿ ನೀಡಿದ್ದಾರೆ.

# 31-12-2020

## ಲಡಾಖ್‌ನಲ್ಲಿ ಹವಾಮಾನ ಕೇಂದ್ರ ಉದ್ಘಾಟಣೆ



# ಇತ್ತೀಚೆಗೆ ಕೇಂದ್ರದ ಭೂ ವಿಜ್ಞಾನ ಸಚಿವ ಡಾ.ಹರ್ಷ್ ವರ್ಧನ್ ಅವರು ಕೇಂದ್ರಾಡಳಿತ ಪ್ರದೇಶವಾದ ಲಡಾಖ್

ನಲ್ಲಿ ಹವಾಮಾನ ಕೇಂದ್ರವನ್ನು ಉದ್ಘಾಟಣೆ ಮಾಡಿದರು. ಇದು ಲಡಾಖ್‌ನ ಮೊದಲ ಹವಾಮಾನ ಕೇಂದ್ರವಾಗಿದ್ದು, ಈ ಹವಾಮಾನ ಕೇಂದ್ರದಿಂದ ಸುತ್ತಮುತ್ತಲಿನ ಪ್ರದೇಶದ ಹವಾಮಾನ ಮುನ್ಸೂಚನೆಯನ್ನು ಪಡೆಯಲು ಸಹಾಯವಾಗಲಿದೆ.
# ಭಾರತದ ಅತಿ ಎತ್ತರದ ಹವಾಮಾನ ಕೇಂದ್ರ ಇದಾಗಿದ್ದು, ಇದು ಸುಮಾರು 3,500 ಮೀಟರ್ ಎತ್ತರದ ಪ್ರದೇಶದಲ್ಲಿದೆ.
# ಈ ಹವಾಮಾನ ಕೇಂದ್ರವು ಕಾರ್ಗಿಲ್ ಮತ್ತು ಲೇಹ್ ನಂತಹ ಜಿಲ್ಲೆಗಳಿಗೆ ಹವಾಮಾನ ಮುನ್ಸೂಚನೆಯನ್ನು ಒದಗಿಸುತ್ತದೆ. ಜೊತೆಗೆ ಪ್ರವಾಸಿ ಸ್ಥಳಗಳಾದ ನುಬ್ರಾ, ಡ್ರಾಸ್, ಪಾಂಗೊಂಗ್ ಸರೋವರ, ಖಾಲ್ಸಿ, ಪ್ರದೇಶಗಳ ಹವಾಮಾನ ಮುನ್ಸೂಚನೆಯನ್ನು ಪಡೆಯಲು ಅನುಕೂಲವಾಗಿದೆ.
# ಪ್ರಸ್ತುತ ಭಾರತೀಯ 6 ಪ್ರಾದೇಶಿಕ ಹವಾಮಾನ ಕೇಂದ್ರಗಳು ಕೋಲ್ಕತಾ, ಗುವಾಹಟಿ, ಮುಂಬೈ, ಚೆನ್ನೈ ಮತ್ತು ನವದೆಹಲಿ, ಹಾಗೂ ನಾಗ್ಪುರದಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ.

## ಜಮ್ಮು & ಕಾಶ್ಮೀರದ ಮೊದಲ ಬಸ್ ಚಾಲಕಿ ಪೂಜಾ ದೇವಿ



# ಜಮ್ಮು & ಕಾಶ್ಮೀರದ ಮೊದಲ ಮಹಿಳಾ ಬಸ್ ಚಾಲಕಿ ಎಂಬ ಖ್ಯಾತಿಗೆ ಪೂಜಾ ದೇವಿ ಭಾಜನರಾಗಿದ್ದಾರೆ.
# ಜಮ್ಮು ಕಥುವಾ ಮಾರ್ಗದಲ್ಲಿ ಪ್ರಯಾಣಿಕರು ಚಲಿಸುವ ಬಸ್ ಚಾಲನೆ ಮಾಡುತ್ತಿದ್ದಾರೆ.
# ಕೇಂದ್ರ ಸಚಿವರಾದ ಜಿತೇಂದ್ರ ಸಿಂಗ್ ರವರು ಪೂಜಾ ದೇವಿ ಅವರ ಸಾಧನೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

## ಭಾರತ ಭೂತಾನ್ ಬಾಹ್ಯಾಕಾಶ ಬಳಕೆಯ ಒಪ್ಪಂದ



# ಬಾಹ್ಯಾಕಾಶವನ್ನು ಶಾಂತಿಯುತವಾಗಿ ಬಳಸುವ ಕುರಿತ ಒಪ್ಪಂದಕ್ಕೆ 19 ನವೆಂಬರ್ 2020 ರಂದು ಭಾರತ ಮತ್ತು ಭೂತಾನ್ ಎರಡು ದೇಶಗಳು ಒಪ್ಪಂದಕ್ಕೆ ಸಹಿ ಹಾಕಿವೆ, ಎಂದು ಕೇಂದ್ರ ಸಚಿವ ಸಂಪುಟ ತಿಳಿಸಿದೆ.
# ಈ ಬಾಹ್ಯಾಕಾಶ ಒಪ್ಪಂದದಿಂದ ಉಪಗ್ರಹ ಸಂಚರಣೆ ಮತ್ತು ಬಾಹ್ಯಾಕಾಶ ಪರಿಶೋಧನೆ ಕ್ಷೇತ್ರದಲ್ಲಿ ಅನ್ವೇಷಿಸಲು ಅವಕಾಶಗಳು ಸಿಗುತ್ತವೆ ಮತ್ತು ದೇಶಗಳ ನಡುವೆ ಬಾಹ್ಯಾಕಾಶ ಬಳಕೆಯನ್ನು ನಿರ್ಧರಿಸಲು ಅನುಕೂಲವಾಗುತ್ತದೆ ಎಂದು ಎರಡು ದೇಶಗಳು ತಿಳಿಸಿವೆ.
# ಈ ಬಾಹ್ಯಾಕಾಶ ಬಳಕೆಯ ಒಪ್ಪಂದವು ಚಂದ್ರ ಮತ್ತು ಬೇರೆ ಆಕಾಶಕಾಯಗಳ ಬಳಕೆಯನ್ನು ಶಾಂತಿಯುತ ಕಾರ್ಯಗಳಿಗೆ ಮಾತ್ರ ಬಳಸಿಕೊಳ್ಳಬಹುದಾಗಿದೆ, ಹಾಗೂ ಬಾಹ್ಯಾಕಾಶದಲ್ಲಿ ಶಸ್ತ್ರಾಸ್ತ್ರಗಳನ್ನು ಇಡುವುದನ್ನು ಈ ಒಪ್ಪಂದ ನಿಷೇಧ ಮಾಡಿದೆ.

## ಆತ್ಮ ನಿರ್ಭರ ಭಾರತ್ ಯೋಜನೆ ಅಡಿಯಲ್ಲಿ ನಿರ್ಮಿತವಾದ ಆಕಾಶ್ ಕ್ಷಿಪಣಿ ರಫ್ತು ಮಾಡಲು ಸಂಪುಟ ಅನುಮೋದನೆ




# ಆತ್ಮ ನಿರ್ಭರ ಭಾರತ್ ಯೋಜನೆ ಅಡಿಯಲ್ಲಿ ತಯಾರಾದ ದೇಶೀ ಆಕಾಶ್ ಕ್ಷಿಪಣಿ ರಫ್ತು ಮಾಡಲು ಕೇಂದ್ರ ಸಚಿವ ಸಂಪುಟ ಸಭೆಯಿಂದ ಚಾಲನೆ ನೀಡಲಾಗಿದೆ.
# ಈ ದೇಶೀ ನಿರ್ಮಿತ ಆಕಾಶ್ ಕ್ಷಿಪಣಿ ಇಂದ 5 ಬಿಲಿಯನ್ ರಕ್ಷಣಾ ರಫ್ತು ಗುರಿಯನ್ನು ಸಾಧಿಸಲು ಮತ್ತು ವಿದೇಶಗಳೊಂದಿಗೆ ಒಳ್ಳೆಯ ಸ್ನೇಹವನ್ನು ಬೆಳೆಸಲು ಉದ್ದೇಶಿಸಿಸಲಾಗಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ರವರು ಟ್ವೀಟ್ ಮಾಡುವ ಮೂಲಕ ತಿಳಿಸಿದ್ದಾರೆ, ಹಾಗೂ ಬೇರೆ ಬೇರೆ ರೀತಿಯ ಕ್ಷಿಪಣಿಗಳನ್ನು ತಯಾರಿಸುವ ಸಾಮರ್ಥ್ಯವನ್ನು ಆತ್ಮ ನಿರ್ಭರ ಭಾರತ್ ಯೋಜನೆ ಹೊಂದಿದೆ ಎಂದು ತಿಳಿಸಿದ್ದಾರೆ.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App